# ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಜುಲೈ, ೨೦೧೪ ಸಂಪುಟ: ೩ ಸಂಚಿಕೆ ೧೨

ಸಂಪಾದಕ : ಡಿ.ಎಸ್.ನಾಗಭೂಷಣ

ಚಂದಾ : ವಾರ್ಷಿಕ: ರೂ. ೧೫೦/-(ವ್ಯಕ್ತಿಗಳಿಗೆ) ರೂ.೨೫೦/-(ಸಂಸ್ಥೆ/ಗ್ರಂಥಾಲಯಗಳಿಗೆ) ಬಿಡಿ ಪ್ರತಿ: ರೂ. ೨೦/-

ವಿಳಾಸ: ಎಚ್.ಐ.ಜಿ-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

ದೂ: ೦೮೧೮೨-೨೪೮೫೭೪ ಸಂಚಾರಿ: ೯೪೪೯೨ ೪೨೨೮೪ *ಈ ಮೇಲ್:* dsnagabhushana@gmail.com

## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ನರೇಂದ್ರ ಮೋದಿಯವರು ಪ್ರಧಾನ ಮಂತ್ರಿಯಾಗಿ ಅಧಿಕಾರ ಸ್ವೀಕರಿಸಿ ಒಂದು ತಿಂಗಳು ಮುಗಿಯಿತು. ಹಾಗೇ ಸಿದ್ಧರಾಮಯ್ಯನವರೂ ರಾಜ್ಯದ ಮುಖ್ಯಮಂತ್ರಿಯಾಗಿ ಈಗ ಒಂದು ವರ್ಷ ಅವಧಿಯನ್ನು ಪೂರೈಸಿದ್ದಾರೆ. ಈ ಸಂದರ್ಭದಲ್ಲಿ ರಾಜಕೀಯವಾಗಿ ಪರಸ್ಪರ ವಿರುದ್ಧ ನೆಲೆಗಳಲ್ಲಿರುವ ಇವರಿಬ್ಬರ ಕಾರ್ಯಶೈಲಿಗಳನ್ನೊಮ್ಮೆ ನಿರುಕಿಸುವುದು ಇಲ್ಲಿ ಉಚಿತವಾದೀತು.

ಮೋದಿ ಆರೆಸ್ಸೆಸ್ ಹಿನ್ನೆಲೆಯವರು. ಗುಜರಾತ್ ಮುಖ್ಯಮಂತ್ರಿಯಾಗಿ ೨೦೦೨ರ ಕೋಮು ಹತ್ಯಾಕಾಂಡದಲ್ಲಿನ ಅವರ ಪಾತ್ರ ವಿವಾದಾಸ್ಪದವಾದುದು. ಇನ್ನು ಜನವಿರೋಧಿಯಾದದ್ದೆಂದು ಹೇಳಲಾಗುವ ಅವರ 'ಅಭಿವೃದ್ಧಿ' ಮಾದರಿ ಈಗಾಗಲೇ ಸಾಕಷ್ಟು ಚರ್ಚೆಗೊಳಗಾಗಿದೆ. ಈ ಎಲ್ಲ 'ಚರಿತ್ರೆ'ಯ ಭಾರ ಹೊತ್ತುಕೊಂಡು ಮೋದಿ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡವರು. ಹೀಗಾಗಿ ಅವರು ಪ್ರಧಾನಿಯಾಗುವ ಮುನ್ನ ಮತ್ತು ಪ್ರಧಾನಿಯಾದ ಸಂದರ್ಭದಲ್ಲೂ ಹಲವರಲ್ಲಿ ಹಲವು ಆತಂಕಗಳು ಹುಟ್ಟಿದ್ದು ಸಹಜ. ಆದರೆ ಈ ಒಂದು ತಿಂಗಳಲ್ಲಿ ನಾವು ನೋಡುತ್ತಿರುವ ಮೋದಿ ಬೇರೆಯಾಗಿಯೇ ಕಾಣುತ್ತಿದ್ದಾರೆ. ಗುಜರಾತ್ ಮುಖ್ಯಮಂತ್ರಿಯಾಗಿ ಮಾತ್ರವಲ್ಲ, ಇತ್ತೀಚಿನ ಚುನಾವಣಾ ಪ್ರಚಾರ ಭಾಷಣಗಳಲ್ಲಿ ನಮಗೆ ದೊರೆತ 'ಅನುಮಾನಾಸ್ಪದ' ವ್ಯಕ್ತಿತ್ವದ ಚಹರೆಗಳು ಇದ್ದಕ್ಕಿದ್ದಂತೆ ಕಾಣೆಯಾಗಿರುವುದು ಸಹಜವಾಗಿಯೇ ಹಲವು ಟೀಕಾಕಾರರಲ್ಲಿ ಆಶ್ಚರ್ಯವನ್ನು ಹುಟ್ಟಿಸಿದೆ. ಕೆಲವರಲ್ಲಿ ಇನ್ನಷ್ಟು ಅನುಮಾನಗಳನ್ನೂ...

### ಒಂದು ಒಳ್ಳೆಯ ಆರಂಭ

ಮೋದಿ ಅಧಿಕಾರದ ಪ್ರತಿಜ್ಞಾ ಸ್ವೀಕಾರದ ಮುನ್ನ ರಾಜ್‌ಘಾಟ್‌ಗೆ ತೆರಳಿ ಮಹಾತ್ಮ ಗಾಂಧಿಯವರ ಸಮಾಧಿಗೆ ಗೌರವ ಸಲ್ಲಿಸಿ ಬಂದರು. ಪ್ರಧಾನ ಮಂತ್ರಿಯ ಕುರ್ಚಿಯ ಮೇಲೆ ಕೂರುವ ಮುನ್ನ ಗಾಂಧೀಜಿಯ ಚಿತ್ರಕ್ಕೆ ನಮಸ್ಕರಿಸಿ ಹೋದರು. ನಂತರ ತಮ್ಮ ಕಾಲಿಗೆ ಬೀಳಲು ಬರುವ ಜನರಿಗೆ ಹಾಗೆ ಮಾಡದಂತೆ ಸೂಚಿಸಿದರು. ಕೆಲ ಬಾಲಬಡುಕರು ಗುಜರಾತ್‌ನ ಶಾಲಾ ಪಠ್ಯಗಳಲ್ಲಿ ಅವರನ್ನು ಕುರಿತ ಪಾಠಗಳನ್ನು ಸೇರಿಸಲು ಹೋದಾಗ ಖಂಡತುಂಡವಾಗಿ ಬೇಡವೆಂದರು. ಹಿತಮಿತವಾದ ಚೌಕಟ್ಟಿನಲ್ಲಿ(ಆದರೆ ಮೇಲ್ಜಾತಿಗಳೇ ಪ್ರಧಾನವಾದ!) ತಮ್ಮ ಮಂತ್ರಿಮಂಡಲ ರಚಿಸಿ ಮಹಿಳೆಯರಿಗೆ ಎಂದೂ ಇಲ್ಲದಷ್ಟು ಪ್ರಾತಿನಿಧ್ಯ ನೀಡಿದರು. ಹಿಂದಿನ ಸರ್ಕಾರ ನಿರ್ಧಾರಗಳನ್ನು ಮುಂದೂಡಲೆಂದೇ ರಚಿಸಿಕೊಂಡಿದ್ದ ಅಂತರ ಖಾತೆ ಸಮಿತಿಗಳನ್ನು ಮತ್ತು ವಿಶೇಷ ಸಚಿವ ಗುಂಪುಗಳನ್ನು ವಿಸರ್ಜಿಸಿದರು. ಮಂತ್ರಿಗಳು ತಮ್ಮ ಸಂಬಂಧಿಕರಾರನ್ನೂ ತಮ್ಮ ಆಪ್ತ ಸಿಬ್ಬಂದಿಯನ್ನಾಗಿ ನೇಮಿಸಿಕೊಳ್ಳಕೂಡದೆಂದು ಸೂಚಿಸಿದರು. ಸಚಿವರಿಗೆ ಮತ್ತು ಸಚಿವಾಲಯದ ಸಿಬ್ಬಂದಿಗೆ ಕಟ್ಟುನಿಟ್ಟಿನ ಕೆಲಸದ ವೇಳೆಯನ್ನು ನಿಗದಿಪಡಿಸಿ ಎಲ್ಲರಿಗಿಂತ ಮುಂಚೆ ತಾವೇ ಕಛೇರಿಗೆ ಬಂದು ಕೂರಲಾರಂಭಿಸಿದರು. ಕಡತಗಳ ವಿಲೇವಾರಿಗೆ ಗಡುವನ್ನು ನಿರ್ಧರಿಸಿದರು. ಮೊದಲ ಸಚಿವ ಸಂಪುಟದ ಸಭೆಯಲ್ಲೇ ವಿದೇಶಿ ಬ್ಯಾಂಕುಗಳಲ್ಲಿರುವ ಕಪ್ಪು ಹಣವನ್ನು ವಾಪಸ್ ತರಲು ಹಿಂದಿನ ಸರ್ಕಾರ ಎರಡು ವರ್ಷಗಳಿಂದ ರಚಿಸಲು ತಾರಮ್ಮಯ್ಯ ಆಡುತ್ತಿದ್ದ ವಿಶೇಷ ತನಿಖಾ ತಂಡ ರಚಿಸುವ ನಿರ್ಧಾರ ಕೈಗೊಂಡಿತು. ಸಂಸತ್ತಿನ ಮೊದಲ ಅಧಿವೇಶನದಲ್ಲಿ 'ಪ್ರಜಾಪ್ರಭುತ್ವದಲ್ಲಿ ಸರ್ಕಾರ ನಡೆಸುವುದು ಕೇವಲ ಆಡಳಿತ ಪಕ್ಷದ ಹೊಣೆಯಲ್ಲ; ವಿರೋಧ ಪಕ್ಷಗಳೂ ಅದರಲ್ಲಿ ಪಾಲ್ಗೊಳ್ಳಬೇಕು' ಎಂದು ಹೇಳುತ್ತಾ ವಿರೋಧ ಪಕ್ಷಗಳನ್ನು ಬೆಚ್ಚಿ ಬೀಳಿಸಿ, ಅವುಗಳಲ್ಲಿ ವಿಚಿತ್ರ ಪುಳಕವನ್ನುಂಟು ಮಾಡಿದರು.

ಹೀಗೆ ಮೋದಿ ತಮ್ಮ ಟೀಕಾಕಾರರ ನಿರೀಕ್ಷೆಗಳಿಗೆ ವಿರುದ್ಧವಾಗಿ ಓರ್ವ ಹಿರಿಯ ರಾಜಕೀಯ ಮುತ್ಸದ್ದಿಯ ಮತ್ತು ಅದಕ್ಕಿಂತ ಹೆಚ್ಚಾಗಿ, ಅವರ ಮಾತುಗಳಲ್ಲೇ ಹೇಳುವುದಾದರೆ, 'ದಕ್ಷ ದೇಶಸೇವಕ'ನ ಚಿತ್ರವೊಂದನ್ನು ತಮ್ಮ ಬಗ್ಗೆ ಕಟ್ಟಿಕೊಡುವಲ್ಲಿ ಯಶಸ್ವಿಯಾಗಿದ್ದಾರೆ. ಇದಕ್ಕಿಂತ ಒಳ್ಳೆಯ ಆರಂಭವನ್ನು ಹೊಸ ಮತ್ತು ಹಲವು ಆತಂಕಗಳ ಹುಟ್ಟಿಸಿಯೇ ಅಧಿಕಾರ ವಹಿಸಿಕೊಂಡ ಪ್ರಧಾನಮಂತ್ರಿಯಿಂದ ಯಾರೂ ನಿರೀಕ್ಷಿಸಲಾರರು.

### ಅನುಮಾನಾಸ್ಪದ ನಡೆ-ನಿರ್ಧಾರಗಳು

ಆದರೆ ಇದು ಒಂದು ತಿಂಗಳ, ಕೇವಲ ಒಂದು ತಿಂಗಳ ಚಿತ್ರ ಮಾತ್ರ. ಇದೆಲ್ಲವನ್ನೂ ಮೋದಿ ತಮ್ಮ ಬಗೆಗಿರುವ ಆತಂಕಗಳನ್ನು ದೂರಮಾಡಲೆಂದೇ ಪ್ರಜ್ಞಾಪೂರ್ವಕವಾಗಿ ಮಾಡಿರಬಹುದೆಂದು ಸಂದೇಹಿಸಲೂ ಅವರ ಚರಿತ್ರೆ ಆಸ್ಪದ ಮಾಡಿಕೊಡುತ್ತದೆ ಎಂಬುದೂ ನಿಜ. ಅವರು ನಿಜವಾಗಿ 'ಕೆಲಸ' ಮಾಡಲು ಅರಂಭಿಸಿದಾಗ ಅವರ ವ್ಯಕ್ತಿತ್ವದ, ತರಬೇತಿಯ ಅಂತರ್ಗತ ಗುಣಗಳು 'ಕೆಲಸ' ಮಾಡತೊಡಗಿದಾಗ ಅವರ ನಿರ್ಧಾರಗಳು ಹೇಗಿರುತ್ತವೆ ಎಂಬುದನ್ನು ಇನ್ನೂ ಕಾದು ನೋಡಬೇಕಿದೆ. ಈ ಸಂದೇಹಕ್ಕೆ ಪುಷ್ಟಿ ಕೊಡುವಂತಹ ಕೆಲವು ಸೂಚನೆಗಳೂ ಈ ಒಂದು ತಿಂಗಳಲ್ಲಿ ಕಾಣಿಸಿಕೊಂಡಿವೆ. ಅವರು ಅಧಿಕಾರ ವಹಿಸಿಕೊಂಡ ದಿನವೇ ಸರ್ಕಾರಿ ಸಂವಹನಗಳಲ್ಲಿ ಹಿಂದಿ ಭಾಷೆಗೆ ಪ್ರಾಶಸ್ತ್ಯ ನೀಡಬೇಕೆಂಬ ಆದೇಶ ಹೊರಡಿಸಿ ಮತ್ತು ನಂತರದ ಎರಡೇ ದಿನಗಳಲ್ಲಿ ಕಾಶ್ಮೀರದ ಸ್ವಾಯತ್ತತ್ತೆಗೆ ಸಂಬಂಧಿಸಿದ ವಿಧಿಯ ಬಗ್ಗೆ ಹುಸಿ ಚರ್ಚೆಗೆ ಇಂಬು ಕೊಟ್ಟು ತಮ್ಮ ಪಕ್ಷದ ರಾಷ್ಟ್ರೀಯತೆಯ ಕಲ್ಪನೆಯ ಸಂಕುಚಿತತೆಯ ಪರಿಚಯ ಮಾಡಿಕೊಟ್ಟಿದ್ದಾರೆ. ಇನ್ನು ಸಚಿವ ಸಂಪುಟದ ಸದಸ್ಯರ ಕಾರ್ಯ ಸ್ವಾಯತ್ತತೆಯನ್ನು ಧಿಕ್ಕರಿಸಿದಂತೆ ವಿವಿಧ ಖಾತೆಗಳ ಕಾರ್ಯದರ್ಶಿಗಳ ಸಭೆ ಕರೆದು ಸರ್ಕಾರದ ನಿರ್ಧಾರಗಳಿಗೆ ಸಂಬಂಧಪಟ್ಟಂತೆ ಅವರೊಂದಿಗೆ ನೇರ ಸಂಪರ್ಕದ ಹಾದಿಯನ್ನು ನಿರ್ಮಿಸಿಕೊಂಡು ಗುಜರಾತ್‌ನಲ್ಲಿ ಪ್ರದರ್ಶಿಸಿದ ಕೇಂದ್ರೀಕೃತ ನಾಯಕತ್ವದ ಅಪಾಯಕಾರಿ ಗುಣದ ಸುಳಿವು ನೀಡಿದ್ದಾರೆ. ಹಾಗೇ, ಅವರ ಅಧಿಕಾರ ಸ್ವೀಕಾರದ ಬೆನ್ನಲ್ಲೇ ಅಪಶಕುನದಂತೆ, ಪುಣೆಯಲ್ಲಿ ಕೆಲ ಹಿಂದೂ ಕೋಮುವಾದಿ ಸಂಘಟನೆಗಳಿಂದ ನಡೆದ ಓರ್ವ ಅಮಾಯಕ ಮುಸ್ಲಿಂ ಯುವಕನ ಹತ್ಯೆಯ ಬಗ್ಗೆ ಒಂದು ಖಂಡನೆಯ ಮಾತನಾಡುವ ತುರ್ತು ಸಾಂದರ್ಭಿಕ ಜವಾಬ್ದಾರಿಯ ಪರಿವೆಯಿಲ್ಲದೆ ರಾಜ್ಯದಿಂದ 'ವರದಿ' ತರಿಸಿಕೊಳ್ಳುವ ಔಪಚಾರಿಕ ಮಾತುಗಳನ್ನಾಡಿ ತಮ್ಮ ರಾಷ್ಟ್ರೀಯತೆಯ ಹಿಂದೂತ್ವದ ಅಪಾಯಗಳ ಸೂಚನೆ ನೀಡಿದ್ದಾರೆ.

ಎಲ್ಲಕ್ಕಿಂತ ಮುಖ್ಯವಾಗಿ, ಈ ಒಂದು ತಿಂಗಳಲ್ಲಿ ಆತಂಕ ಹುಟ್ಟಿಸಿದ ಮೋದಿ ಸರ್ಕಾರದ ನಡೆಯೆಂದರೆ, ಸರ್ಕಾರೇತರ ಸಂಸ್ಥೆಗಳನ್ನು ಕುರಿತ ಗುಪ್ತಚರ ಇಲಾಖೆಯ 'ವರದಿ'ಯೊಂದರ ಬೇಕಾದ ಭಾಗಗಳನ್ನಷ್ಟೇ ಬೇಕೆಂದೇ ಸೋರಿಕೆ ಮಾಡುವ ಮೂಲಕ ಪರಿಸರ ಸಂರಕ್ಷಣೆಯ ಆಂದೋಲನದಲ್ಲಿ ತೊಡಗಿರುವ ಸ್ವಯಂಸೇವಾ ಸಂಸ್ಥೆಗಳ ಬಗ್ಗೆ ಸರ್ವಾಜನಿಕರಲ್ಲಿ ಸಂಶಯ ಹುಟ್ಟುವಂತೆ ಮಾಡಿ, ನರ್ಮದಾ ಅಣೆಕಟ್ಟೆಯ ಎತ್ತರವನ್ನು ಹೆಚ್ಚಿಸುವ ನಿರ್ಧಾರವನ್ನು ಪ್ರಕಟಿಸಿರುವುದು. ನಿಜ, ವಿದೇಶಗಳಿಂದ ಅನುದಾನ ಪಡೆಯಲೆಂದೇ ಈ ದೇಶದಲ್ಲಿ ಸಾವಿರಾರು ಸರ್ಕಾರೇತರ ಸಂಸ್ಥೆಗಳು ಹುಟ್ಟಿಕೊಂಡಿವೆ. ಮತ್ತು ಅವುಗಳಲ್ಲಿ ಕೆಲವು ಅಪ್ರಬುದ್ಧ ನಾಯಕತ್ವದೊಂದಿಗೆ ಬೇಜವಾಬ್ದಾರಿತನದಿಂದ ವರ್ತಿಸುತ್ತಿರಬಹುದು. ಆದರೆ ಅವನ್ನು ಕಾನೂನುಬದ್ಧವಾಗಿ ಗುರುತಿಸಿ ಕ್ರಮ ಕೈಗೊಳ್ಳಬೇಕೇ ಹೊರತು, ಗುಪ್ತಚರ ಇಲಾಖೆಯ ವರದಿಯ ಸೋರಿಕೆಯ

ಮೂಲಕ ತನ್ನ ಅಭಿವೃದ್ಧಿ ನೀತಿಗೆ ವಿರುದ್ಧವಿರಬಹುದಾದ ಸಂಸ್ಥೆಗಳ ಬಗ್ಗೆ ಅಪಪ್ರಚಾರದ ಕೆಲಸದಲ್ಲಿ ತೊಡಗುವುದು ಕೇವಲ ಕುತ್ಸಿತ ರಾಜಕಾರಣವೆನಿಸಿಕೊಳ್ಳುತ್ತದೆ. ಈಗ ಈ ಸರ್ಕಾರ ಕಲ್ಲಿದ್ದಲು ಗಣಿಗಾರಿಕೆ ಮತ್ತು ಪರಮಾಣು ವಿದ್ಯುತ್ ಉತ್ಪಾದನೆ ಮತ್ತು ಗುಜರಾತ್‌ನಲ್ಲಿ ಕೈಗಾರಿಕೋದ್ಯಮಿಗಳಿಗಾಗಿ ರೈತರ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳುತ್ತಿರುವ ವಿಧಿ–ವಿಧಾನಗಳ ಬಗ್ಗೆ ಪ್ರಶ್ನೆಗಳನ್ನೆತ್ತಿರುವ ಸಂಸ್ಥೆಗಳನ್ನು ಗುರಿ ಮಾಡಿಕೊಂಡಿರುವುದನ್ನು ನೋಡಿದರೆ ಮತ್ತು ಕೈಗಾರಿಕೋದ್ಯಮಗಳಿಗೆ ಪರಿಸರ ಅನುಮತಿಯನ್ನು ತ್ವರೆ ಮಾಡಿ ನೀಡಬೇಕೆಂಬ ಈ ಸರ್ಕಾರದ ಆದ್ಯತೆಯ ನೀತಿಯನ್ನು ನೋಡಿದರೆ, ಮೋದಿ ಗಾಂಧೀಜಿ ಚಿತ್ರಕ್ಕೆ ನಮನ ಸಲ್ಲಿಸಿದ್ದು ಕೇವಲ ತೋರಿಕೆಯ ಔಪಚಾರಿಕತೆಯೇನೋ ಎಂಬ ಅನುಮಾನ ಹುಟ್ಟುತ್ತದೆ. ಆದರೆ ಸದ್ಯಕ್ಕೆ ಅನುಮಾನ ಮಾತ್ರ. ಮೋದಿ ನಾವೆಲ್ಲ ಎಣಿಸಿದಂತೆ ನಿಜವಾಗಿ ಆಳದಲ್ಲಿ ಬದಲಾಗಿದ್ದರೆಯೇ ಎಂಬುದು ಸ್ಪಷ್ಟವಾಗಿ ಗೊತ್ತಾಗಲು ಬಹುಶಃ ನಾವಿನ್ನೂ ಸ್ವಲ್ಪ ಕಾಲ ಕಾಯಬೇಕಿದೆ.

ಏಕೆಂದರೆ 'ಒಳ್ಳೆಯ ದಿನಗಳು ಬರಲಿವೆ!' ಎಂದಿದ್ದ ಮೋದಿ ಈಗ 'ಕಠಿಮ ಕ್ರಮಗಳಿಗೆ ಸಿದ್ಧವಾಗಿ!' ಎಂದು ದೇಶಕ್ಕೆ ಕರೆ ನೀಡಿ ರಾಗ ಬದಲಿಸಿದ್ದಾರೆ. ಆದರೆ ಇದೇ ಮೋದಿ ಮತ್ತು ಅವರ ಪಕ್ಷ ಚುನಾವಣೆಗೆ ಮುನ್ನ ಮತ್ತು ಚುನಾವಣೆಗಳ ಸಂದರ್ಭದಲ್ಲಿ ಹಿಂದಿನ ಸರ್ಕಾರ ಇವರು ಈಗ ಸೂಚನೆ ಕೊಡುತ್ತಿರುವ ಕಠಿಣ ಕ್ರಮಗಳನ್ನು ಕೈಗೊಳ್ಳಲು ಮುಂದಾದಾಗ ಎಂತಹ ಹುಯಿಲೆಬ್ಬಿಸಿ ತಮ್ಮನ್ನು ಎತ್ತಿಕಟ್ಟುತ್ತಿದ್ದರು ಎಂಬುದನ್ನು ಜನ ಮರೆತಿಲ್ಲ. ಹಿಂದಿನ ಸರ್ಕಾರ ಖಜಾನೆ ಖಾಲಿ ಮಾಡಿ ಹೋಗಿದೆ ಎಂಬ ಮೋದಿಯವರ ಸಬೂಬಿಗೆ ಈಗಾಗಲೇ ಮಾಜಿ ಹಣಕಾಸು ಮಂತ್ರಿ ಚಿದಂಬರಂ, ಈ ಹಿಂದಿನ ವಾಜಪೇಯಿ ಸರ್ಕಾರ ಬಿಟ್ಟು ಹೋಗಿದ್ದ ಹಣಕಾಸು ಸ್ಥಿತಿಗಿಂತ ಬಹು ಉತ್ತಮವಾದ ಸ್ಥಿತಿಯಲ್ಲಿ ತಮ್ಮ ಸರ್ಕಾರ ಅಧಿಕಾರ ಹಸ್ತಾಂತರಿಸಿದೆ ಎಂದು ಅಂಕಿ ಅಂಶಗಳೊಂದಿಗೆ ಉತ್ತರಿಸಿದ್ದಾರೆ. ಈಗಾಗಲೇ ರೈಲ್ವೇ ದರಗಳ ಹೆಚ್ಚಳದ ಬರೆ ಜನಸಾಮಾನ್ಯರಿಗೆ ಬಿದ್ದಿದೆ. ಇನ್ನಷ್ಟು ಬರೆಗಳು ಬೀಳಲಿವೆ!. ಇನ್ನು ಗೋಪಾಲ ಸುಬ್ರಮಣ್ಯಂರವರನ್ನು ಸರ್ವೋನ್ನತ ನ್ಯಾಯಾಲಯದ ನ್ಯಾಯಾಧೀಶರನ್ನಾಗಿ ಮಾಡುವ ಪ್ರಕ್ರಿಯೆಯಲ್ಲಿ ಮತ್ತು ದೆಹಲಿ ವಿಶ್ವವಿದ್ಯಾಲಯದ ಶಿಕ್ಷಣ ಕ್ರಮದಲ್ಲಿ ರಾಜಕೀಯ ಹಸ್ತಕ್ಷೇಪ ಮಾಡಿ ಕೆಟ್ಟ ಸಂಪ್ರದಾಯಗಳಿಗೆ ನಾಂದಿ ಹಾಡಲಾಗಿದೆ. ಇವೆಲ್ಲ ಶುಭ ಸೂಚನೆಗಳಂತೂ ಅಲ್ಲ.

## ಸಿದ್ಧರಾಮಯ್ಯನವರ ಒಂದು ವರ್ಷ

ಇನ್ನು ಇತ್ತ ನಮ್ಮ ಸಿದ್ಧರಾಮಯ್ಯನವರನ್ನು ನೋಡಿ. ಮೋದಿ ಆತಂಕಗಳನ್ನು ಹುಟ್ಟಿಸುತ್ತಾ ಅಧಿಕಾರಕ್ಕೆ ಬಂದರೆ ಇವರು ಆಸೆಗಳನ್ನು ಹುಟ್ಟಿಸಿ ಬಂದರು. ಆದರೆ ಇವರ ಅಧಿಕಾರಾವಧಿಯ ಈ ಒಂದು ವರ್ಷದಲ್ಲಿ ಇವರು ಸಾಧಿಸಿರುವುದೇನು ಎಂದು ನೋಡಿದರೆ, ನಿರಾಶೆಯೇ ಹೆಚ್ಚು. ಅದು ವಿಶೇಷವಾಗಿ ಎದ್ದು ಕಾಣುವುದು ಇವರ ಸಮಾಜವಾದಿ ಕಳಕಳಿಯ ನಾಯಕತ್ವಕ್ಕೆಂದೇ ಜನ ಕಾಂಗ್ರೆಸ್ಸಿಗೆ ಮತ ಹಾಕಿದರು ಎಂಬ ಸಂಗತಿಯ ಹಿನ್ನೆಲೆಯಲ್ಲಿ. ಈಗಲೂ ಸಿದ್ಧರಾಮಯ್ಯ ವೈಯುಕ್ತಿಕವಾಗಿ ಹೆಸರು ಕೆಡಿಸಿಕೊಳ್ಳುವಂತಹ ಕೆಲಸಗಳನ್ನೇನೂ ಮಾಡದಿದ್ದರೂ, ತಮ್ಮ ಸಮಾಜವಾದಿ ಆದರ್ಶಗಳನ್ನು ತಮ್ಮ ರಾಜಕಾರಣದ ಅನುಕೂಲಕ್ಕೆ ತಕ್ಕಂತೆ ಮಾತ್ರ ವ್ಯಾಖ್ಯಾನ ಮಾಡಿಕೊಂಡು ರಾಜ್ಯಭಾರ ಮಾಡುತ್ತಾ ನಿರಾಶೆ ಹುಟ್ಟಿಸತೊಡಗಿದ್ದಾರೆ. ಸಾರ್ವಜನಿಕ ಸಮಾರಂಭಗಳಲ್ಲಿ ನಿದ್ದೆ ಹೊಡೆಯುವ ಚಿತ್ರ ಅವರ ಆಡಳಿತಕ್ಕೆ ಹಿಡಿದ ಕನ್ನಡಿಯಂತೆಯೇ ಇದೆಯೆಂದರೆ ಅದು ಹಗುರವಾದ ಮಾತೇನೂ ಆಗಲಾರದು. ಸಾರ್ವಜನಿಕ ಸಭೆಗಳಲ್ಲಿನ ತಮ್ಮ ಈ ನಿದ್ದೆಗೇಡಿತನ ಜನಕ್ಕೆ ಯಾವ ಸಂದೇಶವನ್ನು ರವಾನಿಸುತ್ತದೆ ಎಂಬ ಪರಿವೆಯೇ ಇಲ್ಲದ ಅವರು ಈವರೆಗೆ ಇದಕ್ಕೊಂದು ಪರಿಹಾರ ಕಂಡುಕೊಳ್ಳದೇ ಇರುವುದು ಅವರು ಜನತೆಯ ಮನೋ ಸೂಕ್ಷ್ಮಗಳ ಬಗ್ಗೆ ಎಂತಹ ತಿರಸ್ಕಾರ ಭಾವನೆ ಹೊಂದಿದ್ದಾರೆ ಎಂಬುದರ ದ್ಯೋತಕವಾಗಿದೆ.

ಮೊದಲಾಗಿ, ಮೋದಿಯವರಂತೆ ಸಿದ್ಧರಾಮಯ್ಯ ತಮ್ಮ ಸಚಿವ ಸಂಪುಟ ರಚಿಸುವಾಗಲೇ ತಾನೇಕೆ ಮುಖ್ಯಮಂತ್ರಿಯಾಗಲು ಹಂಬಲಿಸಿದೆ ಎಂಬುದನ್ನು ಜನತೆಗೆ ಹೇಳುವ ರೀತಿಯಲ್ಲಿ ತಮ್ಮ ಮುಖ್ಯಮಂತ್ರಿತ್ವವನ್ನು ಆರಂಭಿಸಲಿಲ್ಲ. ಅವರು ಸಚಿವ ಸಂಪುಟದ ರಚನೆಯಾಗುವ ಮುನ್ನವೇ 'ಅನ್ನ ಭಾಗ್ಯ'ದಂತಹ ಜನಪ್ರಿಯ ಆದರೆ ದುಬಾರಿಯಾದ ಕಾರ್ಯಕ್ರಮವನ್ನು ಘೋಷಿಸಿ ತಮ್ಮ ಮುಖ್ಯಮಂತ್ರಿತ್ವವನ್ನು ತಮ್ಮ ವೈಯುಕ್ತಿಕ ರಾಜಕೀಯ ಹಂಬಲದ ಈಡೇರಿಕೆ ಮಾತ್ರವಾಗಿರುವ ಸೂಚನೆ ನೀಡಿದರು. ಅಂದರೆ, ಸಾಮೂಹಿಕ ರಾಜಕಾರಣ ಮತ್ತು ಸಾರ್ವಜನಿಕ ಸೇವೆ ಈ ವೈಯುಕ್ತಿಕ ಹಂಬಲದ ಈಡೇರಿಕೆಯ ನಂತರದ ಭಾಗವಷ್ಟೆ! ಇದು ಈವರೆಗಿನ ಅವರೆಲ್ಲ ಆಡಳಿತ ಕೆಲಸ ಕಾರ್ಯಗಳಲ್ಲೂ ಪ್ರತಿಬಿಂಬಿತವಾಗುತ್ತಿದೆ. ಅವರೆಲ್ಲ ನಡೆಗಳೂ ಮೂಲತಃ ತಾವು ತಮ್ಮ ಕುರ್ಚಿಯಲ್ಲಿ ಉಳಿಯಲು ಕೈಗೊಳ್ಳಲಾಗುತ್ತಿರುವ ಕ್ರಮಗಳಾಗಿ ಕಾಣುತ್ತಿವೆಯೆ ಹೊರತು, ರಾಜ್ಯದ ಜನರ ಕ್ಷೇಮಾಭ್ಯುದಯಕ್ಕಾಗಿ ರೂಪಿಸಿಕೊಂಡಿರುವ ಒಂದು ದೀರ್ಘಕಾಲಿಕ ಕಾರ್ಯಕ್ರಮದ ಭಾಗವಾಗಿ ಅಲ್ಲ.

ಅವರು ವಿಧಾನ ಪರಿಷತ್ತಿಗೆ ನಡೆಸಿದ ನಾಮಕರಣಗಳು ವೈಖರಿ, ಇಬ್ರಾಹಿಂ ಎಂಬ ಒಂದು ಕಡೆಯಿಂದ ನೋಡಿದಾಗ ಮಹಾ ವಿದೂಷಕನಂತೆಯೂ ಇನ್ನೊಂದು ಕಡೆಯಿಂದ ನೋಡಿದಾಗ ಮಹಾ ಅನುಮಾನಾಸ್ಪದ ಆಸಾಮಿಯಾಗಿಯೂ ಕಾಣುವ ವ್ಯಕ್ತಿಯನ್ನು ರಾಜ್ಯದ ಯೋಜನಾ ಆಯೋಗದ ಉಪಾಧ್ಯಕ್ಷನನ್ನಾಗಿ ಮಾಡಿದ ನೇಮಕ ಇದಕ್ಕೊಂದು ಇತ್ತೀಚಿನ ಉದಾಹರಣೆಯಷ್ಟೇ ಅಲ್ಲ, ಅವರ ಈ ಆಡಳಿತ ವೈಖರಿ ಪಾತಾಳ ಮುಟವನ್ನು ಮುಟ್ಟಿರುವುದರ ಸೂಚನೆಯೂ ಆಗಿದೆ. ಸಿದ್ಧರಾಮಯ್ಯ. ಈಗ ಕಾಂಗ್ರೆಸ್ಸಿಗರು ಮಾತ್ರವಲ್ಲ; ಕೆಟ್ಟ ಕಾಂಗ್ರೆಸ್ಸಿಗರೂ ಆಗಿಬಿಟ್ಟಿದ್ದಾರೆ. ಹಾಗಾಗಿಯೇ ಸಿದ್ಧರಾಮಯ್ಯ ವಿಧಾನ ಪರಿಷತ್ತು ಮತ್ತು ಯೋಜನಾ ಆಯೋಗಗಳನ್ನು ಹಿಂದೆ ಯಾರೂ ಮಾಡದಷ್ಟು ಪೂರ್ಣವಾಗಿ ಜನರಿಂದ ತಿರಸ್ಕರಿಸಲ್ಪಟ್ಟ ರಾಜಕಾರಣಿಗಳ ಆಶ್ರಯದಾಣವನ್ನಾಗಿ ಪರಿವರ್ತಿಸಿಬಿಟ್ಟಿದ್ದಾರೆ. ಸಾಹಿತ್ಯ–ಸಂಗೀತ–ಲಲಿತ ಕಲೆ, ಶಿಕ್ಷಣ, ವೈದ್ಯಕೀಯ, ಸಾಮಾಜಿಕ ಸೇವೆ ಇತ್ಯಾದಿ ಸಕಲ ಕ್ಷೇತ್ರಗಳ ಪರಿಣಿತರಿಂದ ಕೂಡಿ ವಿಧಾನ ಸಭೆ ಕೈಗೊಂಡ ನಿರ್ಣಯಗಳನ್ನು ಹಿರಿತನದ ಅನುಭವದೊಂದಿಗೆ ಪರಿಶೀಲಿಸುವ ಸಂಸ್ಥೆಯಾಗಿ ನಮ್ಮ ಸಂವಿಧಾನ ಕರ್ತೃಗಳು ರೂಪಿಸಿದ ವಿಧಾನ ಪರಿಷತ್ತಿನ ಗೌರವ ಘನತೆಗಳನ್ನು ನಾಶ ಮಾಡಿದ್ದಾರೆ. ಇದನ್ನು, ಸೃಜನಶೀಲ ರಾಜಕೀಯ ಆಸಕ್ತಿಗಳನ್ನು ಹೊಂದಿರುವರೆಂದು ನಂಬಲಾದ ಸಮಾಜವಾದಿ ಹಿನ್ನೆಲೆಯ ಸಿದ್ಧರಾಮಯ್ಯನವರಿಂದ ನಿರೀಕ್ಷಿಸಿರಲಿಲ್ಲ. ಇನ್ನು ಸಿದ್ಧರಾಮಯ್ಯ ಸಾಮಾಜಿಕ ನ್ಯಾಯವೆಂದರೆ ಜಾತಿ ಪ್ರಾತಿನಿಧ್ಯವಷ್ಟೇ ಎಂದುಕೊಂಡಿದ್ದಾರೆನಿಸುತ್ತದೆ. ಸಿದ್ಧರಾಮಯ್ಯನವರೇ, ಸಾಮಾಜಿಕ ನ್ಯಾಯವೆನ್ನುವುದು ಇರುವುದು ರಾಜ್ಯಾಡಳಿತಕ್ಕಾಗಿ. ಸಾಮಾಜಿಕ ನ್ಯಾಯಕ್ಕಾಗಿ ರಾಜ್ಯಾಡಳಿತವಲ್ಲ! ಆದ್ದರಿಂದ ಯೋಗ್ಯರನ್ನು, ದಕ್ಷರನ್ನೂ ಸಾಮಾಜಿಕ ನ್ಯಾಯದ ಹೆಸರಿನಲ್ಲಿ ನಿರ್ಲಕ್ಷಿಬೇಕೆಂದಿಲ್ಲ. ಹಾಗೇ, ಅಹಿಂದ ಎಂದರೆ ಕುರುಬ–ಗೊಲ್ಲ–ನಾಯಕ–ಮುಸ್ಲಿಂ–ದಲಿತ ಮಾತ್ರ ಅಲ್ಲ. ನೂರಾರು ಸಣ್ಣಪುಟ್ಟ ಜಾತಿಗಳೂ ಅದರಲ್ಲಿವೆ ಎಂಬುದೂ ನೆನಪಿರಲಿ.

ಹಾಗೆ ನೋಡಿದರೆ ಸಿದ್ಧರಾಮಯ್ಯನವರು ತಮ್ಮ ಸಚಿವ ಸಂಪುಟವನ್ನು ರಚಿಸಿದಾಗಲೇ, ತಾವು ಸಾರ್ವಜನಿಕ ಸೇವೆಯ ನಿರ್ದಿಷ್ಟ ಕಾರ್ಯಕ್ರಮದೊಡನೆ ಅಧಿಕಾರಕ್ಕೆ ಬಂದಿಲ್ಲ ಎಂಬುದನ್ನು ಸಾರುವಂತೆ ಪಕ್ಷದ ವರಿಷ್ಠ ಮಂಡಳಿಯ ಸೂಚನೆಗೆ ಸುಲಭವಾಗಿ ಬಗ್ಗಿ ಸಾಮಾಜಿಕ ನ್ಯಾಯದ ಹೆಸರಿನಲ್ಲಿಯೋ ಯಾವುದೋ ಮತ್ತೊಂದು ರಾಜಕೀಯ ತಂತ್ರದ ಹೆಸರಿನಲ್ಲಿಯೋ ಯಾರ್ಯಾರನ್ನೋ ತಮ್ಮ ಮಂತ್ರಿಗಳನ್ನಾಗಿ ಮಾಡಿಕೊಂಡರು. ಹಾಗಾಗಿಯೇ ಒಂದು ವರ್ಷದ ನಂತರವೂ ಈ ಮಂತ್ರಿಮಂಡಲದ ಮುಕ್ಕಾಲು ಜನ ಮಂತ್ರಿಗಳ ಹೆಸರುಗಳು ರಾಜ್ಯದ ಜನತೆಗೆ ಅಪರಿಚಿತವಾಗಿಯೇ ಉಳಿದಿವೆ. ಕೆ.ಎಂ. ಜಾರ್ಜ್ ಎನ್ನುವವರು ಈ ರಾಜ್ಯದ ಗೃಹ ಮಂತ್ರಿಯಾಗುವಷ್ಟು ಹಿರಿಯ ರಾಜಕಾರಣಿ ಎಂಬುದೂ ಜನತೆಗೆ ಗೊತ್ತಿರಲಿಲ್ಲ. ಹಾಗೇ ಸತೀಶ್ ಜಾರಕಿಹೊಳಿ ಸ್ವತಃ ಅಬ್ಕಾರಿ ಉದ್ಯಮಿಯಾಗಿರುವಾಗ ಅವರಿಗೆ ಅಬ್ಕಾರಿ ಖಾತೆ ನೀಡಬಾರದೆಂಬ ಸೂಕ್ಷ್ಮವೂ ಸಿದ್ಧರಾಮಯ್ಯನವರ ಬಳಿ ಸುಳಿಯುವುದಿಲ್ಲ. ಉನ್ನತ ಶಿಕ್ಷಣ ಖಾತೆಯನ್ನು ಹಣದ ಮೂಟೆಗಳ ಮಾಲೀಕರಿಗೆ ಕೊಡಬಾರದೆನ್ನುವುದೂ ಹೊಳೆಯುವುದಿಲ್ಲ. ಇಷ್ಟು ಅಸೂಕ್ಷತೆ ಮೈ–ಮನಸ್ಸುಗಳನ್ನು ಆವರಿಸಿದಾಗ ಭ್ರಷ್ಟಾಚಾರದ ಆಪಾದನೆ ಹೊತ್ತವರನ್ನು ರಾಜಕೀಯ ಲಾಭಗಳಿಗಾಗಿ ಮಂತ್ರಿಗಳನ್ನಾಗಿ ಹೇರಿದಾಗ ಅದನ್ನು ವಿರೋಧಿಸುವ ನೈತಿಕ ಸ್ಥೈರ್ಯವಾದರೂ ಎಲ್ಲಿರುತ್ತದೆ? ಇದರ ಫಲವೇ ಇಂದು ಸಾರ್ವಜನಿಕರ ಟೀಕೆಗಳಿಗೆ ಒಳಗಾಗುತ್ತಿರುವ–ಇತ್ತೀಚಿನ ಉದಾಹರಣೆ: ಅಲ್ಪಸಂಖ್ಯಾತರ ಶಾಲೆಗಳನ್ನು ಕುರಿತ ಆದೇಶ–ಸರ್ಕಾರದ ನಿರ್ಧಾರಗಳು.

ಸಿದ್ಧರಾಮಯ್ಯನವರಿಗೆ ಕಾಲವಿನ್ನೂ ಮಿಂಚಿಲ್ಲ. ಮುಗಿದಿರುವುದು ಒಂದು ವರ್ಷ ಮಾತ್ರ. ಮಲ್ಲಿಕಾರ್ಜುನ ಖರ್ಗೆಯವರು ಲೋಕಸಭೆಯಲ್ಲಿ ಪಕ್ಷದ ನಾಯಕರಾಗಿ ರವಾನೆಯಾದ ಮೇಲೆ ಇವರಿಗೆ ಸವಾಲಾಗಬಲ್ಲ ನಾಯಕರಾರೂ ಕಾಂಗ್ರೆಸ್ಸಿನಲ್ಲಿ ಇಲ್ಲ. ಇನ್ನೂ ಮುಖ್ಯವಾಗಿ, ಕಾಂಗ್ರೆಸ್ಸಿನ ವರಿಷ್ಠ ಮಂಡಳಿ ತಾನುಳಿದುಕೊಂಡರೇ ಸಾಕೆಂಬ ದುಃಸ್ಥಿತಿಯಲ್ಲಿದೆ. ಹಾಗಾಗಿ ಸಿದ್ಧರಾಮಯ್ಯ ಮನಸ್ಸು ಮಾಡಿದರೆ, ಅಸುರಕ್ಷಿತತೆಯ ಭಯದಲ್ಲಿ ಅಗ್ಗದ ರಾಜಕೀಯ ಹೆಜ್ಜೆಗಳನ್ನು ಇಡುವುದನ್ನು ನಿಲ್ಲಿಸಿ ಒಳ್ಳೆಯ ಸಮಾಜವಾದಿಯಾಗಿ ತಾವು ಕಲ್ಪಿಸಿಕೊಂಡಿದ್ದಿರಬಹುದಾದ ಆಡಳಿತ ಮಾದರಿಯನ್ನು ಆರಂಭಿಸಲು ಇದು ಸಕಾಲ

**–ಸಂಪಾದಕ**

# ನಮ್ಮ ಸಮಾಜವಾದಿಗಳು: ದುರಂತವನ್ನಪ್ಪಿದ ಹರ್ಷೋಲ್ಲಾಸಗಳ ಸರದಾರ ಬಾಸು ಕೃಷ್ಣಮೂರ್ತಿ



ಕರ್ನಾಟಕದಲ್ಲಿ ಸಮಾಜವಾದಿ ಚಳುವಳಿ, ಆನಂತರ ಭೂದಾನ ಚಳುವಳಿ ಅರ್ಥಾತ್ ಸರ್ವೋದಯ ಆಂದೋಲನ ಆರಂಭವಾಗಿ ಸಾಗಿದ ಚಿತ್ರ ಬಿಡಿಸುವಾಗ ಮುವ್ವರ ಹೆಸರುಗಳು ಒಟ್ಟಿಗೇ ನೆನಪಿಗೆ ಬರುತ್ತದೆ. ಅವರೇ ದಿವಂಗತರಾದ ಖಾದ್ರಿ ಶಾಮಣ್ಣ, ಗರುಡ ಶರ್ಮ ಮತ್ತು ಬಾಸು ಕೃಷ್ಣಮೂರ್ತಿ. ಮೂರೂ ಜನ ಒಟ್ಟಿಗೇ ಹಳ್ಳಿ ಸುತ್ತಿದರು;ಸಮತೆ–ಸರ್ವೋದಯಗಳ ಸಂದೇಶ ಸಾರಿದರು. ಇವರಲ್ಲಿ ಗರುಡಶರ್ಮಾ ಜೀವನದಾನಿಯಾಗಿ ಸರ್ವೋದಯಕ್ಕೆ ತಮ್ಮ ಬದುಕನ್ನು ಅರ್ಪಿಸಿಕೊಂಡರು. ಇನ್ನು ಖಾದ್ರಿ ಶಾಮಣ್ಣ ಕನ್ನಡ ಪತ್ರಿಕೋದ್ಯಮದಲ್ಲಿ ದೊಡ್ಡ ಹೆಸರಾದರೆ, ಬಾಸು ಕೃಷ್ಣಮೂರ್ತಿ ಕೊನೆವರೆಗೂ ಹೊಸ ಸಮಾಜ ನಿರ್ಮಾಣದ ಕನಸು ಹೊತ್ತು ಕಾಲಿಗೆ ಚಕ್ರ ಕಟ್ಟಿಕೊಂಡಂತೆ ಅಲೆದು ಭಾಷಣಗಳನ್ನು ಮಾಡಿದರು, ಬರೆದರು. ಕೊನೆಗೆ ನಿರಂತರ ಅಶಾಂತ ಜೀವಿಯಾಗಿ ಲೋಕ ವ್ಯಾಪಾರ ಮುಗಿಸಿದರು. ಆದರೆ ಕಡು ತಾಪತ್ರಯಗಳ ನಡುವೆಯೂ ಬಾಸು ತಮ್ಮ ಹಾಸ್ಯ, ಭರಪೂರ ನಗೆಯನ್ನು ಬಿಟ್ಟುಕೊಡಲಿಲ್ಲ. ಅವರಿದ್ದೆಡೆ ಜೀವನೋತ್ಸಾಹ ಪುಟಿದೇಳುತ್ತಿತ್ತು.

ಅದು ಸ್ವಾತಂತ್ರ್ಯ ಹೋರಾಟದ ಆರಂಭದ ಕಾಲ. ಬೆಂಗಳೂರು, ಮೈಸೂರುಗಳು ವಿದ್ಯಾರ್ಥಿ ಕಾಂಗ್ರೆಸ್ ಸಂಘಟನೆಯ ಮುಖ್ಯ ತಾಣಗಳು. ಬೆಂಗಳೂರಿನ ಗಾಂಧಿ ಬಜಾರ್‌ನ ಪಶ್ಚಿಮ ಆಂಜನೇಯ ಗುಡಿ ಬೀದಿಯ ಕೆಳ ಮಧ್ಯಮ ವರ್ಗದ ಕುಟುಂಬವೊಂದರಲ್ಲಿ ಬಾಸು ಕೃಷ್ಣ ಮೂರ್ತಿ ಜನಿಸಿದರು. ತಂದೆ ಬಡ ಶಾಲಾ ಶಿಕ್ಷಕರು. ಹೀಗಾಗಿ ಎಳೆತನದಿಂದಲೇ ಬಾಸು ಕಡುಬಡತನವನ್ನು ಕಂಡುಂಡವರು. ಸೆಂಟ್ರಲ್ ಕಾಲೇಜಿನ ಬಿಎಸ್ಸಿ ಪದವೀಧರರಾಗಿದ್ದ ಬಾಸು ಅವರ ಸಹಪಾಠಿಗಳೆಂದರೆ, ಕರ್ನಾಟಕದಲ್ಲಿ ಸಮಾಜವಾದಿ ಪಕ್ಷ ಕಟ್ಟಿದ ಸೋಗಾಲ ನಾಗಭೂಷಣ ಮತ್ತು ಮುಂದೆ ಕಾಂಗ್ರೆಸ್ ಮುಖಂಡರಾದ ವಿ.ಎಸ್. ಕೃಷ್ಣ ಐಯ್ಯರ್. ಇವರೆಲ್ಲರೂ ಆ ಕಾಲದ ಎಲ್ಲ ಯುವಜನರಂತೆಯೇ, ರಾಮಕೃಷ್ಣ ಪರಮಹಂಸ ಮತ್ತು ಸ್ವಾಮಿ ವಿವೇಕಾನಂದರಿಂದ ಪ್ರಭಾವಿತರಾಗಿದ್ದ ಬಾಸು ತಮ್ಮ ಕಂಚಿನ ಕಂಠ ಮತ್ತು ಆಕರ್ಷಕ ವಾಗ್ವೈಖರಿಯ ಮೂಲಕ ಆ ಕಾಲದ ಹೆಸರಾಂತ ಯುವ ಭಾಷಣಕಾರರೆನಿಸಿಕೊಂಡರು. ಕನ್ನಡ ಕವಿತೆಗಳ ಸಾಲುಗಳಿಂದ ಪ್ರಫುಲ್ಲಿತವಾಗಿರುತ್ತಿದ್ದ ಅವರ ಭಾಷಣಗಳು ವಿದ್ಯಾರ್ಥಿ ಕಾಂಗ್ರೆಸ್ ಸಭೆ–ಸಮ್ಮೇಳನಗಳಲ್ಲಿ ಯುವಜನರನ್ನು ಸ್ವಾತಂತ್ರ್ಯ ಹೋರಾಟದೆಡೆಗೆ ಆಕರ್ಷಿಸುತ್ತಿದ್ದವು.

ಎರಡನೇ ವಿಶ್ವಯುದ್ಧ ಮುಗಿದು, ಕಾಂಗ್ರೆಸ್ ಆಂದೋಲನ ಬೆಳೆಯುತ್ತಿದ್ದ ಕಾಲವದು. ಆಗ ತಾನೇ ಕಾಂಗ್ರೆಸ್ ಸೋಶಲಿಸ್ಟ್ ಪಕ್ಷ ಸ್ಥಾಪಿತವಾಗಿ ಕಮಲಾದೇವಿ ಚಟ್ಟೋಪಾಧ್ಯಾಯ ಮತ್ತು ಕೆ.ಸದಾಶಿವ ಕಾರಂತರು ಕರ್ನಾಟಕದಲ್ಲಿ ಅದರ ಸಂಘಟನೆಯಲ್ಲಿ ತೊಡಗಿದ್ದರು. ಅವರು ಕರೆದಿದ್ದ ಮಂಗಳೂರು ಸೋಶಲಿಸ್ಟ್ ಸಮ್ಮೇಳನದಲ್ಲಿ ಭಾಗವಹಿಸಿದ ಬಾಸು, ನಂತರ ಜಯಪ್ರಕಾಶ್ ನಾರಾಯಣರು ಬೆಂಗಳೂರಿಗೆ ಬಂದು ಚಿಕ್ಕ ಲಾಲ್‌ಬಾಗ್‌ನಲ್ಲಿ ಭಾಷಣ ಮಾಡಿದಾಗ ಅವರ ಭಾಷಣವನ್ನು ಕನ್ನಡಕ್ಕೆ ಅನುವಾದಿಸಿದವರು ಯುವಕ ಬಾಸು ಕೃಷ್ಣಮೂರ್ತಿ. ಬಾಸು ಅವರ ಅನುವಾದ ಸಭಿಕರಲ್ಲಿ ಹುಟ್ಟಿಸುತ್ತಿದ್ದ ಸಂಭ್ರಮವನ್ನು ಕಂಡ ಜೆಪಿ, ಸಂಘಟಕರನ್ನು ಈ ಹುಡುಗ ಯಾರು ಎಂದು ಕೇಳಿದರು. ಬಾಸುವನ್ನು ಸಂಘಟಕರು ಈತ ಸಮಾಜವಾದಿ ಪಕ್ಷದ ಆಧಾರ ಸ್ತಂಭ ಎಂದು ಪರಿಚಯಿಸಿದರು. ಆಗ ಜೆಪಿ ಬಾಸುವನ್ನು ಸಮಾಜವಾದಕ್ಕೆ ದೊಡ್ಡ ಆಸ್ತಿ ಎಂದು ಶ್ಲಾಘಿಸಿದರೆಂದು ಕಾರ್ಮಿಕ ನಾಯಕ ದಿ. ಜಿ.ವಿ. ರಮೇಶ್ ಒಮ್ಮೆ ನೆನಪಿಸಿಕೊಂಡು ಹೇಳಿದ್ದರು. ಮುಂದೆ ಜೆಪಿ ಅಥವಾ ಲೋಹಿಯಾ ಕರ್ನಾಟಕಕ್ಕೆ ಬಂದಾಗಲೆಲ್ಲ ಅವರ ಭಾಷಣಗಳ ಅನುವಾದ ಖಾದ್ರಿ ಶಾಮಣ್ಣನವರನ್ನು ಬಿಟ್ಟರೆ ಬಾಸುದೇ.

ಕಮಲಾದೇವಿಯವರು ಹೊರತರುತ್ತಿದ್ದ ಕಾಂಗ್ರೆಸ್ ಸೋಶಲಿಸ್ಟ್ ಪಕ್ಷದ ಮುಖವಾಣಿಯಾಗಿದ್ದ 'ಜಾಗೃತಿ' ಪತ್ರಿಕೆ ಧಾರವಾಡದಿಂದ ಬೆಂಗಳೂರಿಗೆ ಬರುತ್ತಿತ್ತು. ಪತ್ರಿಕೆಯ ಪ್ರತಿಗಳನ್ನು ಬಾಸು ಮತ್ತು ಅವರ ಗೆಳೆಯರು ಮೆಜೆಸ್ಟಿಕ್ ಚೌಕದಿಂದ ಬಳೇಪೇಟೆ ಚೌಕದವರೆಗೆ ಘೋಷಣೆಗಳನ್ನು ಕೂಗುತ್ತಾ ಮಾರುತ್ತಿದ್ದರು. ಹೊಸ ಹೊಸ ಘೋಷಣೆಗಳನ್ನು ಕಟ್ಟಬಲ್ಲ ಭಾಷಾ ಚತುರರಾಗಿದ್ದ ಬಾಸು ಪತ್ರಿಕೆಯನ್ನು ಮಾರುವುದರಲ್ಲೂ ನಿಸ್ಸೀಮರು. ಆ ಹೊತ್ತಿಗೆ ರಾಜ್ಯದಲ್ಲಿ ಒಂದು ದೊಡ್ಡ ಸೋಶಲಿಸ್ಟ್ ಯುವಪಡೆಯೇ ಸಿದ್ಧವಾಗಿತ್ತು. ಬಾಸು ಮತ್ತು ಅವರ ಗೆಳೆಯರಲ್ಲದೆ, ವೈ. ಆರ್. ಪರಮೇಶ್ವರಪ್ಪ,, ಶಾಂತವೇರಿ ಗೋಪಾಲಗೌಡ, ಜಿ. ಸದಾಶಿವರಾವ್, ನೀಲಗಂಗಯ್ಯ ಪೂಜಾರ, ನರಿಬೋಳ ಮುಂತಾದವರು ಪ್ರಮುಖರು

೧೯೫೨ರ ಮೊದಲ ಚುನಾವಣೆಗಳಿಗೆ ಮುನ್ನ ಗೋಪಾಲಗೌಡರ ನೇತೃತ್ವದಲ್ಲಿ ಕಾಗೋಡು ಸತ್ಯಾಗ್ರಹ ಕರ್ನಾಟಕದ ಸಮಾಜವಾದಿಗಳು ನಡೆಸಿದ ಮೊದಲ ಸಾಮೂಹಿಕ ಭೂಸತ್ಯಾಗ್ರಹ. ಇದರಲ್ಲಿ ಬಾಸು ಕೃಷ್ಣಮೂರ್ತಿಯವರ ಪಾತ್ರ ವರ್ಣರಂಜಿತವಾದದ್ದು. ಅವರ ಹೋರಾಟದ ಉತ್ಸಾಹ ಅವರ ಮಾತಿನ ಲಹರಿಯಲ್ಲಿ ಮಾತ್ರವಲ್ಲದೆ ಅವರ ಸಾಹಸಗಳಲ್ಲೂ ವ್ಯಕ್ತವಾಯಿತು. ಅದೇ ರೀತಿ ಬೆಂಗಳೂರಿನ ವಿಮಾನ ಕಾರ್ಖಾನೆ ನೌಕರರ ಮುಷ್ಕರದಲ್ಲೂ ಅವರು ಸಕ್ರಿಯವಾಗಿ ಪಾಲ್ಗೊಂಡು ಸೆರೆಮನೆ ವಾಸ ಅನುಭವಿಸಿದರು. ೧೯೫೨ರ ಮೊದಲ ಚುನಾವಣೆಗಳಲ್ಲಿ ಸೋಶಲಿಸ್ಟ್ ಪಕ್ಷದ ಪ್ರಚಾರ ಭಾಷಣಗಳಲ್ಲಿ ಬಾಸು ಅವರದ್ದೇ ಅಟ್ಟಹಾಸ. ಅವರು ತಾವು ಸ್ಪರ್ಧಿಸಿದ್ದ ಚಾಮರಾಜಪೇಟೆ ವಿಧಾನ ಸಭಾ ಕ್ಷೇತ್ರದಲ್ಲಲ್ಲದೆ ರಾಜ್ಯಾದ್ಯಂತ ಪಕ್ಷದ ಪರವಾಗಿ ಚುನಾವಣಾ ಭಾಷಣಗಳನ್ನು ಮಾಡಿದರು. ಬಾಸು ಭಾಷಣಗಳೆಂದರೆ ಜನ ಕಿಕ್ಕಿರಿದು ಸೇರುತ್ತಿದ್ದರು. ಅತಿ ಚುರುಕಾದ;ಆದರೆ ಸರಳ ಮತ್ತು ತಿಳಿಗನ್ನಡದಲ್ಲಿ ಅವರ ಭಾಷಣ. ಆದರೆ ತೀವ್ರ ವಿನೋದ ಪ್ರಜ್ಞೆಯು ಅವರ ಮಾತುಗಳಲ್ಲಿ ವ್ಯಂಗ್ಯ, ಟೀಕೆಗಳಿರುತ್ತಿರಲಿಲ್ಲವೆಂದಲ್ಲ. ಸಾಗರದ ಬಳಿ ಹವ್ಯಕ ಬ್ರಾಹ್ಮಣರೇ ಹೆಚ್ಚಿದ್ದ ಹಳ್ಳಿಯೊಂದರಲ್ಲಿ ಇವರು ಮತ್ತು ಗರುಡ ಶರ್ಮ ಬ್ರಾಹ್ಮಣರನ್ನು ಕುರಿತು ' ನೀವು ಹೊಳೆದಂಡೆ–ತಾಮ್ರದ ಚೊಂಬಿಗೇ ಸರಿ!' ಎಂದು ಛೇಡಿಸಿ ಪಕ್ಷಕ್ಕೆ ಮುಜುಗರವನ್ನೇ ಉಂಟುಮಾಡಿ ಬ್ರಾಹ್ಮಣ ಸಮುದಾಯ ಗೋಪಾಲ ಗೌಡರನ್ನು 'ಆ ರಾಕ್ಷಸರನ್ನು ಇತ್ತ ಸುಳಿಯಗೊಡಬೇಡಿ' ಎಂದು ಕೋರುವಂತೆ ಮಾಡಿದ್ದೂ ಉಂಟು! ಇವರ ಭಾಷಣದ ಬಗ್ಗೆ ಇದ್ದ ಒಂದು ಜನಪ್ರಿಯ ಮಾತೆಂದರೆ, 'ಜನ ಬಾಸು ಭಾಷಣ ಕೇಳಲು ಬರುತ್ತಾರೆ, ನಂತರ ಕಾಂಗ್ರೆಸ್ಸಿಗೆ ಓಟು ಹಾಕುತ್ತಾರೆ!' ಎಂಬುದು.

ಸಮಾಜವಾದಿ ಪಕ್ಷದಲ್ಲಿ ಒಡಕುಂಟಾದ ಮೇಲೆ ಬಾಸು ಜೆಪಿ ಹಿಂದೆ ಭೂದಾನ ಮತ್ತು ಸರ್ವೋದಯ ಚಳುವಳಿಗಳಿಗೆ ಹೋದರು. ಬಿಹಾರದಲ್ಲಿ ಸ್ವಲ್ಪ ಕಾಲ್ರ ಆಶ್ರಮವಾಸಿಯಾಗಿ ಸರ್ವೋದಯದ ಕೆಲಸಗಳಲ್ಲಿ ತರಬೇತು ಪಡೆದರು. ಭೂದಾನ ಚಳುವಳಿಯ ಭಾಗವಾಗಿ ದೇಶ ಸುತ್ತಿದರು. ಅಲ್ಲಿಯೂ ಅವರು ಚಳುವಳಿಯ ಪ್ರಧಾನ ಭಾಷಣಕಾರರು. ಆದರೆ ಈಗ ಅವರದ್ದು ಶಿಷ್ಟ ಭಾಷೆಯ ಸಾತ್ವಿಕ ಭಾಷಣ. ಆದರೆ ತಮ್ಮ ಒಳಗಿನ ಕ್ರಾಂತಿಕಾರಿ ಕಿಡಿಯನ್ನು ಬೆಳಗಿಸಲು ಅವರು ವೇದಿಕೆಯನ್ನಾಗಿ ಮಾಡಿಕೊಂಡದ್ದು ಶೇಷಪ್ಪನವರ 'ಕಿಡಿ' ಪತ್ರಿಕೆಯನ್ನು.೧೯೫೦ರಿಂದ ೧೯೬೭ರವರೆಗೆ ಅಲ್ಲಿ ಸತತವಾಗಿ ಬರೆದ ಬಾಸು ಜೀವನೋಪಾಯಕ್ಕಾಗಿ 'ಜನವಾಣಿ', 'ಸಂಯುಕ್ತ ಕರ್ನಾಟಕ', 'ಗೋಕುಲ', 'ಜ್ವಾಲಾಮುಖಿ'ಗಳಲ್ಲಿಯೂ ಬರೆದರು.

ಬಾಸು ಅವರಿಗೆ ಇಬ್ಬರು ಸೋದರಿಯರಿದ್ದರು.ಇಬ್ಬರೂ ವಿದ್ಯಾವಂತೆಯರಾದರೂ ನಿರುದ್ಯೋಗಿಗಳು. ಅವರು ವಿನೋಬಾರ ಪೌನಾರ್ ಆಶ್ರಮ ಸೇರಿದರು. ಆದರೆ ಅಲ್ಲಿ ಇಬ್ಬರೂ ಅಕಾಲ ಮರಣಕ್ಕೆ ತುತ್ತಾದರು. ಬಾಸು ೧೯೬೫ರಲ್ಲಿ ತಡವಾಗಿ ಮದುವೆಯಾದರು. ಸಮಾಜವಾದಿ ಕ್ರಾಂತಿಯ ದೀಕ್ಷೆ ತೊಟ್ಟು ಪಕ್ಷ ಕಟ್ಟಿದ, ದೇಶ ಸುತ್ತಿ ಭಾಷಣಗಳನ್ನು ಮಾಡಿದ ಈ ವ್ಯಕ್ತಿ ಕನಿಷ್ಟ ನೆಮ್ಮದಿಯ ಬದುಕಿಗೂ ತತ್ವಾರವಾದಾಗ ನಿಧಾನವಾಗಿ ಹತಾಶೆಗೆ ದೂಡಲ್ಪಟ್ಟರು. ನಂತರ ಸಾರ್ವಜನಿಕ ಜೀವನದಿಂದ ಕ್ರಮೇಣ ದೂರವಾದರು. ಹೀಗೆ ಒಂಟಿಯಾದ ಅವರು ೧೯೮೯ರ ಜುಲೈ ೨೮ರಂದು ನಿಧನರಾದ ಸುದ್ದಿ ಅವರ ಆಪ್ತ ಗೆಳೆಯರಿಗೂ ತಿಳಿದದ್ದು ತಡವಾಗಿ.

ಸಮಾಜವಾದಿ ಚಳುವಳಿಯಲ್ಲೇ ಇರಲಿ, ಸರ್ವೋದಯದಲ್ಲೇ ಇರಲಿ; ಜೀವನಪೂರ್ತಿ ತನ್ನ ಚುರುಕಾದ ಮಾತು ಮತ್ತು ಹಾಸ್ಯ ಪ್ರವೃತ್ತಿಗಳಿಂದ ಎಲ್ಲರಲ್ಲೂ ಉತ್ಸಾಹ ಸಂಭ್ರಮಗಳನ್ನು ತುಂಬಿ ತನ್ನ ಸುತ್ತಲಿನ ಜಗತ್ತನ್ನು ಜೀವಂತವಾಗಿಡುತ್ತಿದ್ದ ಬಾಸು ಕೃಷ್ಣಮೂತಿಹೀ ಜಗತ್ತನ್ನು ಬಿಟ್ಟು ಹೋಗುವಾಗ ಒಂಟಿಯಾಗಿದ್ದರೆಂಬುದು ಈ ಚಳುವಳಿಗಳ ದುರಂತಗುಣವನ್ನೂ ಸೂಚಿಸುತ್ತಿರಬಹುದು...

**–ಖಾದ್ರಿ ಎಸ್. ಅಚ್ಯುತನ್**

## ಪ್ರೊ. ಬಿ. ಕೃಷ್ಣಪ್ಪ ನೆನಪಿನ ಮಾಲೆ–೨೧

–ಇಂದಿರಾ ಬಿ ಕೃಷ್ಣಪ್ಪ

# ಕೃಷ್ಣಪ್ಪನವರ ಬಂಡಾಯ ಸಾಹಿತ್ಯ ಸಂವೇದನೆ

**ಕ**ನ್ನಡ ಸಾಹಿತ್ಯಕ್ಕೆ ಹೊಸ ದಿಕ್ಕು ದೆಸೆಯನ್ನು ಕಟ್ಟಿಕೊಡುತ್ತಿದ್ದ, ದಲಿತ ಸಾಹಿತ್ಯ ಕರ್ನಾಟಕದ ಜನಪರ–ಜೀವಪರ ಮನಸ್ಸುಗಳನ್ನು ತಟ್ಟುತ್ತಿದ್ದ ಕಾಲವದು. ಕನ್ನಡ ಸಾಹಿತ್ಯ ಪರಿಷತ್ತು, ಅಖಿಲ ಭಾರತ ೫೧ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ದಕ್ಷಿಣ ಕನ್ನಡ ಜಿಲ್ಲೆಯ ಧರ್ಮಸ್ಥಳದಲ್ಲಿ ಮಾರ್ಚ್ ೯ರಿಂದ ೧೧ರವರೆಗೆ ನಡೆಸಲು ಆಯೋಜಿಸಿತ್ತು. ಈ ಸಾಹಿತ್ಯ ಸಮ್ಮೇಳನದಲ್ಲಿ ೨ನೇ ದಿನದ ಗೋಷ್ಠಿಯಲ್ಲಿ 'ಕನ್ನಡದಲ್ಲಿ ದಲಿತ ಸಾಹಿತ್ಯ' ಎಂಬ ವಿಚಾರದಲ್ಲಿ ಉಪನ್ಯಾಸ ನೀಡಬೇಕೆಂದು ಕೃಷ್ಣಪ್ಪನವರಿಗೆ ಪರಿಷತ್ತಿನ ಅಂದಿನ ಅಧ್ಯಕ್ಷರಾದ ಹಂಪನಾರವರು ಆಹ್ವಾನಿಸಿದ್ದರು. ಕೃಷ್ಣಪ್ಪ, ಅವರ ಹೋರಾಟದ ಸಿದ್ಧಾಂತ, ಚಿಂತನೆಗಳನ್ನು ಅಲ್ಲಿ ಮಂಡಿಸುವ ಸಲುವಾಗಿ ಧರ್ಮಸ್ಥಳದ ಸಮ್ಮೇಳನದಲ್ಲಿ ಭಾಗವಹಿಸಲು ಸಮ್ಮತಿ ಕಳುಹಿಸಿದ್ದರು.(ಈ ಮಾತನ್ನು ಕೃಷ್ಣಪ್ಪ ಲೇಖನವೊಂದರಲ್ಲಿ ಬರೆದುಕೊಂಡಿದ್ದಾರೆ.)

ಆಗಿನ್ನು ಬಂಡಾಯ ಸಾಹಿತ್ಯ ಸಮ್ಮೇಳನದ ಸೊಲ್ಲು ಎದ್ದಿರಲಿಲ್ಲ ಹಂಪನಾರವರು ಸಮ್ಮೇಳನದ ಕುರಿತಾಗಿ ಪತ್ರ ವ್ಯವಹಾರ ಮುಂದುವರಿಸಿದ್ದರು. ಆಗೊಂದು ದಿನ ವಿಜಯ ಪಾಟೀಲ, ಕೃಷ್ಣಪ್ಪನವರಿಗೆ ಪತ್ರವೊಂದನ್ನು ಬರೆದು 'ಬಂಡಾಯ ಸಾಹಿತ್ಯ ಸಮ್ಮೇಳನ ನಡೆಯುತ್ತಿರುವುದು ನಿಮಗೆ ಗೊತ್ತಾಗಿರಬಹುದು. ಸಮ್ಮೇಳನ ನಡೆಸುವುದರ ಬಗ್ಗೆ ಎಲ್ಲರನ್ನೂ ಸಮಾಲೋಚಿಸದೆ ಅವಸರದ ನಿರ್ಣಯ ಕೈಗೊಂಡಿದ್ದರೂ ಸಹ ಸಮ್ಮೇಳನ ನಡೆಯುವುದು ಅನಿವಾರ್ಯವಾದ್ದರಿಂದ ಈ ಸಮ್ಮೇಳನ ಬೆಂಬಲಿಸಬೇಕಾಗಿರುವುದೂ ಕ್ರಿಯಾತ್ಮಕವಾಗಿ ಭಾಗವಹಿಸುವುದೂ, ನಮ್ಮೆಲ್ಲರ ನೈತಿಕ ಕರ್ತವ್ಯ. ಈ ಸಮ್ಮೇಳನ ಏಕಕಾಲಕ್ಕೆ ಕಸಾಪ ವಿರುದ್ಧ ಅದು ಸಕ್ರಿಯವಾಗಲು ಪ್ರತಿಭಟನೆ ಮತ್ತು ನಿಜವಾದ ಬಂಡಾಯ ಸಾಹಿತ್ಯದ ಪ್ರತಿಪಾದನೆ ಉದ್ದೇಶವುಳ್ಳದ್ದು. ಆದ್ದರಿಂದ ನೀವು ಈ ಸಮ್ಮೇಳನದಲ್ಲಿ ಭಾಗವಹಿಸುತ್ತೀರೆಂದು ನಂಬಿರುವೆ' ಎಂದು ತಿಳಿಸಿದ್ದರು. ಚೆನ್ನಣ್ಣ ವಾಲೀಕಾರ ಅವರು ಹಂಪನಾರವರಲ್ಲಿ ದಲಿತ ಸಾಹಿತ್ಯದ ಗೋಷ್ಠಿಯೊಂದನ್ನು ಏರ್ಪಡಿಸಲು ಪತ್ರ ಮುಖೇನ ಕೇಳಿದಾಗ, ಅವರು 'ದಲಿತ – ಬಲಿತ – ಕಲಿತ'– ಈ ತರಹದ ಗೋಷ್ಠಿಯನ್ನು ಮಾಡಲು ವ್ಯಂಗ್ಯಾತ್ಮಕವಾಗಿ ಅಸಮ್ಮತಿ ಸೂಚಿಸಿದ ವಿಷಯ ಕೂಡ ಕೃಷ್ಣಪ್ಪನವರಲ್ಲಿ ಚರ್ಚೆಗೆ ಬಂದಿತ್ತು. ಇದೇ ವೇಳೆಯಲ್ಲಿ ಡಾ. ಕಾಳೇಗೌಡ ನಾಗಾವರ ಅವರು ಕೃಷ್ಣಪ್ಪನವರಿಗೆ ಪತ್ರ ಬರೆದು, 'ಕರ್ನಾಟಕದ ದಲಿತ ಮತ್ತು ಪ್ರಗತಿಪರ ಲೇಖಕರು ಕೂಡಿ ಈ ಕೆಲಸವನ್ನು ನಮ್ಮ ಹೋರಾಟದ ಮುಖ್ಯ ಕರ್ತವ್ಯವಾಗಿ ಪರಿಗಣನೆ ಮಾಡಬೇಕಾಗಿದೆ' ಎನ್ನುತ್ತಾ, ಧನಸಹಾಯ, ಪ್ರತಿನಿಧಿಗಳ ಆಯ್ಕೆ ಮತ್ತಿತರ ಎಲ್ಲಾ ಬಗೆಯ ಸಹಕಾರ ಬಯಸಿ, 'ವಿಮರ್ಶೆ ಮತ್ತು ಸೈದ್ಧಾಂತಿಕ ಹೋರಾಟ' ಎಂಬ ಗೋಷ್ಠಿಯ ಅಧ್ಯಕ್ಷತೆ ವಹಿಸಲು ಕೋರಿದ್ದರು. ಆಗಿನ ಬಂಡಾಯ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿಯಲ್ಲಿ ಓ. ಶ್ರೀಧರನ್ ಅಧ್ಯಕ್ಷರಾಗಿಯೂ, ಬರಗೂರು ರಾಮಚಂದ್ರಪ್ಪ, ಡಿ.ಆರ್. ನಾಗರಾಜ್, ಡಾ. ಕಾಳೇಗೌಡ ನಾಗಾವರ, ಸಿದ್ದಲಿಂಗಯ್ಯ, ಶೂದ್ರ ಶ್ರೀನಿವಾಸ್, ಸಿ.ಜಿ. ಕೃಷ್ಣಸ್ವಾಮಿ, ರಾಮದೇವ್ ರಾಕೆ ಸಂಚಾಲಕರಾಗಿಯೂ, ಓ. ರಾಜಣ್ಣ ಖಜಾಂಚಿಯಾಗಿಯೂ ಇದ್ದರು. ಈ ಎಲ್ಲಾ ಬೆಳವಣಿಗೆಗಳಿಂದಾಗಿ ಕೃಷ್ಣಪ್ಪ, 'ನನ್ನ ವೇದಿಕೆ ಬಂಡಾಯ ಸಾಹಿತ್ಯ ಸಮ್ಮೇಳನವೇ ಹೊರತು, ಬೂಸಾ ಕ್ರಾಂತಿಕಾರಿಗಳಂತೆ ಧರ್ಮಸ್ಥಳದ ಸಮ್ಮೇಳನವಲ್ಲ. ಧರ್ಮಸ್ಥಳದ ಸಮ್ಮೇಳನವನ್ನು ತಿರಸ್ಕರಿಸುವುದೇ ನನ್ನ ಕರ್ತವ್ಯ' ಎಂದು ತೀರ್ಮಾನಿಸಿ ಹಂಪನಾರವರಿಗೆ ಅದರಂತೆ ಪತ್ರ ಬರೆದರು. ಆದರೂ ಸಹ ಕಡೆಗಳಿಗೆವರೆಗೂ ಹಂಪನಾ ಕೃಷ್ಣಪ್ಪನವರನ್ನು ಒತ್ತಾಯ ಪೂರ್ವಕವಾಗಿ ಆಹ್ವಾನಿಸುವುದನ್ನು ನಿಲ್ಲಿಸಲೇ ಇಲ್ಲ.

ಇದೇ ಸಮಯದಲ್ಲಿ ಸಂಯುಕ್ತ ಕರ್ನಾಟಕ ಪತ್ರಿಕೆಯವರು 'ದಲಿತ ಸಾಹಿತ್ಯಕ್ಕೆ ಪ್ರತ್ಯೇಕ ವೇದಿಕೆ ಅವಶ್ಯಕವೇ ?' ಎಂಬ ಚರ್ಚೆಯೊಂದನ್ನು ಪ್ರಾರಂಭಿಸಿ ಕೃಷ್ಣಪ್ಪನವರಿಗೂ ಪ್ರಶ್ನೆಗಳನ್ನು ಕಳುಹಿಸಿದ್ದರು. ಈ ವಿಷಯದಲ್ಲಿ ಕೃಷ್ಣಪ್ಪನವರು ಬರೆದ ಉತ್ತರದ ಸಾರಾಂಶವನ್ನು ಹೀಗೆ ಹೇಳಬಹುದು: 'ದಲಿತ ಸಾಹಿತ್ಯ ಕೆಲವು ತತ್ವಗಳಿಗೆ ಬದ್ಧವಾದ ಸಾಹಿತ್ಯ, ಈ ದೇಶದ ಸಮಗ್ರ ವ್ಯವಸ್ಥೆಯ, ಶೋಷಣೆಯ ವಿರುದ್ಧ ಸಿಡಿದು ನಿಂತು, ಏಕಕಾಲದಲ್ಲಿ ಜಾತಿ ಬಂಡವಾಳಶಾಹಿ ಕೋಮುವಾದ, ವಸಾಹತು ಶಾಹಿ, ಸಾಮ್ರಾಜ್ಯಶಾಹಿ ವಿರೋಧಿ ತತ್ವಗಳಿಗೆ ಬದ್ಧನಾಗಿ ಬಂಡಾಯಗಾರನಾಗಿ ಬರೆಯುವವನು ದಲಿತ ಸಾಹಿತಿ ಎನಿಸಿಕೊಳ್ಳುತ್ತಾನೆ. ಅಂಥಹವರಿಂದ ರಚಿತವಾದ ಸಾಹಿತ್ಯ ದಲಿತ ಸಾಹಿತ್ಯ ಎನಿಸಿಕೊಳ್ಳುತ್ತದೆ. ಆಫ್ರಿಕಾದ ಪ್ರಸಿದ್ಧ ನೀಗ್ರೋ ಲೇಖಕ ಕಮರಲಾಯ ನೀಗ್ರೋತ್ವದ ಬಗ್ಗೆ ಎಷ್ಟೇ ಬದ್ಧನಾಗಿದ್ದರೂ ಅವನ ಕೃತಿಗಳಲ್ಲಿ ಬ್ರಿಟಿಷ್ ವಸಾಹತುಶಾಹಿಯನ್ನು ಪ್ರತಿಭಟಿಸದೆ ಇದ್ದುದರಿಂದ ಅವನನ್ನು 'ವಸಾಹತುಶಾಹಿ ಮಡಕೆ ಬೇಯಿಸುವವನು' ಎಂದು ಅವನನ್ನು ಕಪ್ಪು ಸಾಹಿತ್ಯದ ಪಟ್ಟಿಯಲ್ಲಿ ಸೇರಿಸಲು ನೀಗ್ರೋ ರಾಷ್ಟ್ರೀಯವಾದಿಗಳು ಪ್ರತಿಭಟಿಸುತ್ತಾರೆ.



ಬಹಳ ಜನಕ್ಕೆ ಕಾರಂತರ'ಚೋಮನ ದುಡಿ', ಗೊರೂರರ 'ಹೇಮಾವತಿ', ಕಟ್ಟೀಮನಿಯವರ 'ನೀ ನನ್ನ ಮುಟ್ಟಬೇಡ', ಅನಂತಮೂರ್ತಿಯವರ 'ಭಾರತೀಪುರ', ಭೈರಪ್ಪನವರ 'ದಾಟು' ದಲಿತ ಸಾಹಿತ್ಯ ಎಂಬ ಭಾವನೆ ಇದೆ. ಇದು ಶುದ್ಧ ತಪ್ಪು. ದಲಿತರ ಬಗ್ಗೆ ಬರೆಯುವ ಅವರಿಗೆ ಜಾತಿ ವಿರೋಧಿ ಇತ್ಯಾದಿಗಳ ಬಗ್ಗೆ ಯಾವ ನಿಚ್ಚಳ ಧೋರಣೆಗಳು ಇಲ್ಲ. ಹಿಂದೂ ಜಾತಿವ್ಯವಸ್ಥೆಯ ಕ್ರೌರ್ಯವನ್ನು ವರ್ಣಿಸುವ ಇವರು ಜಾತಿಪೊರೆಯನ್ನು ಕಳಚದೆ, ಪ್ರತಿಭಟಿಸದೆ ಇರುವುದು ಗಮನಾರ್ಹ. ಹೀಗಾಗಿ ದಲಿತರ ವಿಮೋಚನೆಗೆ ಮಾರ್ಗವಾಗುವಂಥಹ ಪರಿಹಾರಗಳನ್ನು ಮಾತ್ರ ಮೇಲಿನ ಕೆಲವು ಕೃತಿಗಳಲ್ಲಿ ಕಾಣಬಹುದು ಆದ್ದರಿಂದಲೇ ಮಹಾರಾಷ್ಟ್ರದ ದಲಿತ ಸಾಹಿತಿ ಕೇಶವವಸ್ತುರವರು ಮೆಹರ್ ಹುಡುಗನ ಬಗ್ಗೆ ಬರೆದ ಪದ್ಯ. ಎಸ್.ಎಂ. ಮೇಟಿಯವರ ಮಹರ್‌ರ ಜೀವನ ಕುರಿತು ಬರೆದ ಕತೆಗಳು, ಇತ್ತೀಚಿನ ಜಯಂತ್ ದಲವಿಯವರ 'ಚಕ್ರ' ಕಾದಂಬರಿ, ದಲಿತರನ್ನು ಕುರಿತಾದ ಬರಹಗಳನ್ನು ದಲಿತ ಸಾಹಿತ್ಯವೆಂದು ಕರೆಯಲು ತಿರಸ್ಕರಿಸಿರುತ್ತಾರೆ. ದಲಿತನಾಗಿ ಹುಟ್ಟಿದ ಮಾತ್ರಕ್ಕೆ ಅವನು ಬರೆದ ಸಾಹಿತ್ಯವೆಲ್ಲಾ ದಲಿತ ಸಾಹಿತ್ಯವೆಂದಾಗಲೀ, ದಲಿತೇತರರು ದಲಿತರ ಬಗ್ಗೆ ಅನುಕಂಪಿಸಿ ಬರೆದ ಮಾತ್ರಕ್ಕೆ, ದಲಿತಸಾಹಿತ್ಯ ಎಂದಾಗಲಿ ಭಾವಿಸುವುದು ತಪ್ಪು. ನಾನು ಈ ಹಿಂದೆಯೇ ವಿವರಿಸಿರುವಂತೆ, ದಲಿತ ಸಾಹಿತ್ಯ ತತ್ವಗಳಿಗೆ ಬದ್ಧವಾದ ಕಮಿಟೆಡ್ ಸಾಹಿತ್ಯ. ದೇವನೂರು ಮಹಾದೇವ, ಸಿದ್ದಲಿಂಗಯ್ಯ, ಇಂಥೂದರ ಹೊನ್ನಾಪುರ, ಎಚ್. ಗೋವಿಂದಯ್ಯ, ವಿಜಯ ಪಾಟೀಲ ಇವರ ಕೃತಿಗಳು ಇದಕ್ಕೆ ಉತ್ತಮ ನಿದರ್ಶನ.

ಅಮೇರಿಕಾದಲ್ಲಿ ನೀಗ್ರೋ ಚಳುವಳಿಯ ಅಂಗವಾಗಿ ಹುಟ್ಟಿದ ಕಪ್ಪು ಸಾಹಿತ್ಯ, ದಲಿತ್ ಪ್ಯಾಂಥರ್ ಚಳುವಳಿಯ ಅಂಗವಾಗಿ ಮಹಾರಾಷ್ಟ್ರದಲ್ಲಿ ಬೆಳೆಯುತ್ತಿರುವ ದಲಿತ ಸಾಹಿತ್ಯ ಹಾಗೆಯೇ ದಸಂಸ ಚಳುವಳಿಯ ಅಂಗವಾಗಿ ಬೆಳೆಯುತ್ತಿರುವ ಕನ್ನಡದ ದಲಿತ ಸಾಹಿತ್ಯ– ಐತಿಹಾಸಿಕ ಅನಿವಾರ್ಯತೆಯ ಚಳುವಳಿಯ ಪ್ರತಿರೂಪಗಳಾಗಿವೆ. ಇವರೆಲ್ಲರಿಗೂ ಅಂತರರಾಷ್ಟ್ರೀಯವಾದ ಸಮಾನ ಭಾವಕೋಶವೊಂದಿದ್ದು, ಅವರ ಶೋಷಣೆ ರೀತಿಗಳು, ಪ್ರತಿಭಟನೆಗಳು ಸಮಾನವಾಗಿರುವುದು ಗಮನಾರ್ಹ. ದಲಿತ ಲೇಖಕನೊಬ್ಬ ಅನ್ಯಾಯದ ವಿರುದ್ಧ ಸಿಡಿದೇಳುವುದರ ಮೂಲಕ ಅವನು ಸಮಗ್ರ ಕ್ರಾಂತಿಗೆ ಜನಾಂಗವನ್ನು ಸಿದ್ಧಗೊಳಿಸುತ್ತಾನೆ. ಅಂಥ ಸಂದರ್ಭದಲ್ಲಿ ಅವನ ಕಾವ್ಯ ಖಡ್ಗವಾಗುತ್ತದೆ. ಹೀಗಿರುತ್ತ, ದಲಿತಸಾಹಿತ್ಯ, ಪಟ್ಟಭದ್ರ ಹಿತಾಸಕ್ತರ ಅದ್ದೂರಿ ವೇದಿಕೆ ಮೇಲೆ, ಪ್ರತ್ಯೇಕ ಗೋಷ್ಠಿಗಾಗಿ ಬೇಡಿಕೆ ಸಲ್ಲಿಸುವುದೇ ಆಗಲೀ, ಪಾರ್ಟಿ ಹಿತಾಸಕ್ತಿಯಿಂದ ಮಂತ್ರಿಯೊಬ್ಬ ಶಿಫಾರಸ್ಸು ಮಾಡುವುದೇ ಆಗಲೀ ಅನುಚಿತ ಅಸಂಬದ್ಧ ಎಂದು ನನಗನಿಸುತ್ತದೆ.'

ಕಾಕತಾಳಿಯವೆಂಬಂತೆ ಇದೇ ಸಮಯದಲ್ಲಿ ಮಂಗಳೂರಿನಲ್ಲಿನ ಸಂಘಟನೆಯ ಕಾರ್ಯಕ್ಕಾಗಿ, ನಾನು ಕೃಷ್ಣಪ್ಪ ಹೋಗಿದ್ದೆವು. ನಾವು ಅಲ್ಲಿಗೆ ಹೋದ ಸಂದರ್ಭದಲ್ಲಿ ಧರ್ಮಸ್ಥಳದ ಸಮ್ಮೇಳನಕ್ಕೆ ಭಾಗಿಯಾಗುವುದಕ್ಕಾಗಿಯೇ ಇವರು ಪೂರ್ವಭಾವಿಯಾಗಿ ಹೋಗಿದ್ದಾರೆಂಬ ಪುಕಾರುಗಳನ್ನು ಕೆಲವರು ಹಬ್ಬಿಸಿದ್ದರು. ಈ ಸುಳ್ಳು ಸುದ್ದಿ ಬಹಳ ಕಾಲ ನಿಲ್ಲಲಿಲ್ಲವೆಂಬುದು ಬೇರೆ ವಿಷಯ. ಬಂಡಾಯ ಸಾಹಿತ್ಯ ಸಮ್ಮೇಳನದ ರೂಪುರೇಷೆಗಳು ಸಿದ್ಧಗೊಂಡು, 'ಖಡ್ಗವಾಗಲಿ ಕಾವ್ಯ ಜನರ ನೋವಿಗೆ ಮಿಡಿವ ಪ್ರಾಣಮಿತ್ರ' ಎಂಬ ಘೋಷವಾಕ್ಯದ ಕರಪತ್ರಗಳು, ಸದಸ್ಯತ್ವ, ಕೂಪನ್‌ಗಳು, ದೇಣಿಗೆ ರಸೀದಿಗಳು ನಮ್ಮ ಮನೆಗೆ ಬಂದವು.

ನಾನು, ನನ್ನ ಕಚೇರಿಯಲ್ಲಿ, ಸ್ನೇಹಿತರ ಬಳಗದಲ್ಲಿ ಅವುಗಳನ್ನು ವಿತರಿಸಿ, ದೇಣಿಗೆ ಸಂಗ್ರಹಿಸಿಕೊಟ್ಟೆ. ಕೃಷ್ಣಪ್ಪ ಅವರ ಹೋರಾಟದ ಒಡನಾಡಿ ದೇವನೂರು ಮಹಾದೇವರವರಿಗೆ ಕಸಾಪದ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸದಿರುವ ನಿರ್ಧಾರ ಮತ್ತು ಬಂಡಾಯ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸುವ ಬಗೆಗಿನ ಸಿದ್ಧಾಂತಬದ್ಧ ತೀರ್ಮಾನಗಳ ಕುರಿತು ಒಟ್ಟು ಹನ್ನೆರಡು ಪ್ರಶ್ನೆಗಳುಳ್ಳ ಪತ್ರವೊಂದನ್ನು ಬರೆದಿದ್ದರು ಇದಕ್ಕೆ ಡಿ.ಆರ್. ನಾಗರಾಜ್‌ರವರು ಸುದೀರ್ಘವಾಗಿ ಉತ್ತರಿಸುತ್ತಾ 'ನೀವು ಎತ್ತಿರುವ ಪ್ರಶ್ನೆಗಳು ಅತ್ಯಂತ ಪ್ರಮುಖವಾದುವಾಗಿವೆ. ಅದನ್ನು ಬರೀ ಮಹಾದೇವರಲ್ಲದೆ ನಾವೆಲ್ಲರೂ ಗಂಭೀರವಾಗಿ ಯೋಚನೆ ಮಾಡಬೇಕಾಗಿದೆ.ನೀವು ನಮ್ಮ ಸಮ್ಮೇಳನದ ಗೋಷ್ಠಿಯಲ್ಲಿ ಭಾಗವಹಿಸಲೇಬೇಕೆಂದು ವೈಯಕ್ತಿಕ, ಆತ್ಮೀಯ ಒತ್ತಾಯ ಹಾಕುತ್ತಿದ್ದೇವೆ. ಪ್ರಗತಿಪರ ಮತ್ತು ದಲಿತ ಲೇಖಕರ ಚಳುವಳಿಗಳ ಒಗ್ಗಟ್ಟು ಬಹಳ ಮುಖ್ಯ. ಏಕೆಂದರೆ ನಾವು ಹೋರಾಟ ಮಾಡಬೇಕಾಗಿರುವುದು ಸಾಮಾನ್ಯ ಶತ್ರುವಿನ ವಿರುದ್ಧ' ಎಂದು ಬರೆದಿದ್ದರು. ಈಗಾಗಲೇ ಬಂಡಾಯ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸುವ ಬಗ್ಗೆ ಧೃಡ ನಿರ್ಧಾರ ತೆಗೆದುಕೊಂಡಿದ್ದ ಕೃಷ್ಣಪ್ಪ. ದಸಂಸದ ಎಲ್ಲಾ ಶಾಖೆಗಳಿಗೆ ಪತ್ರ ಬರೆದು, 'ಧರ್ಮಸ್ಥಳದ ಸಾಹಿತ್ಯ ಸಮ್ಮೇಳನ ಪ್ರತಿಗಾಮಿ. ಬಂಡಾಯ ಸಾಹಿತ್ಯ ಸಮ್ಮೇಳನವು ಮಾರ್ಚ್ ೧೦, ೧೧ನೇ ತಾರೀಖಿನಲ್ಲಿ ನಡೆಯುತ್ತಿದೆ. ಇದು ಕರ್ನಾಟಕದ ಕೆಲವು ಕ್ರಾಂತಿಕಾರಿಗಳಿಗೆ ಒಡ್ಡಿದ ಅಗ್ನಿ ಪರೀಕ್ಷೆ. ಅವರು ನಿಜವಾಗಿಯೂ ಕ್ರಾಂತಿಕಾರಿಗಳಾಗಿದ್ದರೆ ಧರ್ಮಸ್ಥಳದ ಸಮ್ಮೇಳನ ಬಿಟ್ಟು ಬರಲಿ. ಈ ಕುರಿತು ಚರ್ಚಿಸಲು ಬೆಂಗಳೂರಿನಲ್ಲಿ ಅದೇ ದಿನ ರಾಜ್ಯ ಸಮಿತಿ ಸಭೆ ಕರೆಯಲಾಗಿದ್ದು, ತಾಲ್ಲೂಕು ಸಂಚಾಲಕರೂ ಬರಬೇಕು' ಎಂದು ತಿಳಿಸುತ್ತಾ ದಸಂಸ ಶಾಖೆಗಳವರು, ಬಂಡಾಯ ಸಾಹಿತ್ಯ ಸಮ್ಮೇಳನವನ್ನು ಬೆಂಬಲಿಸಿ ಪತ್ರಿಕಾ ಹೇಳಿಕೆ ಕೊಡಬೇಕೆಂದೂ ಸೂಚಿಸಿದ್ದರು.

**(ಮುಂದುವರೆಯುವುದು)**

## ಪ್ರಿಯ ಓದುಗರೇ, ಗಮನಿಸಿ, ನಿಮ್ಮ ಚಂದಾ ಮುಗಿದಿದೆ

**ಈ ಸಂಚಿಕೆಯೊಂದಿಗೆ ಪತ್ರಿಕೆಯ ಮೂರನೆಯ ಸಂಪುಟ ಮುಕ್ತಾಯವಾಗಿದ್ದು, ನಿಮ್ಮಲ್ಲಿ ಬಹಳ ಜನರ ಚಂದಾ ಮುಗಿದಿದೆ. ಚಂದಾ ಮುಗಿದವರಿಗೆ ಈ ಸಂಚಿಕೆಯೊಂದಿಗೆ ಒಂದು ಸೂಚನಾ ಪತ್ರ ಕಳಿಸಿದ್ದು, ಅದನ್ನು ಗಮನಿಸಬೇಕಾಗಿ ಕೋರುತ್ತೇವೆ. ಈ ಸೂಚನಾ ಪತ್ರ ಪಡೆಯದ; ಆದರೆ ಪತ್ರಿಕೆಯ ಆರಂಭದ ವರ್ಷದಲ್ಲಿ ಒಮ್ಮೆಗೇ ಐದು ನೂರು ರೂಪಾಯಿಗಳ ಚಂದಾ ನೀಡಿದ್ದ ಓದುಗರೂ ಈಗ ಚಂದಾ ನೀಡಿದರೆ ಪತ್ರಿಕೆಗೆ ಅನುಕೂಲವಾಗುತ್ತದೆ.**

**ದಯವಿಟ್ಟು ಒಂದು ವರ್ಷದ ಚಂದಾ, ಅಂದರೆ ರೂ.೧೫೦/– ಅಥವಾ ಹೆಚ್ಚೆಂದರೆ ಎರಡು ವರ್ಷಗಳ ಚಂದಾ, ಅಂದರೆ ರೂ.೩೦೦/–ಗಳನ್ನು ಮಾತ್ರ ಕಳಿಸಿ. ಪತ್ರಿಕೆಗೆ ಹೆಚ್ಚಿನ ಮೊತ್ತದ ಹಣ ಸಹಾಯ ಮಾಡಬಯಸುವವರು ನಮ್ಮ ಮುಂದಿನ ಸಂಚಿಕೆ ವಾರ್ಷಿಕ ವಿಶೇಷ ಸಂಚಿಕೆಯಾಗಿ ಬರುತ್ತಿದ್ದು, (ವಿವರಗಳಿಗೆ ೧೬ನೇ ಪುಟ ನೋಡಿ) ಅದಕ್ಕೆ ಶುಭಾಶಯ/ಜಾಹೀರಾತುಗಳನ್ನು ನೀಡಬಹುದು.**

**ಚಂದಾ/ಜಾಹೀರಾತು ಹಣವನ್ನು ಸಂಪಾದಕರು: 'ಹೊಸ ಮನುಷ್ಯ' ಹೆಸರಿಗೆ ಬರೆದ ಚೆಕ್/ಡಿಡಿ ಮೂಲಕ ಅಥವಾ ಸಂಪಾದಕರ ಹೆಸರಿಗೆ (ಡಿ.ಎಸ್. ನಾಗಭೂಷಣ) ಎಂ.ಓ ಮಾಡಬಹುದು. ಇಲ್ಲವೇ, ಸಂಪಾದಕರು, ಹೊಸ ಮನುಷ್ಯ–ಈ ಹೆಸರಿನಲ್ಲಿ ಶಿವಮೊಗ್ಗದ ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್‌ನ (IFSC Code: SBMY 0040444) ವಿನೋಬನಗರ ಶಾಖೆಯಲ್ಲಿ ತೆರೆದಿರುವ ಕರೆಂಟ್ ಅಕೌಂಟ್ ಸಂಖ್ಯೆ : 64110358330 ಇಲ್ಲಿಗೆ ಚಂದಾ/ಜಾಹೀರಾತು ಹಣವನ್ನು ವರ್ಗಾಯಿಸಿ ಪತ್ರ ಮುಖೇನ ಅಥವಾ ದೂರವಾಣಿ ಸಂದೇಶದ ಮೂಲಕ ಅದರ ವಿವರ ಮತ್ತು ತಮ್ಮ ವಿಳಾಸವನ್ನು ಸಂಪಾದಕರಿಗೆ ತಿಳಿಸಬೇಕು. ಗಮನಿಸಿ, ಪತ್ರಿಕೆಯ ವಿಳಾಸ ಪತ್ರಿಕೆಯ ಮುಖಪುಟದಲ್ಲಿದೆ.–ಸಂ.**

## ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

ಜೂನ್ ಸಂಚಿಕೆ ತಲುಪಿದ. ಪತ್ರಿಕೆ ಸಂಚಿಕೆಯಿಂದ ಸಂಚಿಕೆಗೆ ಉತ್ತಮವಾಗುತ್ತಾ ಸಾಗಿದೆ. ನಮ್ಮ ಅವಿರತ ಶ್ರಮಕ್ಕೆ ಅಭಿನಂದನೆಗಳು. ಪತ್ರಿಕೆಯೊಂದನ್ನು ಹೊರತರಲು ಸಮೃದ್ಧ ಸಂಪನ್ಮೂಲ ಬೇಕಿಲ್ಲ ಎಂಬುದನ್ನು ನೀವು ಸಾಬೀತುಪಡಿಸಿದ್ದೀರಿ. ಪತ್ರಿಕೆಯನ್ನು ಹೆಚ್ಚು ಯುವಜನರಿಗೆ ತಲುಪಿಸುವ ದಿಸೆಯಲ್ಲಿ ನಾವೆಲ್ಲ ಪ್ರಯತ್ನಿಸೋಣ.

' **–ಡಾ. ಕೆ. ಪುಟ್ಟಸ್ವಾಮಿ,** ಬೆಂಗಳೂರು

ಜೂನ್ ಸಂಚಿಕೆ ಭಾವೋದ್ದೀಪಕ ವಿಚಾರಪೂರ್ಣ ಸಂಚಿಕೆಯಾಗಿದೆ. 'ಮೋದಿಯವರ ಪರಿಶ್ರಮಕ್ಕೆ ಜನ ತಕ್ಕ ಪ್ರತಿಫಲ ನೀಡಿದ್ದಾರೆ' ಎಂಬ ಸಂಪಾದಕೀಯದ ಅಪಥ್ಯ ಪ್ರಶಂಸಾ ನುಡಿಯನ್ನು ಹೊರತುಪಡಿಸಿದರೆ ಮಿಕ್ಕುಳಿದಂತೆ ಸಂಪಾದಕೀಯದಲ್ಲಿ ಕಾಣುವ ಸ್ವೀಕಾರಾರ್ಹ 'ಹದ', ಪುಸ್ತಕಾವಲೋಕನದಲ್ಲಿ ಸವಿತಾ ನಾಗಭೂಷಣ ಅವರು ವಿಮರ್ಶೆಗೆ ತಂದಿರುವ ಮನತಟ್ಟಬಲ್ಲ ಅನುಭೂತಿ; ಮರೆಯಾದ ಸಮಜವಾದಿ ಸುನೀಲ್ ಅವರ ಆರ್ದ್ರ ನೆನಪಿನ ಚಿತ್ರ, ಅರ್ಧದಲ್ಲೇ ಚಳುವಳಿ ತೊರೆದು ಕಣ್ಮರೆಯಾದ ವಿಜಯ ಪಾಟೀಲರ ಹುಡುಕಟದ ತಹತಹದಲ್ಲಿ ಲೇಖಕಿ ಇಂದಿರಾ ಕೃಷ್ಣಪ್ಪ ವ್ಯಕ್ತಪಡಿಸುವ ಉತ್ಕಾಂಕೆ– ಇವೆಲ್ಲ ಸಂಚಿಕೆಯ ಭಾವೋದ್ದೀಪಕ ಭಾಗಗಳಾದರೆ, ಇಸ್ಲಾಂ ಕೇಂದ್ರಿತ ಪೂರ್ಣ ಪ್ರಮಾಣದ ಅರ್ಥಪೂರ್ಣ ಚರ್ಚೆ ಹೊಣೆಯರಿತ ಸಣ್ಣ ಪತ್ರಿಕೆಯೊಂದರ ದೊಡ್ಡ ಸಾಧನೆಯಂತಿದೆ. ಮುಕ್ತ, ದಿಟ್ಟ ವಿಮರ್ಶಾತ್ಮಕ ಹಾಗೂ ಸಹಾನುಭೂತಿಯ ನೆಲೆಯಿಂದ ಆಧುನಿಕ ಜಗತ್ತಿಗೆ ಇಸ್ಲಾಂ ತೆರೆದುಕೊಳ್ಳುತ್ತಿರುವ ಬಗೆಯನ್ನು ದೇಸಿ ಮತ್ತು ಜಾಗತಿಕ ಪರಿಸ್ಥಿತಿಗಳ ತಿಳಿವಿನ ಹಿನ್ನೆಲೆಯಲ್ಲಿ ವಿಶ್ಲೇಷಿಸುವ, ಸಂಘರ್ಷ ಮತ್ತು ಹೊಂದಾಣಿಕೆಯ ಸ್ವರೂಪವನ್ನು ಬಿಡಿಸಿಡಬಲ್ಲ ಛಾತಿ ತೋರುವ ಇಲ್ಲಿನ ಚಿಂತಕರ ಆಯ್ಕೆ ಕೂಡ ಪತ್ರಿಕೆಯ ಗಂಭೀರ ಕಾಳಜಿಯನ್ನು ತೋರುತ್ತದೆ.

ಕೊನೆಯದಾಗಿ ಸುಪ್ರೀಂ ಕೋರ್ಟಿನ ಮುಖ್ಯ ನ್ಯಾಯಮೂರ್ತಿಗಳಿಗೆ ಸಂಪಾದಕರು ಬರೆದ ದೇಸಿ ಭಾಷಾ ಮಾಧ್ಯಮದ ಅಗತ್ಯವನ್ನು ಮನವರಿಕೆ ಮಾಡಿಕೊಡುವ ಪತ್ರ, ಕನ್ನಡಕ್ಕಾಗಿ ಯಾರು, ಏನೆಲ್ಲ ಮಾಡಬೇಕಿದೆ ಎನ್ನುವುದಕ್ಕೆ ಉದಾಹರಣೆ ಮತ್ತು ಮಾರ್ಗದರ್ಶಿಯಗಿದೆ.

**–ಎಂ.ಎಲ್. ತಾರಕೇಶ್ವರಿ,** ಮಧುಗಿರಿ

ನೀವು ತಲುಪಿಸಿದ ಪತ್ರಿಕೆಯ ಮೂರೂ ಸಂಚಿಕೆಗಳನ್ನು(ಏಪ್ರಿಲ್, ಮೇ, ಜೂನ್, ೨೦೧೮) ಸವಿವರವಾಗಿ ಓದಿದೆ. ಸಂಪಾದಕೀಯದ ನಿಮ್ಮ ರಾಜಕೀಯ ವಿಶ್ಲೇಷಣೆ ತೀಕ್ಷ್ಣವಾಗಿದೆ. ಕನ್ನಡದ ಬಗ್ಗೆ ತಾವು ಎತ್ತಿರುವ ಪ್ರಶ್ನೆಗಳು ಪ್ರತಿಯೊಬ್ಬ ಕನ್ನಡಿಗನಗೂ ತಿಳಿಯಬೇಕಾದಂತಹವು. ಕೃಷ್ಣಪ್ಪನವರ ನೆನಪಿನ ಮಾಲೆ ಅದ್ಭುತವಾಗಿ ಮೂಡಿ ಬರುತ್ತಿದೆ. ಆ ಕಾಲಘಟ್ಟದ ಚಿತ್ರಣ ಕಣ್ಣ ಮುಂದೆ ಬರುತ್ತದೆ. ನಿಮ್ಮ ಪ್ರವಾಸ ಕುರಿತ ಟಿಪ್ಪಣಿಗಳಾದ 'ಬಸವಣ್ಣನನ್ನು ಹುಡುಕುತ್ತಾ...' ಈಗಿನ ಬಸವ ತತ್ವಗಳ ಸ್ಥಿತಿಯನ್ನು ತೆರೆದಿಡುತ್ತದೆ. ಈಗಿನ ತುರ್ತಾದ ಈ ಭೂಮಿಯನ್ನು ಸಂರಕ್ಷಿಸಿ ಮುಂದಿನವರಿಗೆ ಉಳಿಸುವಂತಹ ತಿರುಳನ್ನು ಹೊಂದಿರುವ ಸಮಾಜವಾದವನ್ನು ಪ್ರಚಾರ ಮಾಡುತ್ತಿರುವ ಪತ್ರಿಕೆ ಕಾರ್ಯ ಮಹತ್ತರವಾದದುದು.

ಒಟ್ಟಾರೆಯಾಗಿ ಪತ್ರಿಕೆಯ ಎಲ್ಲ ಅಂಕಣಗಳೂ ಆಳವಾಗಿ ಆಲೋಚಿಸುವಂತೆ ಓದುಗರನ್ನು ಪ್ರೇರೇಪಿಸುವಂತಿವೆ. ಇನ್ನೂ ಸರಳವಾಗಿ ವಿಷಯ ಮಂಡಿಸುವತ್ತ ಮತ್ತು ಸಮಾಜವಾದದ ಬಗ್ಗೆ ಏನೂ ತಿಳಿಯದಂಹ ಓದುಗನ್ನು ಪತ್ರಿಕೆ ಮರೆಯದೆ ರೂಪಿತವಾದರೆ ಚೆನ್ನ. ಪತ್ರಿಕೆ ಬಹುರೂಪಿಯಾಗಿ ಬೆಳೆಯುವ ಎಲ್ಲ ಸಾಧ್ಯತೆಗಳೂ ಕಾಣುತ್ತಿವೆ.

**–ವಿಕಾಸಚಂದ್ರ,** ಅರೇಹಳ್ಳಿ

ಪತ್ರಿಕೆಯ ಪುಟಪುಟಗಳು ಓದುಗನನ್ನು ಬೌದ್ಧಿಕವಾಗಿ, ತನ್ನ ಶೀರ್ಷಿಕೆಯ ಹಾಗೆ 'ಹೊಸ ಮನುಷ್ಯ'ನನ್ನಾಗಿಸಲು ಚಿಂತನೆಗಳ ಹೊಸ ಮಾರ್ಗವನ್ನು ತೆರೆಯುತ್ತವೆ. ಸಮಾಜವಾದದ 'ನಜ' ಅರ್ಥದ ಬದುಕು ನಡೆಸಿದವರನ್ನು ಮತ್ತು ನಡೆಸುತ್ತಿರುವವರನ್ನು ನಾಡಿಗೆ ಪರಿಚಯಿಸುತ್ತಿರುವದರಿಂದ ಹಾಗೂ ಕೃಷ್ಣಪ್ಪನವರ ಕುರಿತು ಇಂದಿರಾ ಕೃಷ್ಣಪ್ಪನವರ ಲೇಖನ ಮಾಲೆ ಪ್ರಕಟಗೊಳ್ಳುತ್ತಿರುವುದರಿಂದ ಕನಿಷ್ಠ ಆದರ್ಶಗಳನ್ನು ಪಾಲಿಸುವ ಬಗ್ಗೆ ಕೆಲವು ಓದುಗರಾದರೂ ಪ್ರಯತ್ನಿಸುತ್ತಾರೆಂದು ನನ್ನ ನಂಬಿಕೆ.'ಹೊಸ ಮನುಷ್ಯ'ನ ಓದು, ಬದುಕಿಗೆ ನೆಮ್ಮದಿ ನೀಡುವ ಚಿಂತನೆಗಳ ಖಜಾನೆ.

**–ಎಸ್.ಎನ್. ತಿಮ್ಮನಗೌಡ್ರ,** ಕೊಪ್ಪಳ

ಏಪ್ರಿಲ್, ಮೇ ಸಂಚಿಕೆಗಳು ತಲುಪಿದವು. ಸಂಪಾದಕೀಯ ಟಿಪ್ಪಣಿಗಳು ನಾವು ಅಂದುಕೊಂಡಿರುವ ಸತ್ಯದ ಆಚೆಗಿರುವ ಸತ್ಯಗಳನ್ನು ತಿಳಿಸಿಕೊಡುತ್ತವೆ. ಸಮಜವಾದಿ ಅಸ್ತಿತ್ವದ ಮೌಲ್ಯಗಳನ್ನು ಅರ್ಥ ಮಾಡಿಕೊಳ್ಳಬೇಕಾದರೆ ಖಂಡಿತ ಈ ಪತ್ರಿಕೆ ಓದಬೇಕು. ಕೃಷ್ಣಪ್ಪ ನೆನಪಿನ ಮಾಲೆ ಹಾಗೂ ತೇಲ್ತುಂಬ್ಡೆ ಲೇಖನಗಳು ಇಷ್ಟವಾದವು. ಮುಖಪುಟದಲ್ಲಿ ಚಿಕ್ಕದಾಗಿ ಪರಿವಿಡಿ ಇದ್ದರೆ ಚೆನ್ನ.

**–ಬಸವರಾಜ ಹೂಗಾರ,** ಕಾರವಾರ

# ಗಾಂಧಿ, ಅಂಬೇಡ್ಕರ್ ಮತ್ತು ಮೋದಿ...

–ಅನನ್ಯ ವಾಜಪೇಯಿ



ಇದು ಲೋಕಸಭಾ ಚುನಾವಣೆಗಳ ಮುನ್ನ, ಅಂಬೇಡ್ಕರ್ ಹುಟ್ಟು ಹಬ್ಬದ ಸಂದರ್ಭದಲ್ಲಿ ಬರೆದ (*ದ ಹಿಂದೂ*, ಏಪ್ರಿಲ್, ೧೭, ೨೦೧೪) ಲೇಖನ. ಅದರ ಕೆಲ ದಿನಗಳ ಹಿಂದೆ ಅಂಬೇಡ್ಕರರ 'ಜಾತಿ ವಿನಾಶ' ಪ್ರಬಂಧನ್ನು ಅರುಂಧತಿ ರಾಯ್ ತನ್ನ ವ್ಯಾಖ್ಯಾನಗಳೊಂದಿಗೆ **The Doctor and the Saint** ಕೃತಿಯ ಬಗ್ಗೆ ಖ್ಯಾತ ಅಂಬೇಡ್ಕರ್ ವಿದ್ವಾಂಸ ಆನಂದ್ ತೇಲ್ತುಂಬ್ಡೆ ಇದೇ ಪತ್ರಿಕೆಯಲ್ಲಿ ಬರೆದ ಲೇಖನದಲ್ಲಿ(ಇದರ ಕನ್ನಡ ಅನುವಾದಕ್ಕಾಗಿ ನೋಡಿ: 'ಹೊಸ ಮನುಷ್ಯ': ಮೇ, ೨೦೧೪) ಗಾಂಧಿ–ಅಂಬೇಡ್ಕರ್‌ರನ್ನು ಜೊತೆಯಾಗಿ ಚರ್ಚಿಸುವುದರ ವಿರುದ್ಧ ಕೆಲವು ಅಂಬೇಡ್ಕರ್‌ವಾದಿಗಳು ಎತ್ತಲಾರಂಭಿಸಿರುವ ಆಕ್ಷೇಪಣೆಯ ಬಗೆಗೆ ಪ್ರಸ್ತಾಪ ಮಾಡಿದ್ದರು. ಅದನ್ನು ನೆಪವಾಗಿಟ್ಟುಕೊಂಡು ಬರೆದಿರುವಂತಿರುವ ರಾಜಕೀಯ ಶಾಸ್ತ್ರಜ್ಞೆ ಶ್ರೀಮತಿ ಅನನ್ಯ ವಾಜಪೇಯಿ ಅವರ **Modern Day Enlightenment** ಎಂಬ ಶೀರ್ಷಿಕೆಯ ಈ ಮೂಲ ಇಂಗ್ಲಿಷ್ ಲೇಖನ ಮೋದಿ ನೇತೃತ್ವದ ಹಿಂದೂ ಬಲಪಂಥೀಯ ಸರ್ಕಾರ ಅಧಿಕಾರಕ್ಕೆ ಬರಲಿದೆಯೆಂಬ ಆತಂಕದಲ್ಲಿ ಹಲವು ಗಂಭೀರ ಪ್ರಶ್ನೆಗಳನ್ನು ಎತ್ತುತ್ತದೆ. ನಿರ್ದಿಷ್ಟವಾಗಿ ಗಾಂಧಿ–ಅಂಬೇಡ್ಕರ್ ನಡುವಣ ಚಾರಿತ್ರಿಕ ಸಂವಾದದ ಹಲವು ನೆಲೆಗಳ ಪರಿಶೀಲನೆಯ ಮೂಲಕ.

ಮೋದಿಯವರ ಸರ್ಕಾರ ಈಗ ಬಂದೇಬಿಟ್ಟಿದೆ! ಲೇಖಕಿಯ ಆತಂಕಗಗಳು ಎಷ್ಟು ನಿಜವಾಗುವವೋ ಇನ್ನೂ ಕಾದು ನೋಡಬೇಕಾಗಿದೆ. ಹಾಗೇ, ಈ ಆತಂಕಗಳ ಹಿನ್ನೆಲೆಯಲ್ಲಿ ಅವರು ದೇಶ ಇಂದು ಅಂಬೇಡ್ಕರ್‌ರತ್ತ ತಿರುಗಿ ಅವರ ಹಾದಿಯಲ್ಲಿ ಸಾಗಬೇಕಾಗಿದೆ ಎಂದು ಮಾಡುವ ಪ್ರತಿಪಾದನೆ ಎಷ್ಟು ಸ್ವಸಂಪೂರ್ಣವಾಗಿದೆ ಎಂಬುದೂ ಇನ್ನಷ್ಟು ಚರ್ಚೆಯಾಗಬೇಕಿದೆ. ಈ ಹಿನ್ನೆಲೆಯಲ್ಲಿ ಇಲ್ಲಿ ಈ ಲೇಖನವನ್ನು ಪ್ರಕಟಿಸಲಾಗುತ್ತಿದೆ. ಅಭಿಪ್ರಾಯಗಳಿಗೆ ಸ್ವಾಗತ.



ಡಾ|| ಬಿ.ಆರ್. ಅಂಬೇಡ್ಕರ್ ಹಾಗೂ ಮಹಾತ್ಮ ಗಾಂಧಿಯವರ ವಿಚಾರ ಧಾರೆಗಳನ್ನು ಹೋಲಿಸುವುದು, ವೈದೃಶ್ಯಗಳನ್ನು ಗುರುತಿಸುವುದು ಅಥವಾ ಯಾವುದೇ ರೀತಿಯ ಚರ್ಚೆಗೊಳಪಡಿಸುವುದನ್ನು ಮಾಡ ಕೂಡದು ಎಂಬ ಗಟ್ಟಿ ದನಿಯ ಆಗ್ರಹ ದಲಿತ ಬುದ್ಧಿ ಜೀವಿಗಳು ಹಾಗೂ ಅಂಬೇಡ್ಕರ್‌ವಾದಿಗಳಿಂದ ಈ ಕೆಲವು ತಿಂಗಳುಗಳಿಂದ ಕೇಳಿಬರುತ್ತಿದೆ. ಇಬ್ಬರ ಹೆಸರನ್ನೂ ಒಂದೇ ಉಸಿರಿನಲ್ಲಿ ಪ್ರಸ್ತಾಪಿಸುವುದೆಂದರೆ, ಅಂಬೇಡ್ಕರ್‌ರವರ ಗಮನೀಯತೆ ಮತ್ತು ಮಹತ್ವಗಳನ್ನು ಬದಿಗೊತ್ತಿ, ಅವರ ಕ್ರಾಂತಿಕಾರಿ ಕೊಡುಗೆಯ ಚೂಪುತನವನ್ನು ಮೊಂಡಾಗಿಸಿ ಅವರನ್ನು ರಾಷ್ಟ್ರೀಯ ಮುಖ್ಯ ವಾಹಿನಿಯಲ್ಲಿರುವ ಆಧುನಿಕ ರಾಜಕೀಯ ಪ್ರಜ್ಞೆಯ ಗಾಂಧಿ, ನೆಹರೂ, ಟ್ಯಾಗೂರ್ ಹಾಗೂ ಇನ್ನಿತರರೊಂದಿಗೆ ಸಾರಿಸಿ ಗುಡಿಸಿದಂತೆ ಎಂಬುದು ಇವರ ಅಭಿಪ್ರಾಯ. ಇನ್ನೊಂದು ಬಗೆಯಲ್ಲಿ ಹೇಳುವುದಾದರೆ, ಯಾರಿಗೂ ಹೋಲಿಸಲಾಗದ ಅಂಬೇಡ್ಕರ್ ವ್ಯಕ್ತಿತ್ವದಲ್ಲಿ ಒಂದು ಅನನ್ಯತೆ ಇದೆ. ಈ ಅನನ್ಯತೆಯ ಪ್ರತಿಪಾದಕರು ಅವರನ್ನು ಗಾಂಧಿಯೂ ಸೇರಿದಂತೆ ಅವರ ಸಂಗಾತಿಗಳು, ಸಮಕಾಲೀನ ಚಿಂತಕರು ಹಾಗೂ ನಾಯಕರೊಡನೆ ಚರ್ಚಿಸುವುದರ ಬಗ್ಗೆ ಉರಿದೇಳುತ್ತಾರೆ. ಅದರಲ್ಲೂ ಅವರು ಜಾತ್ಯಸ್ಥ ಹಿಂದೂಗಳಾಗಿದ್ದರಂತೂ ಮುಗಿದೇ ಹೋಯಿತು!

## ಗಾಂಧಿ-ಅಂಬೇಡ್ಕರ್ ಸಂವಾದ

ನಿಜ, ಅಂಬೇಡ್ಕರ್ ಹಲವು ನೆಲೆಗಳಲ್ಲಿ ಓರ್ವ ಬುದ್ಧಿಜೀವಿಯಾಗಿ, ರಾಜಕಾರಣಿಯಾಗಿ ಹಾಗೂ ಮಾನವ ಜೀವಿಯಾಗಿ ಅನನ್ಯ ಎನ್ನುವುದರಲ್ಲಿ ಅನುಮಾನವೇ ಇಲ್ಲ. ಊಹಿಸಲಾಗದಂತಹ ವಿರೋಧಗಳ ನಡುವೆಯೂ ಅವರು ತನ್ನ ಜೀವಿತ ಕಾಲದ ಚರಿತ್ರಾರ್ಹ ಘಟ್ಟದ ಶ್ರೇಷ್ಠ ವ್ಯಕ್ತಿಯಾಗಿ ಬೆಳೆದು ನಿಂತರು. ಇದರರ್ಥ ಅವರು ಚಿಂತಿಸಿದ್ದು, ಕ್ರಿಯಾಶೀಲರಾಗಿದ್ದು ಏಕಾಂಗಿಯಾಗಿ ಬಹು ನೆಲೆಯ ಗುರುಗಳ, ರೂವಾರಿಗಳ, ಪೋಷಕರ, ಸಂಗಾತಿ ಹೋರಾಟಗಾರರ, ಅನುಯಾಯಿಗಳ, ಬೆಂಬಲಿಗರ, ಟೀಕಾಕಾರರ, ವಿರೋಧಿಗಳ, ವಿಶ್ಲೇಷಕರ, ವ್ಯಾಖ್ಯಾನಕಾರರ ಶ್ರೀಮಂತ ಪರಂಪರೆಯಿಂದ ದೂರವಿದ್ದರೆಂದಲ್ಲ. ಒಂದು ಸುದೀರ್ಘ ಮತ್ತು ಸಂಕೀರ್ಣವಾದ ನ್ಯಾಯಶಾಸ್ತ್ರ, ರಾಜಕಾರಣ, ವಿದ್ವತ್ತು, ಧಾರ್ಮಿಕ ಚಿಂತನೆಗಳೊಡನೆ ಅತ್ಯಂತ ಸುದೀರ್ಘವೂ, ಸಂಕೀರ್ಣವೂ ಆದ ವೃತ್ತಿ ಜೀವನ ನಿರ್ವಹಿಸಿ, ಸಾರ್ವಜನಿಕ ಬದುಕಿನ ನಟ್ಟ ನಡುವೆ ಬಾಳಿದ ಚಾರಿತ್ರಿಕ ಮಹತ್ವವುಳ್ಳ ಇನ್ಯಾವುದೇ ವ್ಯಕ್ತಿಯಂತೆ ಅಂಬೇಡ್ಕರ್ ಕೂಡ ಹಲವು ಬಗೆಯ ಜನರಿಂದ ಸುತ್ತುವರಿಯಲ್ಪಟ್ಟಿದ್ದರು. ಕೆಲವರು ಸಹಕರಿಸುವವರಾದರೆ, ಪ್ರತಿರೋಧಿಸುವವರು ಇನ್ನಿತರರು. ಅವರು ತೀರಿಕೊಂಡ ಬಹುಕಾಲದ ನಂತರದ ಇಂದು ಕೂಡ ಅಂಬೇಡ್ಕರ್‌ರವರ ವಾರಸುದಾರಿಕೆಗೆ ಬಹಳ ಜನ ಸ್ಪರ್ಧೆಯಲ್ಲಿದ್ದಾರೆ. ಅದರಲ್ಲೂ ದಲಿತರು ಹಾಗೂ ನವ ಬೌದ್ಧರು ಈ ಸ್ಪರ್ಧೆಯ ಮುಂಚೂಣಿಯಲ್ಲಿದ್ದಾರೆ ಮತ್ತು ಹಾಗೆ ಇರುವುದು ಸಹಜ ಕೂಡ. ಆದರೆ ಅವರಷ್ಟೇ ಅಲ್ಲ, ಭಾರತದ ಆಧುನಿಕತಾವಾದದ ಅಸ್ತಿಭಾರದ ಸ್ವರೂಪವನ್ನು ಅರಿಯಬಯಸುವವರು ಅಂಬೇಡ್ಕರ್ ಹಾಗೂ ಅವರು ಪ್ರತಿಪಾದಿಸಿದ ಎಲ್ಲದರಲ್ಲಿ ಗಂಭೀರವಾಗಿ ತೊಡಗಿಕೊಳ್ಳಬೇಕಿದೆ.



ಅಂಬೇಡ್ಕರ್ ಹಾಗೂ ಗಾಂಧೀಜಿಯವರನ್ನು ಒಂದು ಜೊತೆಯೆಂಬಂತೆ ಚರ್ಚಿಸುವ ಪರಿ ಹೊಸದೇನಲ್ಲ. ೧೯೯೦ರ ಪ್ರಾರಂಭದಲ್ಲಿ ಪ್ರೊ. ಡಿ.ಆರ್. ನಾಗರಾಜ್ ಇವರಿಬ್ಬರ ನಡುವಣ ತೊಳಲಾಟದ ಮಾತುಕತೆ, ಒಲ್ಲದ ಮನಸ್ಸಿನ ಒಮ್ಮತ ಹಾಗೂ ಅವರ ಆಪ್ತ ಶತ್ರುತ್ವವನ್ನು ಹೊಸ ಬಗೆಯಲ್ಲಿ ಅರ್ಥೈಸುವ ಪ್ರಯತ್ನ ಮಾಡಿದರು. 'ಆತ್ಮ ಶುದ್ಧಿ ವಿರುದ್ಧ ಆತ್ಮ ಗೌರವ– ದಲಿತ ಚಳುವಳಿಯ ಬೇರುಗಳು' (೧೯೯೨) ಎಂಬ ಮಹತ್ವದ ಪ್ರಬಂಧದಲ್ಲಿ ಮಹತ್ವದ ಅಂಶಗಳನ್ನು ಪ್ರಸ್ತಾಪಿಸಿದ್ದಾರೆ. ಮೊದಲನೆಯದಾಗಿ 'ಅಸ್ಪೃಶ್ಯತೆ'ಯನ್ನು ಒಂದು ರಾಜಕೀಯ ಸಮಸ್ಯೆಯೆಂದು ಪ್ರಥಮವಾಗಿ ಗ್ರಹಿಸಿದ್ದು ಗಾಂಧೀಜಿ. ಅವರ ಕಾಳಜಿಗಳು ಲೌಕಿಕಕ್ಕಿಂತ ಹೆಚ್ಚಾಗಿ ಆಧ್ಯಾತ್ಮಿಕವೇ ಆಗಿದ್ದಾಗ್ಯೂ ಸಹ. ಎರಡನೆಯದಾಗಿ, ೧೯೩೨ರ ಪೂನಾ ಒಪ್ಪಂದದ ಮೊದಲು ಹಾಗೂ ನಂತರ ಅವರಿಬ್ಬರೂ ಅಸ್ಪೃಶ್ಯತೆಯ ಸಮಸ್ಯೆಯಯನ್ನು ಕುರಿತಂತೆ ತಮ್ಮ ವಿಭಿನ್ನ ದೃಷ್ಟಿಕೋನಗಳ ಬಗ್ಗೆ ತೀವ್ರವಾಗಿಯೇ ಚರ್ಚಿಸಿದ್ದರು. ಮೂರನೆಯದಾಗಿ, ಗಾಂಧಿ ಮತ್ತು ಅಂಬೇಡ್ಕರ್ ತಮ್ಮ ಸುದೀರ್ಘ ಮುಖಾಮುಖಿಯ ಕೊನೆಯ ಹೊತ್ತಿಗೆ ಪರಸ್ಪರರ ವಿಚಾರಗಳನ್ನು ತಮ್ಮಲ್ಲಿ ಅಂತರ್ಗತಗೊಳಿಸಿಕೊಂಡರು. ಹಾಗಾಗಿ ಗಾಂಧೀಜಿ ತಾವು ರಮ್ಯವಾಗಿ ಭಾವಿಸಿಕೊಂಡ ಗ್ರಾಮವೆಂಬ ದೇಸಿ ಸ್ವರ್ಗವು ಸಾಮಾಜಿಕ - ಆರ್ಥಿಕ ಶೋಷಣೆಯ ಹಾಗೂ ದಮನದ ತಾಣವೆಂಬುದನ್ನು ಅರ್ಥಮಾಡಿಕೊಂಡರೆ, ಅಂಬೇಡ್ಕರ್ ಇದೇ ಸಮಯದಲ್ಲಿ ಸಮಾನತೆ ಹಾಗೂ ಗೌರವಗಳ ತುಡಿತಕ್ಕೆ ಕೇವಲ ರಾಜಕೀಯ ಹಕ್ಕು ಹಾಗೂ ಸಾಮಾಜಿಕ ನ್ಯಾಯಕ್ಕಾಗಿ ನಡೆಸುವ ಹೋರಾಟಗಳೇ ಉತ್ತರ ನೀಡಲಾರವು; ಬದಲಿಗೆ ಅದು ಅತ್ಯಂತಿಕವಾಗಿ ಅನುಭಾವಿಕವಾದ ಧಾರ್ಮಿಕ ಸತ್ವವೊಂದರ ತೀವ್ರ ಹಂಬಲದ ಆಯಾಮವನ್ನು ಪಡೆದುಕೊಳ್ಳಬೇಕಾಗುತ್ತದೆ ಎಂಬುದನ್ನು ಒಪ್ಪಿಕೊಳ್ಳುವಂತಾಯಿತು.

ಗಾಂಧೀಜಿಯವರ ಸಹಜ ಪ್ರವೃತ್ತಿಯಾಗಿದ್ದ ಸಂಪ್ರದಾಯಸ್ಥಿಕೆಯ ತೆರೆಮರೆಯಲ್ಲಿರುವ ಅಸ್ಪ್ರಶ್ಯತೆ ಎಂಬ ಕೊಳಚೆಯನ್ನು ಅಂಬೇಡ್ಕರ್ ಬಯಲಿಗೆಳೆದರೆ, ಗಾಂಧೀಜಿ ಅಂಬೇಡ್ಕರರನ್ನು ಮೂಲಭೂತವಾದಿ ಆಧುನಿಕತೆಯ ಅಪಾಯಗಳ ಬಗ್ಗೆ ಎಚ್ಚರಿಸಿದರು: 'ಸ್ವ'ದ ಮೇಲಿನ ದಾಳಿ, ಸಾವಯವ ಸಂಬಂಧವುಳ್ಳ ಸಮುದಾಯದಿಂದ ಬೇರ್ಪಡುವಿಕೆ, ಸಾಂಸ್ಕೃತಿಕ ವಿಸ್ಮೃತಿ, ಭೀಕರ ರೂಪಗಳೊಡನೆ ಮತ್ತೆ ಮತ್ತೆ ಬಂದು ಕಾಡುವ ಅದುಮಿಟ್ಟ ಭೂತಕಾಲ ಹಾಗೂ ಬಂಡವಾಳಶಾಹಿಯ ಆಕ್ರಮಣವನ್ನು ತಡೆಯಬಲ್ಲ ಎಲ್ಲಾ ತಡೆಗೋಡೆಗಳ ನಿರ್ನಾಮ. ಆಧುನಿಕತೆಯ ಕಡು ವಿರೋಧಿ ಗಾಂಧಿ ಹಾಗೂ ಸಾಂಪ್ರದಾಯಿಕತೆಯ ಕಡು ವೈರಿ ಅಂಬೇಡ್ಕರ್ ಇಬ್ಬರೂ, ಪರಸ್ಪರರ ವಿಚಾರಧಾರೆಗಳನ್ನು ಪರಿವರ್ತಿಸಿದರು. ಸತ್ಯವೇನೆಂದರೆ ಜಾತಿ ಎಂಬುದು ನಿರ್ಮಾನುಷವಾದುದಾರೆ



ತಂತ್ರಜ್ಞಾನ ಕೂಡ ಮಾನವ ವಿರೋಧಿಯಾಗಬಲ್ಲದು. ಹಳ್ಳಿಗರ ಬದುಕು ಕಗ್ಗತ್ತಲಿನಲ್ಲಿದ್ದರೆ, ನಗರಗಳ ಬದುಕು ನರಕ ಸದೃಶವಾಗಬಲ್ಲದು. (ಅನುಷಾ ರಿಜ್ವಿ ಹಾಗೂ ಮಹ್ಮೂದ್ ಫರೂಕಿಯವರ 'ಪೀಪ್ಲಿ ಲೈವ್' (*೨೦೧೦*) ಎಂಬ ಅದ್ಭುತ ಚಲನಚಿತ್ರ ರೈತರ ಆತ್ಮಹತ್ಯೆ ಹಾಗೂ ವಲಸೆ ಕೂಲಿ ಕಾರ್ಮಿಕರ ಬದುಕಿನ ಕಹಿ ವಾಸ್ತವಗಳ ಬಗೆಗಿನ ಸತ್ಯವನ್ನು ವಿಡಂಬನಾತ್ಮಕವಾಗಿ ಬಿಚ್ಚಿಟ್ಟಿದೆ). ನಮಗೆಲ್ಲ ಗೊತ್ತಿರುವಂತೆ, ಗಾಂಧಿ ಹಾಗೂ ಅಂಬೇಡ್ಕರ್ ಇಬ್ಬರ ದೃಷ್ಟಿಕೋನದ ಸತ್ಯಗಳಿಗೆ ಇಂದಿನ ಭಾರತ ಸಾಕ್ಷಿಯಾಗಿದೆ. ಒಂದೆಡೆಯಲ್ಲಿ ಚುನಾವಣಾ ಪ್ರಜಾಪ್ರಭುತ್ವವು ಜಾತಿಯನ್ನು ಸಮುದಾಯಿಕ ಅಸ್ಮಿತೆಯ ಸಬಲೀಕರಣದ ಸಾಧನಶಕ್ತಿಯಾಗಿ ಪುನರನ್ವೇಷಿಸಿಕೊಂಡಿದ್ದರೆ, ಮತ್ತೊಂದೆಡೆಯಲ್ಲಿ ಪರಿಸರ ಪ್ರಜ್ಞೆಯಿಂದ ರೂಪುಗೊಂಡ ಸಾಮಾಜಿಕ ಆಂದೋಲನಗಳು ತಂತ್ರಜ್ಞಾನದ ಆಕ್ರಮಣಕಾರಿ ಮುನ್ನಡೆ ಹಾಗೂ ನವ–ಉದಾರವಾದಿ ಜಾಗತೀಕರಣವು ಹೇಗೆ ಮನುಕುಲದ ಉನ್ನತಿಗೆ ಹಾಗೂ ರಾಜಕೀಯ ವಿಮೋಚನೆಗೆ ಪ್ರಬಲ ಅಡೆತಡೆ ಒಡ್ಡುತ್ತದೆ ಎಂಬುದನ್ನು ತೆರೆದು ತೋರಿಸುತ್ತಿವೆ.

ಆದರೆ ಪ್ರೊ. ನಾಗರಾಜ್‌ರ ನಿಜವಾದ ಒಳನೋಟ 'ಹರಿಜನ' ಮತ್ತು 'ದಲಿತ' ಎಂಬುದರ ವ್ಯತ್ಯಾಸ, ಜಾತ್ಯಸ್ಥ ಹಿಂದುವಿನ 'ಆತ್ಮ ಶುದ್ಧೀಕರಣ'ಕ್ಕಾಗಿ ನಡೆಸಿರುವ ಹೋರಾಟ ಹಾಗೂ ಕೆಳಜಾತಿಯವರ 'ಆತ್ಮ ಗೌರವ'ಕ್ಕಾಗಿ ನಡೆಸಿರುವ ಹೋರಾಟಗಳ ನಡುವಿನ ವ್ಯತ್ಯಾಸವೇ ಆಗಿದೆ ಎಂಬುದನ್ನು ವಿವರಿಸಿದ್ದರಲ್ಲಿ ಇದೆ. ಈ ಎರಡೂ ಸಂದರ್ಭಗಳಲ್ಲಿನ 'ಆತ್ಮ' ಮಾತ್ರ ಒಂದೇ ಅಲ್ಲ. ಕಳೆದ ಹಲವಾರು ದಶಕಗಳಿಂದ ಯಾವುದೇ ನೈತಿಕ ಒತ್ತಾಯವಾಗಲೀ ಅಥವಾ ರಾಜಕೀಯ ಮನ್ನಣೆಯಾಗಲೀ ಇಲ್ಲದೆ ಇರುವ ಗಾಂಧೀಜಿಯ 'ಹರಿಜನ' ವಿಶ್ವಾಸಾರ್ಹತೆಯನ್ನು ಕಳೆದುಕೊಂಡು ಗುಜರಿಯಾಗಿ ಹೋಗಿರುವುದರಿಂದ 'ಜಾತಿ'ಯ ಬಗೆಗಿನ ಪ್ರಚಲಿತ ಚರ್ಚೆಗಳಲ್ಲಿ ಗಾಂಧಿ ಮತ್ತು ಅಂಬೇಡ್ಕರ್‌ರನ್ನು ಒಟ್ಟಿಗೇ ಪ್ರಸ್ತಾಪಿಸುವುದು ಸಮಂಜಸವಲ್ಲ ಎಂದು ಅಂಬೇಡ್ಕರ್‌ವಾದಿಗಳು ಹೇಳುವುದು ಸರಿಯಾಗಿಯೇ ಇದೆ.

ಗಾಂಧೀಜಿಯ ಗ್ರಹಿಕೆಯ ಜಾತಿ ವ್ಯವಸ್ಥೆ – ಅದೊಂದು ಯಾವುದೇ ಅಸಮಾನತೆಯ ಪ್ರತಿಪಾದನೆಯನ್ನೊಳಗೊಳ್ಳದ ಮತ್ತು ಸಾತ್ವಿಕವಾದ ಧಾರ್ಮಿಕ ನಂಬಿಕೆಯ ಭಾರತಕ್ಕೇ ವಿಶಿಷ್ಟವಾದ ಸಾಮಾಜಿಕ ಸಂಬಂಧಗಳ ಜಾಲ–ವಾಸ್ತವ ಪರೀಕ್ಷೆಯಲ್ಲಿ ಸಾಬೀತಾಗುವ ಸಂಗತಿಯಾಗಿ ಎಲ್ಲೂ ಅಸ್ತಿತ್ವದಲ್ಲೇ ಇಲ್ಲ. ಜಾತಿ ಎಂಬುದು ಹೀಗೆ ಯಾರಿಗೂ–ಆ ವ್ಯವಸ್ಥೆಯ ತಳದಲ್ಲಿರುವರಿಗಂತೂ– ಅನುಭವಕ್ಕೆ ಬರುವುದಿಲ್ಲ. ಇದರ ಬಗ್ಗೆ ಮೊದಲು ತಕರಾರು ಎತ್ತಿದ್ದು ಅಂಬೇಡ್ಕರ್‌ರವರು. ಇಂದು ಅವರ ತಕರಾರು ಸರಿ ಎಂಬುದರ ಬಗ್ಗೆ ಇಂದು ವಿವಾದಗಳೇ ಇಲ್ಲ.

ಗಾಂಧೀಜಿಯವರು ಹಿಂದೂ ಧರ್ಮದ ಅಧಿಕೃತ ಪಠ್ಯಗಳನ್ನು ಹೊಸ ಬಗೆಯಲ್ಲಿ ಅರ್ಥೈಸುತ್ತಾ, ಈ ಹಿಂದೂ ಸಾಮಾಜಿಕ ವ್ಯವಸ್ಥೆಯನ್ನು ಸಮರ್ಥಿಸುತ್ತಾ ಸಂರಕ್ಷಿಸುವ ಪ್ರಯತ್ನ ಮಾಡಿದರು. ಆದರೆ ಅಂಬೇಡ್ಕರ್ ಅದೇ ಪಠ್ಯಗಳನ್ನು-ವೇದ, ಶಾಸ್ತ್ರ, ಪುರಾಣ, ಮಹಾಕಾವ್ಯ, ಭಗವದ್ಗೀತೆಗಳನ್ನು ಓದಿ. ಇವುಗಳೆಲ್ಲವೂ ಸಾಮಾಜಿಕ ಅಸಮಾನತೆಯನ್ನು ಬಲಗೊಳಿಸಿ, ಅದನ್ನೇ ಸ್ಥಿರಗೊಳಿಸುತ್ತವೆ ಎಂದು ಅಭಿಪ್ರಾಯಪಟ್ಟರು. ಅಂಬೇಡ್ಕರ್‌ಗೆ ಒಂದು ಹಂತದ ನಂತರ ಗಾಂಧೀಜಿಯವರ ಸುಧಾರಣೆ, ಪರಾಮರ್ಶೆ, ತರ್ಕ, ತೀಕ್ಷ್ಣ ಅಂತರ್‌ದೃಷ್ಟೀಯ ಆತ್ಮಶೋಧನೆ, ತೀವ್ರ ಸ್ವರೂಪದ ತ್ಯಾಗ ಮತ್ತು ಆದರ್ಶಾತ್ಮಕವಾದ ಅಹಿಂಸೆ–ಇವೆಲ್ಲವೂ, ಸಾವಿರಾರು ವರ್ಷಗಳ ಕಾಲ ಮೇಲ್ಜಾತಿಗಳವರಿಗೆ ನಿರಂಕುಶ ಸಾಮಾಜಿಕ ಆಧಿಪತ್ಯವನ್ನು, ಹಲವೊಮ್ಮೆ ರಾಜಕೀಯ ಶಕ್ತಿಯನ್ನು ಯಥೇಚ್ಚವಾಗಿ ಒದಗಿಸಿದ ಹಿಂದು ಜಾತಿ ಪರಿಕಲ್ಪನೆಯ ಅಭೇದ್ಯ ಚಕ್ರವ್ಯೂಹದೆದುರು ಸಂಪೂರ್ಣ ವಿಫಲವಾಗಿ ಸೋಲುತ್ತವೆ ಎಂದು ಮನದಟ್ಟಾಗಿತ್ತು. ಹಾಗಾಗಿ ಅಂಬೇಡ್ಕರ್‌ರವರಿಗೆ ಜಾತಿಯನ್ನು 'ನಿರ್ಮೂಲನ' ಮಾಡುವ, ಸಾಂಪ್ರದಾಯಿಕ ಬ್ರಾಹ್ಮಣ ಧರ್ಮ ಬೋಧಿಸಿ ಎತ್ತಿಹಿಡಿಯುತ್ತಾ ಬಂದಿದ್ದ ವರ್ಣ ವ್ಯವಸ್ಥೆಯನ್ನು ಬಹಳ ಹಿಂದೆಯೇ ಯಶಸ್ವಿಯಾಗಿ ಧಿಕ್ಕರಿಸಿ ತಿರಸ್ಕರಿಸಿದ್ದ ಧರ್ಮಕ್ಕೆ(ಬೌದ್ಧ) ವಲಸೆ ಹೋಗುವುದನ್ನು ಬಿಟ್ಟು ಬೇರೆ ಆಯ್ಕೆಗಳೇ ಇರಲಿಲ್ಲ.

ಅಂತೆಯೇ ಅಂಬೇಡ್ಕರ್ ೧೯೩೫ರ ಅಕ್ಟೋಬರ್‌ನಲ್ಲಿ ನಾಸಿಕ ಬಳಿಯ ಯ್ಯೋಲಾದಲ್ಲಿ ಹಿಂದೂ ಧರ್ಮವನ್ನು ತ್ಯಜಿಸುವ ತಮ್ಮ ಇಂಗಿತವನ್ನು ವ್ಯಕ್ತಪಡಿಸಿದರು. ೨೦ ವರ್ಷಗಳ ನಂತರ ೧೯೫೬ರ ಅಕ್ಟೋಬರ್‌ನಲ್ಲಿ ನಾಗಪುರದಲ್ಲಿ ಬಾಬಾ ಸಾಹೇಬರು ವಿಧಿಯುಕ್ತವಾಗಿ ಬೌದ್ಧ ಧರ್ಮವನ್ನು ಸ್ವೀಕರಿಸಿದರು.

## ಮರಳಿ ಅಂಬೇಡ್ಕರ್‌ರತ್ತ

ಏಪ್ರಿಲ್ ೧೪, ೨೦೧೪ ರಂದು ಡಾ॥ ಅಂಬೇಡ್ಕರ್ ರವರ ೧೨೩ ನೇ ಜನ್ಮ ಜಯಂತಿಯನ್ನು ಆಚರಿಸಿದ ನಂತರ ಮೂರು ಪ್ರಶ್ನೆಗಳು ಉದ್ಭವಿಸಿವೆ: ೧. ಸಂವಿಧಾನ ಬದ್ಧ ಗಣರಾಜ್ಯವಾಗಿ, ಸಮಾನ ನಾಗರಿಕ ಮೌಲ್ಯಗಳಿಗೆ ಅನುಗುಣವಾಗಿ ಹಾಗೂ ಕಾನೂನು ಬದ್ಧ ಪ್ರಭುತ್ವವನ್ನು ಗೌರವಿಸುವುದಾಗಿ ಬಹುತೇಕ ಭಾರತೀಯರು ಒಪ್ಪಿಕೊಂಡ ನಂತರವೂ, ಜಾತಿ ಶ್ರೇಣೀಕರಣ ಆಧಾರಿತವಾದ ಜಾತಿ ಪೂರ್ವಗ್ರಹಗಳು, ಹಿಂಸೆಗಳು ಹಾಗೂ ಸಾಮಾಜಿಕ ಅಸಮಾನತೆಗಳು ಇಷ್ಟೊಂದು ವ್ಯಾಪಕವಾಗಿರಲು ಕಾರಣವೇನು? ೨. ಗಾಂಧೀಜಿಯವರೊಡನೆಯ ವಾದದಲ್ಲಿ ಬಾಬಾ ಸಾಹೇಬರು ಅಸಂದಿಗ್ಧವಾಗಿ ಗೆದ್ದುದೇ ಆಗಿದ್ದರೆ, ಬಹಳ ಜನ ದಲಿತರು ಹಾಗೂ ಜಾತ್ಯಸ್ಥ ಹಿಂದೂಗಳು ಅವರನ್ನನುಸರಿಸಿ ಏಕೆ ಬೌದ್ಧರಾಗಿ ಧರ್ಮಾಂತರಗೊಳ್ಳಲಿಲ್ಲ? ಇಂದಿಗೂ ಅಂಬೇಡ್ಕರ್‌ವಾದಿ ಬೌದ್ಧ ಧರ್ಮೀಯರು ಕೆಲವೇ ಸಂಖ್ಯೆಯಲ್ಲಿರುವುದೇಕೆ? ೩. ೨೦೧೪ರ ಮಹಾಚುನಾವಣೆಯ ಫಲವಾಗಿ ಬಲಪಂಥೀಯ ಹಿಂದೂ ಸರ್ಕಾರವೊಂದು ಅಸ್ತಿತ್ವಕ್ಕೆ ಬಂದಿರುವಾಗ, ಜಾತಿಯನ್ನು ಕುರಿತ ಯಾವ ಬಗೆಯ ದೃಷ್ಟಿಕೋನಗಳು–ತೀರ ಕಣ್ಣಿಗೆ ರಾಚುವಂತೆ, ಯೋಜನಾ ಬದ್ಧವಾಗಿ ಅಲ್ಲದಿದ್ದರೂ,ಹಿಂಬಾಗಿಲಿನಿಂದ– ಸಾರ್ವಜನಿಕರ ಮನೋಭೂಮಿಕೆಯನ್ನು ಪ್ರವೇಶಿಸಬಹುದು? ಗಾಂಧೀಜಿಯನ್ನು ದ್ವೇಷಿಸುವ, ಅವರೆಲ್ಲ ಮೌಲ್ಯಗಳನ್ನು ಇಷ್ಟಪಡದ ಗಾಂಧೀ ಎಂಬ ವ್ಯಕ್ತಿಯನ್ನು ಹಾಗೂ ಆತ ಪ್ರತಿನಿಧಿಸಿದ ಎಲ್ಲವನ್ನು ಅಕ್ಷರಶಃ ಹತ್ಯೆಗೈದ ಮನೋಭಾವನೆಗಳನ್ನು ಹಿಂದುತ್ವ ಆಧರಿಸಿದೆ ಎಂದ ಬಳಿಕ– ಚಾತುರ್ವರ್ಣ್ಯದ ವೈಭವೀಕರಣ, ನಿಗುರಿ ನಿಲ್ಲುವ ಜಾತಿ ಅಭಿಮಾನ, ಧಾರ್ಮಿಕ ಸಮ್ಮತಿ ಹೊಂದಿದ ಜಾತಿ ಭೇದದಲ್ಲಿ ನವೀಕರಣಗೊಂಡ ವಿಶ್ವಾಸ ಹಾಗೂ ದಲಿತರನ್ನು ಅವಮಾನಿಸುವ, ಹೊರಗಿಡುವ ಹೊಸ ವಿಧಾನಗಳಿಗೆ ನಾವು ಸಾಕ್ಷಿಯಾಗಲಿದ್ದೇವೆಯೋ?

ಇನ್ನು ತಡಮಾಡುವಂತಿಲ್ಲ. ನಾವು ಅಂಬೇಡ್ಕರ್‌ರವರತ್ತ ತಿರುಗಿ, ಮರಳಿ ಸಾಗಬೇಕಿದೆ. ಈ ನಡಿಗೆ ತನ್ನ ಮಹಾನಾಯಕನೊಡನೆಯ ವಿಶೇಷ ಸಂಬಂಧದ ಕಾರಣದಿಂದಾಗಿ ಮೂಡಿರಬಹುದಾದ ಅಂಬೇಡ್ಕರ್ ಕುರಿತ ಗ್ರಹಿಕೆಯ ವ್ಯಾಪ್ತಿಯಲ್ಲೇ ಸಾಗಬೇಕೆಂದಿಲ್ಲ. ನಮ್ಮ ರಾಜಕೀಯ ಇತಿಹಾಸದ ಪ್ರತಿಗಾಮಿ ಹಂತದ ಹೊಸ್ತಿಲಲ್ಲಿರುವ ಭಾರತೀಯರಾಗಿ ನಾವೆಲ್ಲರೂ ಒಟ್ಟೊಟ್ಟಿಗೆ ಅಂಬೇಡ್ಕರ್‌ರವರತ್ತ ಮರಳಬೇಕಿದೆ. ಅದು ಗಾಂಧೀಜಿಯವರೊಡನೆ ಅವರ ಸಂಘರ್ಷ, ಹಿಂದೂಧರ್ಮವನ್ನು ಕುರಿತ ಅವರ ಪ್ರಶ್ನೆ, ಬೌದ್ಧ ಧರ್ಮ ಸ್ವೀಕಾರ, ಸಂವಿಧಾನ ರಚಿಸಿದ ಮಹತ್ಕಾರ್ಯ, ಮೀಸಲಾತಿ ನೀತಿಯ ರೂಪುರೇಖೆಗಳ ನಿರ್ಮಾಣ, ಸಾಮುದಾಯಿಕ ಬದುಕಿನ ಸಾಂಘಿಕ ಮಾದರಿಗಳಲ್ಲಿನ ನಂಬಿಕೆ, ಸೋದರತೆ, ಸಮಾನತೆ ಹಾಗೂ ಮೂಲಭೂತ ನಾಗರಿಕ ಹಕ್ಕುಗಳು–ಇವೆಲ್ಲವುಗಳ ಮೂಲಕ ಅಂಬೇಡ್ಕರ್ ಭಾರತ ಹಿಂದೆಂದೂ ಕಾಣದಂತಹ ಪ್ರಜಾಪ್ರಭುತ್ವವಾದಿ ಪ್ರಬುದ್ಧ ಸಮಾಜವಾಗುವ ದಿಕ್ಕಿನಲ್ಲಿ ಮೂಡಿಸಿದ ಹಾದಿಯನ್ನು ನಡೆಯಬೇಕು.

ಈ ದೇಶದ ರಾಜಕೀಯ ಇತಿಹಾಸದ ಸಂಭವನೀಯ ಕರಾಳ ಚರಿತ್ರೆಯ ಅಧ್ಯಾಯವೆನ್ನಬಹುದಾದ ಕಾಲಘಟ್ಟದಲ್ಲಿ ಅಳಿಯದೇ ಉಳಿಯುವ ಒಂದೇ ಒಂದು ದಾರಿ ಎಂದರೆ, ಕೇವಲ ದಲಿತರಷ್ಟೇ ಅಲ್ಲ, ಜಾತ್ಯಸ್ಥ ಹಿಂದೂಗಳು ಸೇರಿದಂತೆ ಇಡೀ ಭಾರತ ಅಂಬೇಡ್ಕರ್‌ರವರ ಕ್ರಾಂತಿಕಾರಕ ಪ್ರಗತಿಶೀಲ ದರ್ಶನದ ಬದ್ಧತೆಯನ್ನು ಉಳಿಸಿಕೊಳ್ಳುವುದೇ ಆಗಿದೆ.

**(ಕನ್ನಡಕ್ಕೆ: ಬಿ.ಎಸ್. ದಿವಾಕರ್)**

# ಅಗಲಿದ ಜೋಗಿ ಕೆ.ಎಂ. ಶಂಕರಪ್ಪನವರನ್ನು ನೆನೆಯುತ್ತಾ...



**ಜೂನ್ ಐದರಂದು ಬೆಂಗಳೂರಿನಲ್ಲಿ ಸಂಭವಿಸಿದ ಕೆ. ಎಂ. ಶಂಕರಪ್ಪನವರ ಸಾವು ನಾನೂ ಸೇರಿದಂತೆ ಅವರ ಆಪ್ತ ಶಿಷ್ಯ ಬಳಗದ ಪಾಲಿಗೆ ನಮ್ಮ ಬದುಕಿನ ಒಂದು ಮುಖ್ಯ ಮತ್ತು ಸ್ಪಂದನಶೀಲ ಅಧ್ಯಾಯ ಮುಗಿಸಿದೆ ಎಂದೇ ಹೇಳಬೇಕು. ನಮ್ಮೆಲ್ಲರ ಪ್ರಜ್ಞೆಯ ಒಂದು ಅವಿಭಾಜ್ಯ ಅಂಗವೇ ಆಗಿ ಹೋಗಿದ್ದ ಅವರ ಸಾವು ನಮ್ಮ ಜೀವದ ಒಂದಂಶವನ್ನೇ ಕಳೆದುಬಿಟ್ಟಿದೆ. ಕರ್ನಾಟಕದ ಬಹು ದೊಡ್ಡ ಸೃಜನಶೀಲ ಮನಸ್ಸುಗಳಲ್ಲಿ ಒಂದಾಗಿದ್ದ ಶಂಕರಪ್ಪ ಕನ್ನಡದ ಹಲವು ಬಹು ಮುಖ್ಯ ಚಿಂತಕ–ಲೇಖಕರನ್ನು ರೂಪಿಸಿದವರು ಎಂಬುದು ಬಹಳ ಜನಕ್ಕೆ ಗೊತ್ತಿಲ್ಲ. ಏಕೆಂದರೆ ಅವರು ಎಂದೂ ಪ್ರಸಿದ್ಧಿಗೆ, ಮಾನ್ಯತೆಗಳಿಗೆ, ಪುರಸ್ಕಾರಗಳಿಗೆ ಹಾತೊರೆದವರಲ್ಲ. ಎಲೆ ಮರೆಯ ಕಾಯಿಯಂತೆಯೇ ಇದ್ದು ಕರ್ನಾಟಕದಲ್ಲಿನ ಬಹು ಮುಖ್ಯ ಸಾಹಿತ್ಯಿಕ–ಸಾಂಸ್ಕೃತಿಕ ಸಂಚಲನೆಗಳಿಗೆ ಇಂಬು ನೀಡಿದವರು ಅವರು.**

**ಅರವತ್ತರ ದಶಕದ ಹೊತ್ತಿಗೇ, ಪುಣೆಯ ಚಲಚಿತ್ರ ತರಬೇತಿ ಸಂಸ್ಥೆಯಿಂದ ಖ್ಯಾತ ನಿರ್ದೇಶಕ ಋತ್ವಿಕ್ ಘಟಕ್ ಅವರ ಶಿಷ್ಯರಾಗಿ ಪದವಿ ಪಡೆದ ಮೊದಲ ಕನ್ನಡಿಗರ ಪೈಕಿ ಒಬ್ಬರಾದ ಶಂಕರಪ್ಪ, ಮೂಲತಃ ಮಧುಗಿರಿಯ ಬಯಲು ಸೀಮೆಯ ಕಾರಮರಡಿ ಎಂಬ ಕುಗ್ರಾಮದ ಸಾಧಾರಣ ರೈತ ಕುಟುಂಬಕ್ಕೆ ಸೇರಿದವರು. ಆ ಸಂಸ್ಥೆಯ ವಿದ್ಯಾರ್ಥಿಯಾಗಿ ಕನ್ನಡದ ಖ್ಯಾತ ಕಥೆಗಾರ ದಿ. ಕೆ. ಸದಾಶಿವ ಅವರ 'ನಲ್ಲಿಯಲ್ಲಿ ನೀರು ಬಂತು' ಕಥೆಯನ್ನಾಧರಿಸಿ ನಿರ್ಮಿಸಿದ ಕಿರುಚಿತ್ರ 'Water in the tap' ತನ್ನ ಹೊಸತನದಿಂದಾಗಿ ಆ ಕಾಲಕ್ಕೆ ರಾಷ್ಟ್ರಾದಂತ ಹೆಸರು ಮಾಡಿತ್ತು. ನಂತರ ಅವರು ನಿರ್ದೇಶಿಸಿದ ಏಕೈಕ ಕನ್ನಡ ಕಥಾಚಿತ್ರ ಬಸವರಾಜ ಕಟ್ಟೀಮನಿ ಅವರ ಕಾದಂಬರಿ ಆಧಾರಿತ 'ಮಾಡಿ ಮಾಡಿದವರು' ಬಹುಶಃ ಭಾರತದ ಮೊಟ್ಟ ಮೊದಲ ಅರೆ ಸಾಕ್ಷ್ಯ ಕಥಾಚಿತ್ರ(Quasi documentary)ವಾಗಿದ್ದು, ಅದು ತನ್ನ ಕಾಲಕ್ಕಿಂತ ಮೊದಲೇ ಬಂದ ಕಾರಣಕ್ಕೋ ಏನೋ (ಜಗದ್ವಿಖ್ಯಾತ ಚಲಚಿತ್ರ ವಿಮರ್ಶಕಿ ಮೇರಿ ಸೇಟನ್ ಈ ಚಿತ್ರ ನೋಡಿ 'ಇದೊಂದು ಜಾಗತಿಕ ಚಿತ್ರ' ಎಂದಿದ್ದರಂತೆ.)ರಾಜ್ಯಮಟ್ಟದಲ್ಲ ಪ್ರಶಸ್ತಿ ಪಡೆಯಿತಾದರೂ ಜನ ಮನ್ನಣೆ ಗಳಿಸಲಿಲ್ಲ. ಈ ಹಿನ್ನೆಲೆಯಿಂದಾಗಿ, ಆನಂತರ ಕಥಾಚಿತ್ರ ನಿರ್ಮಿಸುವ ಅವರ ಹಲವು ಪ್ರಯತ್ನಗಳು–ಕೆಲವು ಅವರ ತೀವ್ರ ಅನ್ಯ ಮನಸ್ಕತೆಯಿಂದಾಗಿಯೇ–ಕೈಗೂಡಲಿಲ್ಲವಾದರೂ, ಕರ್ನಾಟಕ ಸರ್ಕಾರದ ವಾರ್ತಾ ವಿಭಾಗಕ್ಕಾಗಿ ಅವರು ನಿರ್ಮಿಸಿದ ಹಲವು ಸಾಕ್ಷ್ಯಚಿತ್ರಗಳು ಈಗಲೂ(ಅವನ್ನು ಸಂರಕ್ಷಿಸಿಡಲಾಗಿದ್ದಲ್ಲಿ)–ವಿಶೇಷವಾಗಿ ಜೇನು ಕುರುಬರು, ರೇಷ್ಮೆ ಕೃಷಿ ಮತ್ತು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಕುರಿತವು ಅವರ ವಿಶಿಷ್ಟ ಕಣ್ಣೋಟಕ್ಕೆ ಸಾಕ್ಷಿಯಂತಿವೆ.**

**ಚಿತ್ರರಂಗವೆಂಬ ವ್ಯಾಪಾರಿ ಚಕ್ರವ್ಯೂಹವನ್ನು ಭೇಧಿಸಲಾರದೇ ಹೋದ ಶಂಕರಪ್ಪ ಓರ್ವ ವಿಶಿಷ್ಟ ಸಂಸ್ಕೃತಿ ಚಿಂತಕರಾಗಿ ಕನ್ನಡ ಮನಸ್ಸನ್ನು ಕಟ್ಟುವಲ್ಲಿ ತೊಡಗಿಸಿಕೊಂಡ ರೀತಿ ಅನನ್ಯವಾದದ್ದು. ಬೌದ್ಧ ಧರ್ಮದ ಮಹಾಯಾನ ಮತ್ತು ವಜ್ರಯಾನಗಳನ್ನು ಆಳವಾಗಿ ಅಧ್ಯಯನ ಮಾಡಿ, ಒಂದು ಮಟ್ಟದಲ್ಲಿ ಅವುಗಳ ಉಪಾಸಕರೂ ಆಗಿ ಸಾಧನೆ ಮಾಡಿದ್ದ ಅವರು ತಮ್ಮ ಸಂಪರ್ಕಕ್ಕೆ ಬಂದ ಹಲವು ಲೇಖಕ–ಲೇಖಕಿಯರಿಗೆ ಬೌದ್ಧ ಧರ್ಮದ ಸಾಹಿತ್ಯಿಕ ದೀಕ್ಷೆ ನೀಡಿದರು. ಕನ್ನಡ ಸಾಹಿತ್ಯ ಪರಂಪರೆಯಲ್ಲಿನ ಬೌದ್ಧ ಅರುಹು–ಕುರುಹುಗಳನ್ನು ಹೆಕ್ಕಿ ತೋರಿಸುತ್ತಾ ಈ ಲೇಖಕ–ಲೇಖಕಿಯರ ಚಿಂತನಾ ಕ್ರಮವನ್ನು ನಿರ್ಣಾಯಕವಾಗಿ ಬದಲಾಯಿಸಿದರು.**

**೧೯೭೦ರ ದಶಕದಲ್ಲಿ ಆಧುನಿಕ ಕನ್ನಡ ಸಾಹಿತ್ಯದ ನೋಟಕ್ರಮದಲ್ಲಿನ ನಿರ್ಣಾಯಕ ತಿರುವಿಗೆ ಕಾರಣವಾದ *ಅಖಿಲ ಕರ್ನಾಟಕ ಕಲಾವಿದರ ಮತ್ತು ಬರಹಗಾರರ ಒಕ್ಕೂಟದ* ಸಮ್ಮೇಳನದ ನಿಯೋಜನೆಗೆ ಪೂರ್ಣಚಂದ್ರ ತೇಜಸ್ವಿ, ಎಂ..ಡಿ. ನಂಜುಂಡಸ್ವಾಮಿ, ಲಂಕೇಶ್, ಚಂಪಾ, ಶ್ರೀಕೃಷ್ಣ ಆಲನಹಳ್ಳಿ, ಕಲ್ಲೆ ಶಿವೋತ್ತಮ ರಾವ್, ವಿಶುಕುಮಾರ್ ಮುಂತಾದವರೊಂದಿಗೆ ಶ್ರಮಿಸಿದ ಪ್ರಮುಖರಲ್ಲಿ ಒಬ್ಬರಾದ ಶಂಕರಪ್ಪ, ಅದರ ತಾತ್ವಿಕತೆಯನ್ನು ರೂಪಿಸಿದವರಲ್ಲೂ ಪ್ರಮುಖರು. ಈ ಒಕ್ಕೂಟ ನಿಷ್ಕ್ರಿಯವಾದ ನಂತರ, ಯಾವುದೇ ಸಾಂಸ್ಥಿಕ ಪ್ರಯತ್ನಗಳಲ್ಲಿ ನಂಬಿಕೆ ಇರಿಸದ ಅವರು ತಮ್ಮದೇ ಅನೌಪಚಾರಿಕ ರೀತಿಗಳಲ್ಲಿ ಆ ತಾತ್ವಿಕತೆಯನ್ನು ವಿಷದೀಕರಿಸುತ್ತಾ, ವಿಸ್ತರಿಸುತ್ತಾ, ತಮ್ಮ ಕಿರಿಯ ಒಡನಾಡಿಗಳಲ್ಲಿ ಬಿತ್ತಿ ಬೆಳೆಸುವಲ್ಲಿ ತೊಡಗಿಕೊಂಡರು. ಭಾರತದ ಧಾರ್ಮಿಕ–ಸಾಂಸ್ಕೃತಿಕ ಚರಿತ್ರೆಯನ್ನು ಅವೈದಿಕ ಪರಂಪರೆಯ ನೆಲೆಯಲ್ಲಿ ಮುರಿದು ಕಟ್ಟುವ ಅಗತ್ಯವನ್ನು ಗುರುತಿಸಿದ್ದ ಮೊದಲಿಗರಲ್ಲಿ ಒಬ್ಬರಾಗಿದ್ದ ಅವರು ಅದನ್ನು ಇತ್ತೀಚಿನ ವರ್ಷಗಳಲ್ಲಿ ತಮ್ಮ ಆಧುನಿಕ ಅವಧೂತ ಜೀವನ ಕ್ರಮದ ಹಲವು ರೂಪಗಳ ಮೂಲಕ ಕಾರ್ಯಗತಗೊಳಿಸುವಲ್ಲಿ ನಿರತರಾಗಿದ್ದರು. ಅವರೊಂದಿಗೆ ಆಪ್ತವಾಗಿ ಒಡನಾಡಿದವರನ್ನು ಅವರು ಕಲೆ, ಧರ್ಮ, ಸಂಸ್ಕೃತಿಗಳಷ್ಟೇ ಅಲ್ಲ, ವಿವಿಧ ಲೌಕಿಕ ಜ್ಞಾನ ಕ್ಷೇತ್ರಗಳಲ್ಲಿನ ತಮ್ಮ ಸೀಮೋಲ್ಲಂಘನೆಗಳ ಮೂಲಕ ಬೆಚ್ಚಿಬೀಳಿಸುತ್ತಿದ್ದ ರೀತಿ ನಿಜವಾಗಿಯೂ ಅಮೋಘವಾದದ್ದಾಗಿತ್ತು. ಅವರು ನಮ್ಮಗಳ ಮನೆಗೆ ಬಂದರೆಂದರೆ ಮನೆ ಮಂದಿಯಲ್ಲೆಲ್ಲ ಹುಟ್ಟಿಸುತ್ತಿದ್ದ ಸಂಭ್ರಮವನ್ನು ನೆನೆದರೆ ಈಗ ನಮ್ಮ ಕಣ್ಣುಗಳು ಹನಿಗೂಡುತ್ತವೆ. ಅವರು ನನ್ನನ್ನೂ ನನ್ನ ಪತ್ನಿಯನ್ನೂ (ಕೆ.ಬಿ. ಸಿದ್ದಯ್ಯನೊಂದಿಗೆ) ತುಮಕೂರು ಬಳಿಯ ಸಿದ್ಧರ ಬೆಟ್ಟ ಹತ್ತಿಸಿದ ಅನುಭವ ಅಂದು ನನ್ನ ಇಡೀ ಒಳಗನ್ನೇ ಅಲ್ಲಾಡಿಸಿಬಿಟ್ಟಿತೆಂದು ಹೇಳಿದರೆ ಏನೂ ಹೇಳಿದಂತಾಗಲಾರದೇನೋ! –**ಸಂಪಾದಕ

## ಶಂಕರಪ್ಪ ಎಂಬೋದು ಒಂದು ಧರ್ಮ ಮೇಘ!

**ನಾ**ವು, ಅಂದರೆ, ಡಾ॥ ಬಸವರಾಜು ಮತ್ತು ನಾನು ಒಲವಿನ ವಿವಾಹವಾಗಿ, ತುಮಕೂರಿನಲ್ಲಿ ಮನೆ ಮಾಡಿ ಹೊಸದಾಗಿ ಸಂಸಾರ ಹೂಡಿದ್ದ ದಿನಗಳವು. ೧೯೯೦ರ ಜನವರಿ ಇರಬೇಕು. ಒಂದು ಭಾನುವಾರ ಬೆಳಿಗ್ಗೆ ೧೦–೧೧ ಗಂಟೆ ಸುಮಾರಿಗೆ ಕೆ.ಬಿ. ಮೇಷ್ಟ್ರು ಜೊತೆಯಲ್ಲಿ ಬಿಳಿ ಗಡ್ಡ ಮತ್ತು ತಲೆಗೂದಲು ಉದ್ದಕ್ಕೆ ಬಿಟ್ಟಿದ್ದ, ಬಿಳಿ ಜುಬ್ಬ, ಪಂಚೆ ತೊಟ್ಟಿದ್ದ, ನೋಡಿದ ಕೂಡಲೇ ಕೈ ಮುಗಿಯಬೇಕು ಎಂಬಂತಿದ್ದ ವ್ಯಕ್ತಿಯೊಬ್ಬರು ಬಂದ್ರು. ಬಂದವರೆ, "ನಮ್ಮ ಗೋವಿಂದಪ್ಪನ ಮಗಳು ಮದುವೆಯಾಗವಳೆ, ಇಲ್ಲೆ ಮನೆ ಅಂದ್ರು, ನೋಡೋಣ ಅಂತ ಬಂದೆ ಕಣೊ" ಎಂದರು. ಆಗ ನಮ್ಮ ಅತ್ತೆ (ನನ್ನವರ ತಾಯಿ) ಮಾತ್ರ ನಮ್ಮ ಜೊತೆ ಇದ್ರು. ನನ್ನ ತವರಿನಿಂದ ಇನ್ನೂ ಯಾರೂ ಬಂದಿರಲಿಲ್ಲ. ಶಂಕರಪ್ಪನವರ ಬಾಯಲ್ಲಿ ಅಪ್ಪನ ಹೆಸರು ಕೇಳಿದ ಕೂಡಲೇ ನನಗೆ ಅಪ್ಪನನ್ನೆ ಕಂಡಂತೆ ಆಗಿತ್ತು.

ಹೀಗೆ ೧೯೯೦ರಲ್ಲಿ ನಮ್ಮ ಮನೆ ಮತ್ತು ಮನಸ್ಸಿನ ಒಳಗೆ ಬಂದ ಕೆ.ಎಂ. ಶಂಕರಪ್ಪನವರು ತುಂಬಾ ಬೇಗ ನಮ್ಮ ಪ್ರೀತಿಯ ಶಂಕ್ರಪ್ಪ ತಾತ ಆದ್ರು. ವಯಸ್ಸಿನಲ್ಲಿ ಅವರಿಗಿಂತ ದೊಡ್ಡವರಾದ ನಮ್ಮ ಅತ್ತೆಗೆ, ನಮ್ಮ ಮಕ್ಕಳಿಗೆ, ಅಕ್ಕಪಕ್ಕದವರಿಗೆ, ನಮ್ಮ ಕೆಲಸದಮ್ಮನಿಗೆ ಕೂಡಾ ಅವರು ಶಂಕ್ರಪ್ಪ ತಾತ. ನನ್ನ ಪತಿಗೆ ಮಾತ್ರ ಪ್ರೀತಿಯ ಗುರು.



ಅವರೊಬ್ಬ ಸಮಾಜವಾದಿ ಚಿಂತಕರು. ದಲಿತ ಮತ್ತು ರೈತ ಚಳುವಳಿಯ ಸಂಪರ್ಕದಲ್ಲಿದ್ದವರು. ಹಿರಿಯ ಕಿರಿಯ ಸಮಾಜವಾದಿಗಳು, ಪ್ರಗತಿಪರ ಚಿಂತಕರು, ಸಾಹಿತಿಗಳು ಅವರ ಸ್ನೇಹದಲ್ಲಿದ್ದರು. ದಲಿತ ಸಂಘರ್ಷ ಸಮಿತಿಗಾಗಿ ಅವರು ರಚಿಸಿದ ಕಿರು ಪುಸ್ತಕ 'ಬುದ್ಧ ಬರಲಿ ನಮ್ಮೂರಿಗೆ' ಸರಳವಾಗಿದ್ದು, ಎಲ್ಲರಿಗೂ ಅರ್ಥವಾಗುವಂತೆ ಇದೆ. ಶಂಕರಪ್ಪನವರು ಬರೆದದ್ದು ಕಡಿಮೆ, ಇಲ್ಲವೆಂದೇ ಹೇಳಬಹುದು. ಆದರೆ ಅವರು ಅಧ್ಯಯನ ಮತ್ತು ಅನುಭವದಿಂದ ಪಡೆದ ಅರಿವನ್ನು ಮೌಖಿಕವಾಗೇ ತಮ್ಮ ಸುತ್ತಲಿದ್ದವರಿಗೆ ದಾಟಿಸುತ್ತಿದ್ದರು. ಅವರೊಂದು ಅರಿವಿನ ದೀಪ.

ಶಂಕರಪ್ಪನವರು ಹೋದಲ್ಲಿ, ಬಂದಲ್ಲೆಲ್ಲಾ ದೊಡ್ಡವರಿಂದ ಹಿಡಿದು ಸಣ್ಣ ಮಕ್ಕಳವರೆಗೂ ಅರ್ಥವಾಗುವ ಹಾಗೆ ಸರಳವಾಗಿ ಬುದ್ಧನ ಕತೆಗಳನ್ನು ಹೇಳ್ತಾ ಇದ್ದರು, ಲೋಹಿಯಾ ಚಿಂತನೆಗಳನ್ನು, ಕುವೆಂಪು ವಿಚಾರಗಳನ್ನು ತಿಳಿಸುತ್ತಿದ್ದರು. ಅವರು ತುಂಬಾ ಪುಸ್ತಕಗಳನ್ನು ಓದುತ್ತಿದ್ದರು. ಆಯುರ್ವೇದದ ಬಗ್ಗೆ ಆಳವಾಗಿ

ತಿಳಿದುಕೊಂಡಿದ್ದರು. ಕೆಲವು ಸಲ ಓದಲು ಪುಸ್ತಕಗಳನ್ನು ತಂದು ಕೊಡುತ್ತಿದ್ದರು, ಮತ್ತೆ ಕೆಲವು ಸಲ ಒಂದಷ್ಟು ಪುಸ್ತಕಗಳ ಹೆಸರು ಹೇಳಿ ಹುಡುಕಿ ಓದಲು ತಿಳಿಸುತ್ತಿದ್ದರು. ಅವರೊಂದು ನಡೆದಾಡುವ ವಿಶ್ವಕೋಶ. ಅದ್ಭುತವಾದ ನೆನಪಿನ ಶಕ್ತಿ ಅವರಿಗಿತ್ತು. ಬುದ್ಧನನ್ನು ಸರಿಯಾಗಿ ತಿಳಿದುಕೊಳ್ಳಿ, ಬೌದ್ಧ ಧರ್ಮ ಎನ್ನುವುದು ಬದುಕಿನ ಕ್ರಮ, ಜೀವನ ದೃಷ್ಟಿ ಎಂದೆಲ್ಲಾ ತಿಳಿಸಿದರು. ಈ ಹಿನ್ನೆಲೆಯಲ್ಲೆ, ತುಮಕೂರಿನಲ್ಲಿದ್ದ ಅವರ ಶಿಷ್ಯರು ಸೇರಿ "ಬೋಧಿ ಮಂಡಲ" ರಚಿಸಿದರು.

ನಾನು ಕಂಡ ಹಾಗೆ ತಾತನದು ಸಹಜ ಸರಳ ಸ್ವಭಾವ, ಯಾರನ್ನೂ ಮೆಚ್ಚಿಸುವ, ಓಲೈಸುವ ಗೋಜಿಗೆ ಹೋಗ್ತಿರಲಿಲ್ಲ, ಅವರಿಗೆ ಸರಿ ಅನ್ನಿಸಿದ ಹಾಗೆ ಬದುಕ್ತಾ ಇದ್ರು. ಅಂತರ್ಜಾತಿ ವಿವಾಹವಾದವರ, ಕಷ್ಟದಲ್ಲಿರುವವರ, ದಲಿತರ ಜೊತೆ ಹಿರೀಕನಂತೆ ಸದಾ ಇದ್ದು, ನೈತಿಕ ಬೆಂಬಲ ನೀಡ್ತಾ ಇದ್ರು. ಹೊಟ್ಟೆಪಾಡಿಗೆ ಆಗೊಮ್ಮೆ ಹೀಗೊಮ್ಮೆ ಸಾಕ್ಷ್ಯಚಿತ್ರಗಳನ್ನು ಸರ್ಕಾರಕ್ಕೆ ನಿರ್ದೇಶಿಸಿ, ಅದರಿಂದ ಬಂದ ದುಡ್ಡು ಖರ್ಚಾಗುವವರೆಗೂ ಹಿರಿಯ ಕಿರಿಯ ಗೆಳೆಯರನ್ನು, ಆಪ್ತ ಶಿಷ್ಯರನ್ನು ಜೊತೆಗೆ ಸೇರಿಸಿಕೊಂಡು ಭರ್ಜರಿ ಊಟ-ಕೂಟಗಳನ್ನು ಏರ್ಪಡಿಸುತ್ತಿದ್ದರು. ನಾಳೆಗಾಗಿ, ಅವರು ಏನನ್ನೂ ಕೂಡಿಡುತ್ತಿರಲಿಲ್ಲ.

ಶಂಕರಪ್ಪ ಎಂಬೋದು ಒಂದು ಧರ್ಮ ಮೇಘ. ಅದು ಸಿಟ್ಟು ಬಂದಾಗ ಗುಡುಗ್ತಿತ್ತು, ಸಿಡುಕ್ತಿತ್ತು, ಹಿಂದೆ ಮುಗುಳ್ನಗುತ್ತಿತ್ತು. ಅಂತಃಕರಣ, ಕರುಣೆ, ಮಮತೆ, ಮೈತ್ರಿಯ ಮಳೆಯನ್ನು ಸಮಾನವಾಗಿ ಎಲ್ಲರ ಮೇಲೂ ಸುರುಸ್ತಾ ಇತ್ತು...

ಮೊನ್ನೆ ಜೂನ್ ೫ ರಂದು ತಮ್ಮ ಪಯಣ ಮುಗಿಸಿದಾಗಲೂ ಅವರ ಮುಖದಲ್ಲಿ ಮುಗುಳ್ನಗೆ ಮಾಸದೆ ಇತ್ತು.

-ಮಲ್ಲಿಕಾ. ಜಿ

## ನನ್ನ ಗುರುವಿಗೆ ಸಾವಿಲ್ಲ....



**ಕೆ** ಎಂ ಶಂಕರಪ್ಪನವರನ್ನು ನಾವು ಗುರುಗಳೆಂದೇ ಕರೆಯುತ್ತಿದ್ದೆವು. ಎಂಥವರನ್ನೂ ತನ್ನೆಡೆಗೆ ಆಕರ್ಷಿಸುವ ಸೂಜಿಗಲ್ಲಿನ ವ್ಯಕ್ತಿತ್ವ. ಅವರನ್ನು ಒಮ್ಮೆ ನೋಡಿದರೆ ಸಾಕು! ಎಂಥವರಿಗಾದರೂ ಅವರ ಬಗ್ಗೆ ಸಕಾರಣಗಳಿಲ್ಲದೇ ಥಟ್ಟನೇ ಗೌರವ ಮೂಡುತ್ತಿತ್ತು. ಕಳೆದ ಮುವತ್ತು ವರ್ಷಗಳಿಂದ ಅವರ ಪರಿಧಿಯಲ್ಲಿದ್ದ ನನಗೆ, ಅವರು ಎಷ್ಟು ಅರ್ಥವಾಗಿದ್ದಾರೋ ನನಗೆ ತಿಳಿಯದು! ಆದರೆ ಇಷ್ಟು ಮಾತ್ರ ಸತ್ಯ; ಪ್ರೀತಿ, ಕರುಣೆಗಳು ಹದವರಿತು ಬೆರೆತ ಬೆಳಕಿನ ಗಣಿಯಂತೆ, ದಾಹ ತಣಿಸುವ ಹರಿಯುವ ತೊರೆಯಂತೆ ಅವರು ನನಗೆ ಕಂಡಿದ್ದಾರೆ. ನನ್ನಂತಹ ಒರಟಾದ ಕಗ್ಗಲ್ಲನ್ನೂ ಕರಗಿಸುವ ಮಾಂತ್ರಿಕ ಶಕ್ತಿ ಅವರಿಗಿತ್ತು. ಬೆಳಕಿಗೆ ಹೇಗೆ ಸಾವಿಲ್ಲವೋ ಹಾಗೆಯೇ ಬುದ್ಧ ಮಾರ್ಗಿಯಾದ ನನ್ನ ಗುರುವಿಗೂ ಸಾವಿಲ್ಲ. ಧ್ಯಾನದ ಚೌಕಟ್ಟಿನಲ್ಲಿ ಕೌಶಲದಿಂದ ಬಿಡಿಸಿದ ನಿರಾಭರಣ ಚಿತ್ರದಂತೆ ನನ್ನ ಗುರುವಿನ ವ್ಯಕ್ತಿತ್ವ.

ಎಂಬತ್ತರ ದಶಕದ ಮೊದಲ ದಿನಗಳವು. ಒಂದು ಧೂಳುಸಂಜೆ. ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಮೆಟ್ಟಿಲುಗಳ ಮೇಲೆ ಪೈಪ್ ಸೇದುತ್ತಾ ಕುಳಿತಿದ್ದ ಯೋಗಿಯೊಬ್ಬರನ್ನು ಕಂಡೆ. ಹಿಮಾಲಯದ ತಪ್ಪಲಲ್ಲಿ ತಪಸ್ಸನ್ನು ಮುಗಿಸಿ ಆಗತಾನೆ ಬಂದಂತಿದ್ದ ಸಂತರಂತೆ ಅವರು ನನಗೆ ಕಂಡರು. ಜೊತೆಯಲ್ಲಿದ್ದ ಎಚ್ ಎಸ್ ಶಿವಪ್ರಕಾಶರು 'ಇವರು ಕೆ ಎಂ ಶಂಕರಪ್ಪನವರು' ಎಂದು ನನಗೆ ಒಂದು ಎತ್ತರದ ಪರ್ವತವನ್ನು ತೋರಿಸುವಂತೆ ಪರಿಚಯಿಸಿದರು. ಮೊದಲ ದಿನ ನಾನು ಕಂಡ ಅವರ ಕಣ್ಣಲ್ಲಿನ ಕಾಂತಿ ಹಾಗೂ ಆರ್ದ್ರತೆಯ ಮಾತುಗಳಿಗೆ ನನ್ನ ಮನಸ್ಸು ಇಡಿಯಾಗಿ ಅವರಿಗೆ ಒಪ್ಪಿಸಿಕೊಂಡಿತು. ಗಾಯಕ್ಕೆ ಹಚ್ಚುವ ಮುಲಾಮಿನಂತೆ ಇರುತ್ತಿದ್ದ ಅವರ ಮಾತುಗಳು, ನನ್ನೊಳಗಿನ ಉದ್ವಿಗ್ನತೆ, ಹಿಂಜರಿಕೆ ಮತ್ತು ಹತಾಶೆಯನ್ನು ಶಮನಗೊಳಿಸಿತು.

ಗುರುಗಳಿಗೆ ಇನ್ನೊಂದು ಶಕ್ತಿಯೂ ಇತ್ತು. ಒಬ್ಬ ವ್ಯಕ್ತಿಯ ಅಂತರಂಗದಲ್ಲಿ ಸುಪ್ತವಾಗಿ ಅಡಗಿರುತಿದ್ದ ಪ್ರತಿಭೆಯನ್ನು ಕಂಡುಹಿಡಿದು, ಅದನ್ನು ಸಬಲಗೊಳಿಸುವ ಹಾಗೂ ಪ್ರಕಟಗೊಳ್ಳುವ ಎಲ್ಲ ದಾರಿಗಳ ಬಗ್ಗೆಯೂ ಬೆಳಕು ಚೆಲ್ಲಿ, ಪ್ರತಿಭೆಯ ಕಿಡಿ ಜ್ವಾಲೆಯಾಗುವಂತೆ ಮಾಡುವುದರಲ್ಲಿ ಗುರುಗಳು ಸಿದ್ಧಹಸ್ತರು. ಅವರದು ಮಿತವಾದ ಮಾತು. ಹೇಳಬೇಕಾದ್ದನ್ನು ಝೆನ್ ಗುರುವಿನಂತೆ ರೂಪಕದಲ್ಲಿ ಹೇಳಿ ಮೌನವಾಗುತ್ತಿದ್ದರು. ಸಭೆ-ಸಮಾರಂಭದ ಗೌಜು ಗದ್ದಲಗಳು, ಬಹಿರಂಗದ ಆಡಂಬರ, ಕೀರ್ತಿ, ಹಣ ಇವುಗಳನ್ನೆಲ್ಲಾ ನಿರ್ಲಕ್ಷಿಸಿ, ಅಕ್ಷರಶಃ ಸಂತನಂತೆ ಕೊನೆಯವರೆಗೂ ಬಾಳಿದರು. ಹಾಗೆಯೇ ಹೊರಗಿನ ಸಮಾಜದಲ್ಲಿ ಬದಲಾವಣೆಯನ್ನು ಕಾಣಲು ಅವರು ಹೇಗೆ ಹಂಬಲಿಸುತ್ತಿದ್ದರೋ, ಅಂತಹ ಬದಲಾವಣೆಯನ್ನು ಮೊದಲು ತಮ್ಮೊಳಗೇ ತಂದುಕೊಂಡಿರುತ್ತಿದ್ದರು.

ನನ್ನ ಗುರು ಬುದ್ಧನ ಪ್ರಿಯ ಶಿಷ್ಯ ಆನಂದನಂತೆ ಭಾವಜೀವಿಯೂ ಅಲ್ಲ; ಹಾಗೆಯೇ ಯೋಗಿ ಮಿಲರೇಪನಂತೆ ಕಠಿಣ ಸಾಧಕರೂ ಅಲ್ಲ. ಇವುಗಳ ಸಮನ್ವಯವನ್ನು ಸಾಧಿಸಿ ತೋರಿಸಿದ ಮಧ್ಯಮ ಮಾರ್ಗಿ ಅವರು. ಪತ್ನಿ ಶ್ರೀಮತಿ ಸೀತಾಲಕ್ಷ್ಮಿಯವರು ತೀರಿಕೊಂಡ ದಿನ ಗುರುಗಳು ತೋರಿದ ಸಂಯಮ, ಭಾವೋದ್ವೇಗವಿಲ್ಲದ ಅವರ ನಡವಳಿಕೆಯನ್ನು ಕಣ್ಣಾರೆ ಕಂಡವನು ನಾನು.

ಎಲ್ಲರಿಗೂ ತಿಳಿದಿರುವಂತೆ ನನ್ನ ಗುರು ಬುದ್ಧನನ್ನು ತಮ್ಮೊಳಗೆ ತುಂಬಿಕೊಂಡವರು. ಹಾಗೆಯೇ ತನ್ನ ತೆಕ್ಕೆಗೆ ಬಂದ ಎಲ್ಲರಿಗೂ ಬುದ್ಧನ ಬೆಳಕಿನ ಮಾರ್ಗವನ್ನು ತೋರುತ್ತಿದ್ದರು. ನಾವೆಲ್ಲಾ ಬುದ್ಧನನ್ನು ಕಣ್ಣರಳಿಸಿ ನೋಡಲು ಗುರುಗಳೇ ಕಾರಣ. ಆದರೆ ಎಂದೂ ತಮ್ಮನ್ನು 'ಬೌದ್ಧ' ಎಂದು ಕರೆದುಕೊಂಡಿರಲಿಲ್ಲ. ಅವರೇ ಹೇಳುವಂತೆ 'ಬೌದ್ಧ ಧರ್ಮವೆನ್ನುವುದು ಉಪದೇಶಿಸುವುದೂ ಅಲ್ಲ! ಬರೀ ಕೇಳುವ ಧರ್ಮವೂ ಅಲ್ಲ! ಅದು ನಡೆಯುವ ದಾರಿ. ಆ ಸಂತೋಷವನ್ನು ನಡೆದೇ ಅನುಭವಿಸಬೇಕು' ಎಂದು ಹೇಳುತ್ತಿದ್ದರು. ಹೀಗೆ ಹೇಳಿ ತಾವೇ ದಮ್ಮದ ದಾರಿಯಲ್ಲಿ ನಡೆದು ತೋರಿಸಿದರು. ಹಾಗೇಯೇ ಸದ್ದಿಲ್ಲದೆ ನಡೆದೇ ಹೋದರು...

-ಜಿ ವಿ ಆನಂದಮೂರ್ತಿ

## ನೆನಪಾಗಿ ಉಳಿದ ನಮ್ಮ ಶಂಕರಪ್ಪ ತಾತ...

**ಜೂನ್** ೫ನೇ ತಾರೀಖು ಗುರುವಾರ ಮಧ್ಯಾಹ್ನ ನನ್ನ ವೃತ್ತಿಯಲ್ಲಿ ಮಗ್ನಳಾಗಿದ್ದೆ. ಕೆಬಿ ಸರ್ (ಕೆ.ಬಿ.ಸಿದ್ದಯ್ಯನವರು) ಮಗಳು ಪಲ್ಲವಿ ಡೆಲ್ಲಿಯಿಂದ ಫೋನ್ ಮಾಡಿ, 'ಆಂಟಿ, ಶಂಕರಪ್ಪ ತಾತ ಇವತ್ತು ಬೆಳಿಗ್ಗೆ ೯ ಗಂಟೆಗೆ ಹೋಗಿಬಿಟ್ಟರಂತೆ!' ಅಂತ ಸುದ್ದಿ ತಿಳಿಸಿದಾಗ ಬಿಳಿ ಗಡ್ಡದ ಮರೆಯಿಂದ ಸದಾ ಚಿಮ್ಮುವ ನಗುವಿನ ಶಂಕರಪ್ಪನವರು ಇನ್ನು ಬರೀ ನೆನಪು ಮಾತ್ರವೇ ಎನಿಸಿ ಮನಸ್ಸೆಲ್ಲಾ ಖಾಲಿಖಾಲಿಯಾಯಿತು.

ಸಿನಿಮಾ ತಂತ್ರಜ್ಞರಾಗಿ ಪೂನಾದಲ್ಲಿ ತರಬೇತಿ ಪಡೆದು ನಂತರ ಸಮಾಜವಾದದ ಕಡೆ ಆಕರ್ಷಿತರಾಗಿ, ಆ ಕಾಲದ ಸಮಾಜವಾದಿ ಗೆಳೆಯರನ್ನ, ಸಮಾಜವಾದಿ ನಡೆಗಳನ್ನ ಪಡೆದುಕೊಂಡಿದ್ದ ಶಂಕರಪ್ಪನವರ ಸಂಪರ್ಕ ನಮಗಾಗುವ ಹೊತ್ತಿಗಾಗಲೇ ಅವರು ಬುದ್ಧ ದಮ್ಮದ ಕಡೆಗೆ ತೆರೆದುಕೊಡಿದ್ದರು. ಅವರ ಮಾತು, ಸ್ಪರ್ಶ ಎಲ್ಲಕ್ಕೆ ದಮ್ಮದ ಮಾಂತ್ರಿಕತೆಯ ಲೇಪವಿತ್ತು.

ಶಂಕರಪ್ಪ ತಾತ ಎಂದರೆ ನಮಗೆಲ್ಲಾ ಬುದ್ಧ ದಮ್ಮವೇ. ಸರಳವಾಗಿ ಯಾವ ಕ್ಲೀಷೆಗಳೂ ಇಲ್ಲದೆ ಅದರ ಆಶಯವನ್ನ ಹೇಳುವ ಅವರ 'ಬುದ್ಧ ಬರಲಿ ನಮ್ಮೂರಿಗೆ' ನನ್ನ ಮೆಚ್ಚಿನ ಪುಸ್ತಕ.



ದಲಿತ ಚಳುವಳಿ, ರೈತ ಚಳುವಳಿಗಳ ಮುಂದುವರೆದ ಭಾಗವಾಗಿ ಬುದ್ಧ ಬಸವನ ದಾರಿಯನ್ನ ಕಂಡುಕೊಂಡಿದ್ದ ನಮಗೆ ಮಾನಸಿಕವಾಗಿ, ಸಾಮಾಜಿಕವಾಗಿ ನಮ್ಮೊಡನೆ ನಿಲ್ಲುತ್ತಿದ್ದ ಹಿರಿಯ ಚೇತನ ನಮ್ಮ ಶಂಕರಪ್ಪನವರು.

ಸನಾತನ ಧರ್ಮದ ಒಳಸುಳಿಗಳು ನಮ್ಮನ್ನು ಆಪೋಶನ ತೆಗೆದುಕೊಳ್ಳಲು ಸದಾ ಯತ್ನಿಸುತ್ತಿರುವಾಗ ನಿಮ್ಮ ಜೊತೆಗೆ ನಾನಿದ್ದೇನೆ ಎಂದು ಆತ್ಮಸ್ಥೈರ್ಯ ತುಂಬುತ್ತಿದ್ದ ಹೃದಯವಂತಿಕೆಯ ಹಿರಿಯ ಜೀವದ ಪಾದ ಅಥವಾ ಬೇರು, ಅವರ ಮಗಳು ಸ್ನೇಹಲತಾಳ ಮಾತುಗಳಲ್ಲೇ ಹೇಳುವುದಾದರೆ, ಹುಟ್ಟೂರು ಕಾರಮರಡಿಯಾದರೆ ಅವರ ಹೃದಯ ತುಮಕೂರಾಗಿತ್ತು, ತುಮಕೂರಿನ ಈ ಬಳಗದ ಬಗೆ ಅವರಿಗೆ ವಿಶೇಷ ಅಕ್ಕರೆ.

'ಅಯೋಗ್ಯರುಗಳ್ರಾ, ಏನಾದ್ರೂ ಸಮಾಜಕ್ಕೆ ಉಪಯೋಗವಾಗುವಂಥಾದ್ದು ಮಾಡ್ರೋ, ನಿಮ್ಮ ಜೊತೆಗೆ ನಾನಿದ್ದೇನೆ' ಅಂತ ಪ್ರೀತಿಯಿಂದ ಹೇಳ ಹೇಳುತ್ತಲೇ ಬರೀ ನೆನಪಾಗಿ ನಮ್ಮೆಲ್ಲರಲ್ಲಿ ಉಳಿದ ಶಂಕರಪ್ಪನವರಿಗೆ ನನ್ನ ನಮನಗಳು.

-ಡಾ.ಅರುಂಧತಿ ರಂಗಸ್ವಾಮಿ

## ಸಮಕಾಲೀನ

# ಲೋಕಸಭಾ ಚುನಾವಣೆಯ ಪಾಠಗಳು



ಹಲವಾರು ಕಾರಣಗಳಿಂದಾಗಿ ಕುತೂಹಲ ಹುಟ್ಟಿಸಿದ್ದ ೨೦೧೪ರ ಲೋಕಸಭಾ ಚುನಾವಣೆಗಳು ಅಂತೂ ಮುಗಿದಿವೆ. ಸುಮಾರು ಒಂದೂವರೆ ತಿಂಗಳುಗಳ ಕಾಲ ಹಲವು ಹಂತಗಳಲ್ಲಿ ನಡೆದ ಮತದಾನ ರಾಜಕೀಯ ಪಕ್ಷಗಳನ್ನೂ, ಅವುಗಳ ಹುರಿಯಾಳುಗಳನ್ನೂ, ಮಾಧ್ಯಮಗಳನ್ನೂ, ಜನರನ್ನೂ, ಕೊನೆಗೆ ಚುನಾವಣಾ ಆಯೋಗವನ್ನೂ ಸುಸ್ತು ಹೊಡಿಸಿ ದೇಶಕ್ಕೆ ಒಂದು ಹೊಸ ಸ್ಥಿರ ಸರ್ಕಾರವನ್ನು ನೀಡುವಲ್ಲಿ ಯಶಸ್ವಿಯಾಗಿದೆ. ಪ್ರಥಮ ಬಾರಿಗೆ, ಸಂಸದೀಯ ಪ್ರಜಾಪ್ರಭುತ್ವ ಮಾದರಿಯನ್ನು ಧಿಕ್ಕರಿಸಿ ಅಧ್ಯಕ್ಷೀಯ ಮಾದರಿಯಲ್ಲಿ ಒಬ್ಬ ನಿರ್ದಿಷ್ಟ ಅಭ್ಯರ್ಥಿಯ ಪರ ಮತ್ತು ವಿರುದ್ಧ ಎಂಬ ವೈಖರಿಯಲ್ಲಿ ನಡೆದ ಚುನಾವಣೆಯು ಜನ ಆ ನಿರ್ದಿಷ್ಟ ಅಭ್ಯರ್ಥಿಯ ಪರವಾಗಿ ಅಭೂತಪೂರ್ವ ಬೆಂಬಲ ವ್ಯಕ್ತಪಡಿಸಿದೆಬಹಳ ವರ್ಷಗಳ ಕಾಲ ಕಾಣದಿದ್ದ ಒಂದು ಅಸಂದಿಗ್ಧ ರಾಜಕೀಯ ತೀರ್ಪನ್ನು ಜನತೆ ನೀಡಿದೆ. ಈ ಮೋದಿ ದಿಗ್ವಿಜಯದ ಹಿಂದೆ ಭಾರತದ ಚುನಾವಣಾ ಇತಿಹಾಸದಲ್ಲಿ ಕಂಡರಿಯದ ಹಲವಾರು ವಿಶೇಷ ಸಂಗತಿಗಳು ಕೆಲಸ ಮಾಡಿವೆ ಎಂದು ಹೇಳಲಾಗುತ್ತಿದೆ. ಹಾಗೇ ಈ ಚುನಾವಣೆಗಳು ಹಲವು ಹೊಸ ನಿಜಗಳನ್ನೂ ರಾಜಕೀಯ ಚಿಂತಕರ, ವಿಶ್ಲೇಷಕರ ಮುಂದೆ ತೆರೆದಿಟ್ಟಿವೆ. ಈ ಎಲ್ಲ ಸಂಗತಿಗಳು ಕೂಡಿ ಈ ಚುನಾವಣೆಯನ್ನು ಹಲವು ಕಾರಣಗಳಿಂದಾಗಿ ಭಾರತದ ಪ್ರಜಾಪ್ರಭುತ್ವ ಕುರಿತ ಚರ್ಚೆಗಳ ಸಂದರ್ಭದಲ್ಲಿ ಮಹತ್ವಪೂರ್ಣ ತಿರುವನ್ನು ಸೂಚಿಸುತ್ತಿದೆ ಎಂದೂ ಹೇಳಲಾಗುತ್ತಿದೆ.

ಈ ಚುನಾವಣಾ ಫಲಿತಾಂಶಗಳನ್ನು ನೇರವಾಗಿ ನೋಡುವುದಾದರೆ, ಮೊದಲು ಎದ್ದು ಕಾಣುವ ಸಂಗತಿ ಎಂದರೆ, ಜನ ಈವರೆಗಿನ ಎಲ್ಲ ರಾಜಕೀಯ ತಾತ್ವಿಕ ಚರ್ಚೆಗಳ ಕ್ಲೀಷೆಗಳಿಂದ ರೋಸಿಹೋದಂತೆ, ನೇರ, ಸರಳ ಮಾತುಗಳಿಗೆ–ಅವು ಪ್ರಾಮಾಣಿಕವೋ ಅಲ್ಲವೋ ಅದನ್ನು ಕಾದು ನೋಡಬಯಸಿದಂತೆ– ಸೈ ಎಂದಿದೆ. ಸಂಕೀರ್ಣ ಮಾತು, ವಾದ, ಚರ್ಚೆಗಳಿಗೆ ಸೊಪ್ಪು ಹಾಕಲು ನಿರಾಕರಿಸಿದೆ. ಸಂಕೀರ್ಣತೆಗಳ ಹಿಂದೆ ಇರುವುದು ಬರೀ ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಜಾತೀಯತೆ, ಕುಟುಂಬ ರಾಜಕಾರಣ, ಅಗ್ಗದ ಜನಪ್ರಿಯ ಕಾರ್ಯಕ್ರಮಗಳ ದುಂದುಗಾರಿಕೆ ಇತ್ಯಾದಿಗಳನ್ನು ಮರೆಮಾಚಿಕೊಳ್ಳುವ ತಂತ್ರಗಳು ಮಾತ್ರ ಎಂದು ಅದು ತೀರ್ಮಾನಿಸಿದಂತಿದೆ. ಇಲ್ಲದಿದ್ದರೆ, ಈ ತಂತ್ರಗಳಿಗೆ ಪರ್ಯಾಯ ಹೆಸರಿನಂತಿದ್ದ ಕಾಂಗ್ರೆಸ್ ಮತ್ತು ಅದರೊಡನೆ ಡಿ.ಎಂ.ಕೆ., ಬಿ.ಎಸ್ಪಿ., ಆರ್.ಜೆ.ಡಿ., ಸಮಾಜವಾದಿ ಪಕ್ಷಗಳು ಈ ಪ್ರಮಾಣದಲ್ಲೇಕೆ ಧೂಳೀಪಟವಾಗುತ್ತಿದ್ದವು? ಈ ಗೊಂದಲದಲ್ಲಿ ಇವೆಲ್ಲವುಗಳಿಂದ ದೂರವಿದ್ದ ಜೆಡಿಯು ಕೂಡ ಕೊಚ್ಚಿ ಹೋದದ್ದು ಮಾತ್ರ ಒಂದು ವಿಪರ್ಯಾಸ.

ಮೋದಿಯವರ 'ಗುಜರಾತ್ ಮಾದರಿ' ಕುರಿತ ತಾತ್ವಿಕ ತಕರಾರುಗಳು ಏನೇ ಇರಲಿ, ಅಲ್ಲಿ ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಜಾತೀಯತೆಗಳಿಲ್ಲ;ಬದಲಿಗೆ ದಕ್ಷ ಆಡಳಿತದ ಪರಿಣಾಮಗಳು ಎದ್ದು ಕಾಣುತ್ತಿದೆ.. ಈ ಮಾದರಿಯ ಬಗ್ಗೆ ಎತ್ತಲಾದ ತಾತ್ವಿಕ ತಕರಾರುಗಳು ನಿಜವಿದ್ದರೂ, ಈ ತಕರಾರುಗಳಿಗೆ ಆಸ್ಪದವಿಲ್ಲದಂತಹ ಆದರ್ಶಮಯ ಅಭಿವೃದ್ಧಿ ಮತ್ತು ಆಡಳಿತ ನೀಡುವ ರಾಜಕೀಯ ಪರ್ಯಾಯವಾದರೂ ವಾಸ್ತವವಾಗಿ ಈಗ ಎಲ್ಲಿದೆ? ಹಾಗಾಗಿ, ಜನ ಸದ್ಯಕ್ಕೆ ಗುಜರಾತ್ ಮಾದರಿಯ ಮೌಲ್ಯಗಳಾದರೂ ರಾಷ್ಟ್ರ ಜೀವನದಲ್ಲಿ ಸಾಕಾರವಾಗಲಿ ಎಂದು ಒಂದು ಜಾಣ ವ್ಯಾವಹಾರಿಕ ತೀರ್ಮಾನಕ್ಕೆ ಬಂದಂತಿದೆ. ಮೋದಿ ವಿರುದ್ಧ ವಾದಿಸಿದವರು, ತಮ್ಮ ಪರವಾದ ಒಂದು ಪರ್ಯಾಯವಿಲ್ಲದೆ ಮಾತಾಡುತ್ತಿದ್ದೇವೆ; ಎಡ ಪಕ್ಷಗಳು ತಮ್ಮ ತಾತ್ವಿಕ ಶ್ರೇಷ್ಠತೆಯ ಅಹಂಕಾರ ಮತ್ತು ಹಠಮಾರಿತನಗಳಿಂದ ಹೊರಬರಲಾಗದೆ ಜನರ ವಿಶ್ವಾಸ ಕಳೆದುಕೊಂಡಿವೆ ಮತ್ತು ಪರ್ಯಾಯದಂತೆ ಕಾಣುತ್ತಿದ್ದ ಆಪ್ ಇನ್ನೂ ದೊಡ್ಡ ಸವಾಲಿಗೆ ಸಿದ್ಧವಾಗಿಲ್ಲ ಎಂಬುದನ್ನು ಮರೆತಿದ್ದರು. ರಾಜ್ಯ ಮಟ್ಟದಲ್ಲಿ ವಿಶ್ವಾಸಾರ್ಹ ಪರ್ಯಾಯಯಿದ್ದೆಡೆಯಲ್ಲೆಲ್ಲ–ತಮಿಳ್ನಾಡು, ತೆಲಂಗಾಣ, ಒರಿಸ್ಸಾ ಮತ್ತು ಪ. ಬಂಗಾಳ–ಮೋದಿ ಆಟವೇನೂ ನಡೆದಿಲ್ಲ ಎಂಬುದನ್ನೂ ನಾವು ಗಮನಿಸಬೇಕು. ಹೀಗಾಗಿ, ಈ ಚುನಾವಣೆಯನ್ನು ಮೋದಿ ವಿಜಯವೆಂದಷ್ಟೇ ಹೇಳಿದರೆ ರಾಷ್ಟ್ರದ ಮತದಾರರ ವಿವೇಕವನ್ನು ಅವಮಾನಿಸಿದಂತೆಯೇ ಸರಿ. ಬದಲಿಗೆ, ಇದು ಒಂದು ಮಿತಿಯಲ್ಲಿ ವಿಶ್ವಾಸಾರ್ಹ ಪರ್ಯಾಯಗಳಿಗೆ ಜನ ನಡೆಸಿದ ಹುಡುಕಾಟದ ವಿಜಯ ಕೂಡ ಹೌದು. ಈ ಹುಡುಕಾಟದ ಇಂತಹ ಯಶಸ್ಸೇ ಅದು, ಸದರಿ ಮೋದಿ ವಿಜಯದೊಂದಿಗೆ ಮುಗಿಯುವಂತಹುದಲ್ಲ ಎಂಬುದನ್ನೂ ಸೂಚಿಸುತ್ತದೆ. ಹಾಗೇ, ಕಾಂಗ್ರೆಸ್ ಈವರೆಗೆ ನಡೆಸಿಕೊಂಡು ಬರುತ್ತಿದ್ದ ಮತ್ತು ಮೋದಿ ಎದುರಿನಲ್ಲಿ ತನ್ನ ಮಹಾ ಪರಾಭವಕ್ಕೆ ಕಾರಣವಾದ ಪ್ರಾದೇಶಿಕ ಬೇರುಗಳಿಲ್ಲದ ರಾಷ್ಟ್ರೀಯ ರಾಜಕಾರಣಕ್ಕೆ ಇನ್ನು ಭವಿಷ್ಯವಿಲ್ಲ ಎಂದೂ ಸೂಚಿಸುತ್ತಿದೆ. ಹಾಗಾಗಿಯೇ ಸ್ವಘೋಷಿತ ಹಿಂದೂ ರಾಷ್ಟೀಯವಾದಿ ಮೋದಿ ಈಗ ಸಹಕಾರಿ ಒಕ್ಕೂಟ ತತ್ವದ ಮಂತ್ರ ಜಪಿಸುಂತಾಗಿರುವುದು ಅಲ್ಲವೇ?

ಇಂತಹ ಬಹುನೆಲೆಗಳ ರಾಜಕೀಯ ಪಲ್ಲಟಗಳ ಸಂದರ್ಭದಲ್ಲಿ ನಮ್ಮ ರಾಜಕೀಯ ಚಿಂತಕರು ಮತ್ತು ವಿಶ್ಲೇಷಕರು ಪ್ರಜಾಪ್ರಭುತ್ವ, ಜಾತ್ಯತೀತತೆ, ಅಭಿವೃದ್ಧಿ, ಎಡಪಂಥೀಯತೆ, ಬಲಪಂಥೀಯತೆ ಮುಂತಾದ ಪಾರಿಭಾಷಿಕಗಳನ್ನು ಬಳಸುವಾಗ ಈ ಪಲ್ಲಟಗಳಿಂದಾಗಿ ಅವುಗಳಲ್ಲುಂಟಾಗಿರುವ ಅರ್ಥ ಸಂದಿಗ್ಧತೆ ಮತ್ತು ವ್ಯತ್ಯಾಸಗಳನ್ನೂ ಸೂಕ್ಷ್ಮವಾಗಿ ಗಮನಿಸಿ ಈಗ ತಮ್ಮ ಚರ್ಚೆಗಳನ್ನು ಮುಂದುವರೆಸಬೇಕಾಗಿದೆ ಮತ್ತು ಆಗ ಮಾತ್ರ ಜನರ ಕಣ್ಣಿನಲ್ಲಿ ಅವು ವಿಶ್ವಾಸಾರ್ಹ ಎನಿಸುತ್ತವೆ ಎಂಬುದನ್ನೂ ಅರ್ಥಮಾಡಿಕೊಳ್ಳಬೇಕು. ಒಂದು ಸ್ಥೂಲ ನಿದರ್ಶನ: ಮೋದಿ ಗುಜರಾತ್‌ನಲ್ಲಿ ಆರೆಸ್ಸೆಸ್, ವಿಶ್ವಹಿಂದೂ ಪರಿಷತ್, ಬಜರಂಗ ದಳ ಇತ್ಯಾದಿ ಹಿಂದುತ್ವದ ಸಂಸ್ಥೆಗಳು ಹೆಚ್ಚು ಬಾಲ ಬಿಚ್ಚದಂತೆ ನೋಡಿಕೊಂಡಿದ್ದಾರೆ ಮತ್ತು ಗುಜರಾತ್ ಬಿಜೆಪಿ ಈಗ ಮಾಜಿ ಕಾಂಗ್ರೆಸ್ಸಿಗರಿಂದ ತುಂಬಿ ತುಳುಕುತ್ತಿದೆ;ಹಾಗೇ ಈ ಲೋಕಸಭಾ ಚುನಾವಣೆಗಳಲ್ಲಿ ಬಿಜೆಪಿಯಿಂದ ೬೭ ಜನ ಮಾಜಿ ಕಾಂಗ್ರೆಸ್ಸಿಗರಿಗೆ ಟಿಕೆಟ್ ನೀಡಲಾಗಿತ್ತು. ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ರಾಮ ವಿಲಾಸ್ ಪಾಸ್ವಾನ್, ರಾಮದಾಸ್ ಅಥವಳೆ, ಉದಿತ್ ರಾಜ್ ಮುಂತಾದ ದಲಿತ ನಾಯಕರು ಮತ್ತು ಎಂ.ಜೆ. ಅಕ್ಬರ್‌ರಂತಹ ಜಾತ್ಯತೀತ ಮುಸ್ಲಿಂ ಚಿಂತಕರು ಬಿಜೆಪಿ ಪರಿವಾರಕ್ಕೆ ಸೇರಿದ್ದಾರೆ. ಇದೆಲ್ಲವೂ ಸುಲಭ ಅವಕಾಶವಾದಿ ರಾಜಕಾರಣ ಎಂಬ ವರ್ಣನೆಗೂ ಮೀರಿದ ಯಾವುದೋ ವಿಶಿಷ್ಟ ಬೆಳವಣಿಗೆಯನ್ನು ಸೂಚಿಸುತ್ತದೆಯಲ್ಲವೇ? ನಮ್ಮ ಪರಿಭಾಷೆಯ ವಾಕ್ಯರಚನಾ ವಿಧಾನವನ್ನಾದರೂ ಈಗ ನಾವು ಬದಲಿಸಿಕೊಳ್ಳಬೇಕಲ್ಲವೇ?

ನಿಜ, ಮೋದಿಯ ಹಿಂದೆ ಹಲವಾರು ಪಟ್ಟಭದ್ರ ಹಿತಾಸಕ್ತಿಗಳು ಕೆಲಸ ಮಾಡಿವೆ. ಬಹುಶಃ ಈವರೆಗೆ ಇಂತಹ ಅತ್ಯಂತ ದುಬಾರಿ ಮತ್ತು ಆಧುನಿಕ ತಂತ್ರಜ್ಞಾನ ಮತ್ತು ನಿರ್ವಹಣಾ ತಂತ್ರಗಳನ್ನು ಹೊರಗುತ್ತಿಗೆ ರೂಪದಲ್ಲಿ ಬಳಸಿ ಯಾವ ಪಕ್ಷವೂ ಚುನಾವಣೆ ನಡೆಸಿರಲಿಲ್ಲ. ಮೋದಿಯ ಉಡುಪು, ಅದರ ಬಣ್ಣ, ವಿನ್ಯಾಸ, ಯಾವ ಜಾಗಕ್ಕೆ ಯಾವ ವಿನ್ಯಾಸದ ಉಡುಪು, ಯಾವ ವಿಷಯದ ಪ್ರಸ್ತಾಪ, ಯಾವ ಘೋಷಣೆಯ ಚಲಾವಣೆ, ಚುನಾವಣಾ ಚಿಹ್ನೆ ಮತ್ತು ಪ್ರಚಾರ ಭಿತ್ತಿ ಪತ್ರಗಳ ಗಾತ್ರ, ಬಣ್ಣ, ಇತ್ಯಾದಿಗಳನ್ನು ಕೂಡಾ ಜನಸಂಪರ್ಕ ಮತ್ತು ಸಂವಹನ ಶಾಸ್ತ್ರಗಳ ಪಂಡಿತರ ಮೂಲಕ ನಿರ್ಧರಿಸುತ್ತಾ ಬಹು ಮಾಧ್ಯಮಗಳ ಮೂಲಕ ನಡೆಸಿದ ಅತ್ಯಂತ ವ್ಯವಸ್ಥಿತವಾದ ಈ ಪ್ರಚಾರ ಕಾರ್ಯಕ್ರಮಕ್ಕೆ ಐದು ಸಾವಿರ ಕೋಟಿ ರೂ. ಖರ್ಚಾಗಿದೆಯೆಂದು ಹೇಳಲಾಗುತ್ತಿದೆ. ಇಷ್ಟು ಹಣ ಎಲ್ಲಿಂದ ಬಂತು? ಮೋದಿಯವರ ಮುಂದಿನ ಆಡಳಿತ ಶೈಲಿಯೇ ಇದನ್ನು ಹೇಳಬಲ್ಲುದು;ಹಾಗೇ ಅದೇ ಅವರ ಆಡಳಿತದ ಅಂತ್ಯವನ್ನೂ ಹಾಡಬಹುದು ಯಾರಿಗೆ ಗೊತ್ತು?

ಹೀಗಾಗಿ ಈ ಚುನಾವಣೆಗಳಿಂದ ಕಲಿಯಬೇಕಾದ ಹಲವು ಪಾಠಗಳಿವೆ, ನಾವು, ನೀವು, ಅವರು, ಇವರು, ಎಲ್ಲರೂ!–ಸಂಪಾದಕ






# ಬಂದೇ ಬಂದರು ಮೋದಿ!

ಪಾಠ–೧

–ರವೀಂದ್ರ ರೇಷ್ಮೆ



ಆತ ಬಂದ ... ಆತ ನೋಡ್ದ ... ಆತ ಗೆದ್ದ ... ನೆಪೋಲಿಯನ್ ಬೊನಾಪಾರ್ಟೆಯ ಐತಿಹಾಸಿಕ ದಂಡಯಾತ್ರೆ ಯನ್ನು ಬಣ್ಣಿಸುವ ಈ ನುಡಿಗಟ್ಟನ್ನೇ ಈ ಸಲದ ಲೋಕಸಭಾ ಚುನಾವಣೆ ಯಲ್ಲಿನ ನರೇಂದ್ರ ಮೋದಿಯ ದಿಗ್ವಿಜಯ ಯಾತ್ರೆಗೂ ಅನ್ವಯಿಸಿದರೆ ಅದು ಉತ್ಪ್ರೇಕ್ಷೆಯಾಗದು.

ಕಳೆದ ಮೇ ೧೬ರಂದು ಪ್ರಕಟಗೊಂಡ ಫಲಿತಾಂಶ ತಂದ ಅಚ್ಚರಿ, ಅಬ್ಬರ ಹಾಗೂ ಭಾವೋನ್ಮಾದಗಳೇ ಆ ಪರಿಯಾಗಿದ್ದವು. ಮೇಲ್ಜಾತಿ, ಮೇಲ್ವರ್ಗ ಅಥವಾ ಯಾವುದೇ ರಾಜವಂಶದ ಹಿನ್ನೆಲೆಯಿಲ್ಲದ, ಯಃಕಶ್ಚಿತ್ ಒಂದು ಮಧ್ಯಮ ಗಾತ್ರದ ರಾಜ್ಯದ ಮುಖ್ಯಮಂತ್ರಿಯಾಗಿದ್ದ ಪ್ರಾದೇಶಿಕ ನಾಯಕನೊಬ್ಬ ತನ್ನದೇ ರಾಜ್ಯದ ಆಡಳಿತ ಮಾದರಿ ಮತ್ತು ಅಭಿವೃದ್ಧಿ ಮಾದರಿಯನ್ನು ಮುಂದಿಟ್ಟುಕೊಂಡು ಇಡೀ ದೇಶಾದ್ಯಂತ ಮತಯಾಚನೆ ಮಾಡುವ ಎದೆಗಾರಿಕೆ ಪ್ರದರ್ಶಿಸುತ್ತಾ ಬಂದನಲ್ಲ; ಅದುವೇ ಮೋದಿಯ ಯಶಸ್ಸಿನ ಹೆಗ್ಗುರುತಾಗಿತ್ತು.

'ಸುಶಾಸನ್ ಔರ್ ವಿಕಾಸ್' ಎಂಬ ಅವಳಿ ಸೂತ್ರಗಳನ್ನೇ ತನ್ನ ಗುಜರಾತ್ ಮಾಡೆಲ್‌ನ ದಿಕ್ಸೂಚಿಗಳನ್ನಾಗಿ ಬಿಂಬಿಸುತ್ತಾ ಸುಮಾರು ೪೦೦ಕ್ಕೂ ಅಧಿಕ ಸಾರ್ವಜನಿಕ ಸಭೆಗಳನ್ನುದ್ದೇಶಿಸಿ ಪ್ರಚಾರ ಭಾಷಣ ಮಾಡಿದ ನರೇಂದ್ರ ಮೋದಿ ಅಸಲಿಗೆ ಏನು ಹೇಳಿದರೆಂಬುದನ್ನು ಕೇಳಿಸಿಕೊಳ್ಳುವ ವ್ಯವಧಾನ ಅವರ ಕಟ್ಟಾ ಬೆಂಬಲಿಗರಿಗೂ ಇರಲಿಲ್ಲ. ಅವರ ಕಡುಟೀಕಾಕಾರರಲ್ಲೂ ಕಾಣಿಸಲಿಲ್ಲ. ಬೆಂಬಲಿಗರಿಗೆ 'ನಮೋ' ನಾಮ ಜಪವೇ ಮುಖ್ಯವಾಗಿತ್ತು. ವಿರೋಧಿಗಳಿಗೆ ಆತ ಒಬ್ಬ 'ನರಹಂತಕ', 'ಕೊಲೆಗಡುಕ' ಎಂದು ನಿಂದಿಸುವುದೇ ಚುನಾವಣಾ ಪ್ರಣಾಳಿಕೆಯಾಗಿತ್ತು !

ದಾವಣಗೆರೆಯ ರ‍್ಯಾಲಿಯಲ್ಲಿ ಮೋದಿ ಹೇಳಿದ್ದೇನು ಗೊತ್ತೇ? "ಕರ್ನಾಟಕದ ಮ್ಯಾಂಚೆಸ್ಟರ್ ಅಂತ ಇಡೀ ದೇಶಾದ್ಯಂತ ಪ್ರಸಿದ್ಧವಾಗಿದ್ದ ದಾವಣಗೆರೆಯ ಕಾಟನ್ ಮಿಲ್ಲುಗಳೆಲ್ಲಾ ಬಂದಾಗಿ ದಶಕಗಳೇ ಕಳೆದಿವೆ. ಇದನ್ನು ಕಂಡಾಗ ನಮಗೆಲ್ಲಾ ನಿಜಕ್ಕೂ ನೋವಾಗುತ್ತದೆ. ಇದೇ ಜವಳಿ ಉದ್ಯಮದ ಪುನಶ್ಚೇತನಕ್ಕಾಗಿ ನಾವು ಗುಜರಾತ್‌ನಲ್ಲಿ ೫–ಎಫ್‌ಗಳ 'ಪಂಚತತ್ವ' ನೀತಿಯನ್ನು ಜಾರಿಗೊಳಿಸಿದ್ದೇವೆ. ಫಾರಂ–ಫೈಬರ್–ಫ್ಯಾಬ್ರಿಕ್–ಫ್ಯಾಶನ್ ಮತ್ತು ಫಾರಿನ್ ಎಂಬ ಈ ಮಾದರಿಯಿಂದಾಗಿ ಅಹ್ಮದಾಬಾದ್ ಮತ್ತು ಸೂರತ್‌ನಲ್ಲಿನ ಜವಳಿ ಉದ್ಯಮ ಸಮೃದ್ಧಿಯಿಂದ ನಳನಳಿಸುತ್ತಿದೆ. ಇಲ್ಲೂ ಅಂತಹ ಪ್ರಯತ್ನ ನಡೆಯಬಾರದೇಕೆ ..."

ನೇತ್ರಾವತಿ ತಿರುವು ಮತ್ತು ಎತ್ತಿನಹೊಳೆ ಯೋಜನೆಗಳ ವಿವಾದದಲ್ಲಿ ಸಿಲುಕಿದ ಮಂಗಳೂರು ಮತ್ತು ಚಿಕ್ಕಬಳ್ಳಾಪುರದಲ್ಲಿ ನರೇಂದ್ರ ಮೋದಿಯ ಮಾತು ಮತ್ತೊಂದು ಮಜಲೇರಿತ್ತು. "ಅಟಲ್‌ಜಿಯವರು ಪ್ರಧಾನಿಯಾಗಿದ್ದಾಗ ನದಿಗಳ ಜೋಡಣೆಯ ಕನಸು ಕಂಡಿದ್ದರಲ್ಲವೇ – ನಾವು ಗುಜರಾತಿನಲ್ಲಿ ಅಂತಹ ಒಂದು ಸಣ್ಣ ಪ್ರಯೋಗ ಮಾಡಿದ್ದೇವೆ. ಅದರ ಪರಿಣಾಮವಾಗಿ ಇವತ್ತು ಸಾಬರಮತಿ ನದಿಯಲ್ಲಿ ಹರಿಯುತ್ತಿರೋದು ಸಾಬರಮತಿಯ ನೀರಲ್ಲ, ನರ್ಮದಾ ನದಿ ನೀರು. ಇದರಿಂದಾಗಿ ಬತ್ತಿಹೋಗಿದ್ದ ಶೇ.೭೦ರಷ್ಟು ಕೆರೆಗಳಲ್ಲಿ ನೀರು ತುಂಬಿಸಿ ಸಹಸ್ರಾರು ಎಕರೆ ಕೃಷಿ ಜಮೀನಿಗೆ ನೀರುಣಿಸುವುದು ಸಾಧ್ಯವಾಯಿತು. ಸೋಲಾರ್ ಬ್ಯಾಟರಿಗಳ ಬೃಹತ್ ಜಾಲದ ಮೂಲಕ ಪಂಪ್‌ಸೆಟ್‌ಗಳಿಗೆ ನಿರಂತರ ವಿದ್ಯುತ್ ಪೂರೈಕೆ ಮತ್ತು ಬಹುತೇಕ ಗ್ರಾಮಗಳಿಗೆ ಪಕ್ಕಾ ಟಾರ್ ರಸ್ತೆ ಸಂಪರ್ಕ ಕಲ್ಪಿಸಿ, ಕೃಷಿ ಕ್ಷೇತ್ರದಲ್ಲಿ ಶೇ. ೮.೪%ರಷ್ಟು ವಾರ್ಷಿಕ ಪ್ರಗತಿಯನ್ನು ಸಾಧಿಸಲಾಯಿತು. ಇವತ್ತು ರಾಷ್ಟ್ರೀಯ ಕೃಷಿ ಪ್ರಗತಿ ವೇಗ ಶೇ. ೩ ಮಾತ್ರ ..."

ಗುಲ್ಬರ್ಗಾದ ಸಭೆಯಲ್ಲಿ ಬ್ರಿಟಿಷರು ತೊಲಗಿದ ನಂತರ ಒಮ್ಮೆಯೂ ಜಮೀನುಗಳ ಸಮಗ್ರ ಸರ್ವೆ ಕಾರ್ಯ ನಡೆದಿಲ್ಲದಿರುವುದನ್ನು ಪ್ರಸ್ತಾಪಿಸಿದರು. ಪರಿಣಾಮವಾಗಿ ಬಡ ರೈತರು ಪದೇ ಪದೇ ಒಕ್ಕಲೆಬ್ಬಿಸುವ ಭಯದಲ್ಲಿ ನರಳುವಂತಾದುದನ್ನು ನೆನಪಿಸಿದ ಮೋದಿ ಅದಕ್ಕೂ ತಮ್ಮ ಗುಜರಾತ್ ಮಾದರಿಯ ಪರಿಹಾರವನ್ನು ಸೂಚಿಸಿದರು. ರೈತರ ಕೈಗೇ ಜಿ.ಪಿ.ಎಸ್. ಎಂಬ ಎಲೆಕ್ಟ್ರಾನಿಕ್ ಸಾಧನವನ್ನು ಕೊಟ್ಟು, ಅವರುಗಳೇ ತಮ್ಮ ತಮ್ಮ ಜಮೀನಿನ ಪೋಡಿ ಗುರುತಿಸುವ ಮೂಲಕ ಕಳೆದ ಮೂರು ವರ್ಷಗಳಲ್ಲಿ ಗುಜರಾತಿನ ಎಲ್ಲಾ ಹಿಡುವಳಿದಾರರ ಜಮೀನು ಸರ್ವೆ ದಾಖಲೆಗಳನ್ನು ಪಕ್ಕಾ ಮಾಡಿರುವ ನೈಜ ಕಥೆಯನ್ನು ಹಂಚಿಕೊಂಡರು.



ತಾನು ಆರಿಸಿಕೊಂಡ ಎರಡನೇ ಲೋಕಸಭಾ ಕ್ಷೇತ್ರವಾದ ವಾರಣಾಸಿಯಲ್ಲಿ ಸಹ ಗಂಗೆಯ ಶುದ್ಧೀಕರಣದ ಜೊತೆಗೇ ಅಲ್ಲಿನ ಜಗತ್ಪ್ರಸಿದ್ಧ ಬನಾರಸ್ ಸೀರೆಗಳನ್ನು ತಯಾರಿಸುವ ಮುಸ್ಲಿಂ ನೇಕಾರ ಬಾಂಧವರ ದಯನೀಯ ಸ್ಥಿತಿಯತ್ತ ಗಮನ ಸೆಳೆದರು. ಸೂರತ್‌ನಲ್ಲಿ ಇದೇ ರೀತಿ ನೇಕಾರಿಕೆ ಮಾಡುವ ಕುಶಲಕರ್ಮಿಗಳು ಇವತ್ತು ಅತ್ಯಂತ ಲಾಭದಾಯಕ ಉದ್ಯಮಿಗಳಾಗಿರುವುದನ್ನು ಉದಾಹರಿಸಿ ಬನಾರಸ್ ಬಂಧುಗಳಿಗೂ ಪುನಶ್ಚೇತನದ ಖಚಿತ ಆಶ್ವಾಸನೆಯನ್ನಿತ್ತರು ಮೋದಿ. ಬಹುತೇಕ ಪ್ರಚಾರ ಭಾಷಣಗಳ ವೈಖರಿ ಇದೇ ರೀತಿಯಿತ್ತು. ಅಂದರೆ, ಸ್ಥಳೀಯತೆಯ ಮೂಲಕವೇ ರಾಷ್ಟ್ರೀಯತೆಯ ಪುನರುತ್ಥಾನ ಎಂಬ ಅನಿಸಿಕೆ ಪ್ರಧಾನವಾಗಿತ್ತು.

ಪರಿಶ್ರಮ ಪಟ್ಟು ಪರೀಕ್ಷೆಯಲ್ಲಿ ಪಾಸಾದ ಬಾಲಕನೊಬ್ಬ ತನ್ನ ಯಶೋಗಾಥೆಯ ರಿಪೋರ್ಟ್ ಕಾರ್ಡನ್ನು ಮುಂದಿಟ್ಟುಕೊಂಡೇ ಭವಿಷ್ಯದ ಕನಸುಗಳನ್ನು ಬಿಂಬಿಸುತ್ತ ಹೋಗುವಂತೆ ನರೇಂದ್ರ ಮೋದಿ ರಾಷ್ಟ್ರದ ಮತದಾರರ ದಟ್ಟ ಭ್ರಮನಿರಸನ ಹಾಗೂ ದಿನನಿತ್ಯದ ತಳಮಳಕ್ಕೆ ಪ್ರತಿಯಾಗಿ ಭರವಸೆಯ ಬದುಕಿನ ಸಾಧ್ಯತೆಗಳನ್ನು ಅನಾವರಣ ಮಾಡುತ್ತಾ ಬಂದರು.

ಬಹುತೇಕ ಪ್ರಚಾರ ಭಾಷಣಗಳ ವೈಖರಿ ಇದೇ ರೀತಿಯಿತ್ತು. ಅಂದರೆ, ಸ್ಥಳೀಯತೆಯ ಮೂಲಕವೇ ರಾಷ್ಟ್ರೀಯತೆಯ ಪುನರುತ್ಥಾನ ಎಂಬ ಅನಿಸಿಕೆ ಪ್ರಧಾನವಾಗಿತ್ತು.ನರೇಂದ್ರ ಮೋದಿಯ ಮಾತಿನ ಲಹರಿ ಸ್ವತಃ ಅವರನ್ನು ಪ್ರಧಾನಮಂತ್ರಿ ಅಭ್ಯರ್ಥಿಯಾಗಿ ಬಿಂಬಿಸಿದ್ದ ಭಾ.ಜ.ಪ.ದ ನೇತಾರರುಗಳಿಗೇ ಅಪರಿಚಿತವಾಗಿತ್ತು. ಹಾಗೆಯೇ ಅಯೋಧ್ಯೆಯ ರಾಮಮಂದಿರ ಮತ್ತು ಹಿಂದೂ ರಾಷ್ಟ್ರ ನಿರ್ಮಾಣದ ಉಲ್ಲೇಖವಿಲ್ಲದ ಈ ಭಾಷಣಗಳು ಅವರನ್ನು ಸೈದ್ಧಾಂತಿಕವಾಗಿ ಪೋಷಿಸಿಕೊಂಡು ಬಂದ ಸಂಘ ಪರಿವಾರಕ್ಕೂ ದಿಗ್ಭ್ರಮೆ ಉಂಟುಮಾಡುವಂತಿದ್ದವು.

ಮೋದಿ ವಿರುದ್ಧ ರಾಹುಲ್‌ಗಾಂಧಿ ಎಂಬ ಸಂಘರ್ಷ, ಕೋಮುವಾದ ಮತ್ತು ಸೆಕ್ಯುಲರ್‌ವಾದದ ನಡುವಿನ ಭಯಂಕರ ಸೆಣಸಾಟವಾಗುವ ಬದಲು ಬರಬರುತ್ತ ಪ್ರಜಾಪ್ರಭುತ್ವ ಮತ್ತು ವಂಶಪ್ರಭುತ್ವದ ನಡುವಿನ ಮುಖಾಮುಖಿ ಸಮರವಾಗಿಬಿಟ್ಟಿತು. ಮೋದಿಯ ಪ್ರಮುಖ ಎದುರಾಳಿಯಾಗಿದ್ದ ರಾಹುಲ್ ಗಾಂಧಿ ಕಳೆದ ಹತ್ತು ವರ್ಷಗಳ ಕಾಲ ಆಳುವ ಮೈತ್ರಿಕೂಟದ ಸಂಸದನಾಗಿದ್ದೂ, ಓರ್ವ ಮೇಧಾವಿ ಪ್ರಧಾನಮಂತ್ರಿಯ ಸಂಪುಟದಲ್ಲಿ ಮಂತ್ರಿಯಾಗಿ ಕೆಲಸ ಮಾಡುವ ವಿನಯವನ್ನೂ ಪ್ರದರ್ಶಿದವರಲ್ಲ. ಇಂದಿರಾಗಾಂಧಿಯ ವಂಶದ ಕುಡಿಯಾದ ತಾನೇನಿದ್ದರೂ ಭಾರತದ ಪ್ರಧಾನಮಂತ್ರಿ ಹುದ್ದೆಗಾಗಿಯೆ ಧರೆಗಿಳಿದು ಬಂದ ಮಹಾನ್ ಅವಧೂತನೆಂಬ ಅಹಂಕಾರ ಮೆರೆಯುತ್ತಾ ಬಂದರು.

ವ್ಯಕ್ತಿಪೂಜೆ, ಭಟ್ಟಂಗಿತನ ಹಾಗೂ ಇಂದಿರಾಗಾಂಧಿ ವಂಶಜರಿಗೆ ಗುಲಾಮನಿಷ್ಠೆ – ಇವೇ ತ್ರಿವಳಿ ಅನಿಷ್ಟಗಳೊಂದಿಗೆ ಸಾಗಿ ಬಂದ ಕಾಂಗ್ರೆಸ್ ಕಲ್ಚರ್‌ನ ಅವನತಿ ಚುನಾವಣಾ ಪ್ರಚಾರದ ಆರಂಭದಿಂದಲೇ ಕಣ್ಣಿಗೆ ರಾಚುವಂತಿತ್ತು. ಪ್ರಾಮಾಣಿಕ ಪ್ರಧಾನಿ, ಆದರೆ ಭ್ರಷ್ಟ ಸರ್ಕಾರ ... ! ಪದವಿ ಪ್ರಧಾನ ಮಂತ್ರಿಗೆ, ಪವರ್ರು ಸೋನಿಯಾ ಗಾಂಧಿಗೆ ... !! ಹೀಗೆ ನಮ್ಮ ಸಂವಿಧಾನಾತ್ಮಕ ಪರಿಕಲ್ಪನೆಯ ಪ್ರಧಾನಿ ಹುದ್ದೆ ಹಾಗೂ ಸಚಿವ ಸಂಪುಟವೆಂಬ ವ್ಯವಸ್ಥೆಯನ್ನೇ ನಗಣ್ಯಗೊಳಿಸುವ ರೀತಿಯಲ್ಲಿ ಪರ್ಯಾಯ ಶಕ್ತಿ ಕೇಂದ್ರವನ್ನಾಗಿಸಿಬಿಟ್ಟರು ಸೋನಿಯಾ ಗಾಂಧಿ. ಉತ್ತರದಾಯಿತ್ವ ಇಲ್ಲದ ಅಧಿಕಾರ



ಚಲಾವಣೆಯ ಆಕೆಯ ರಾಜಕಾರಣವೇ ಅಂತಿಮವಾಗಿ ಅವರ ಸುಪುತ್ರನನ್ನು ಏಕಾಏಕಿ ಪ್ರಧಾನಿ ಪಟ್ಟಕ್ಕೇರಿಸುವುದನ್ನೇ ಗುರಿಯಾಗಿಸಿಕೊಂಡಿತ್ತು. ಈ ಗುಟ್ಟು ರಟ್ಟಾಗುತ್ತಿದ್ದಂತೆಯೇ ರಾಷ್ಟ್ರದ ಮತದಾರರ ರಾಜಕೀಯ ವಿವೇಕಕ್ಕೆ ಕಿಚ್ಚು ಹಚ್ಚಿದಂತಾಗಿತ್ತು.

ಅಂದ ಹಾಗೆ ನಮ್ಮ ಪ್ರಗತಿಪರ ಚಿಂತಕರು ಮತ್ತು ಸೆಕ್ಯೂಲರಿಸಮ್ಮಿನ ಪ್ರತಿಪಾದಕರು ಗಮನಿಸದೇ ಹೋದ ಪ್ರಮುಖ ಸಂಗತಿಯೆಂದರೆ ಈ ನರೇಂದ್ರ ಮೋದಿ ಎಂಬ ಆಸಾಮಿ ಆರೆಸ್ಸೆಸ್ ಶಾಖಾದಿಂದ ನೇರವಾಗಿ ಪ್ರಧಾನಮಂತ್ರಿ ಹುದ್ದೆಗೆ ಧಾವಿಸಿ ಬಂದವರಲ್ಲ. ಆತ ೨೦೦೧ರಿಂದ ಸತತವಾಗಿ ೧೩ ವರ್ಷಗಳ ಕಾಲ ಗುಜರಾತ್ ಮುಖ್ಯಮಂತ್ರಿ ಎಂಬ ಸಾರ್ವಜನಿಕ ಹುದ್ದೆಯಲ್ಲಿದ್ದು, ತನ್ನ ಮೂಲ ಸೈದ್ಧಾಂತಿಕ ನೆಲೆಯಿಂದ ಬಹುದೂರ ಸಾಗಿ ಬಂದಿದ್ದರು. ತನ್ಮೂಲಕ ತನ್ನ ಬದುಕು, ಚಿಂತನೆ, ಅಭಿವೃದ್ಧಿ ದೃಷ್ಟಿಕೋನ ಮತ್ತು ರಾಜಕೀಯ ಮನೋಧರ್ಮವನ್ನೇ ಇಡಿಯಾಗಿ ಬದಲಿಸಿಕೊಳ್ಳಬಹುದಾದ ಅವಕಾಶ ಪಡೆದಿದ್ದರುಎಂಬುದು.

ಅಂದಹಾಗೆ ಭಾ.ಜ.ಪ.ದಂತಹ ರಾಷ್ಟ್ರೀಯ ಪಕ್ಷ ಇದೇ ಮೊದಲ ಬಾರಿಗೆ ದಿಲ್ಲಿ ಕೇಂದ್ರಿತ 'ರಾಷ್ಟ್ರ ನಾಯಕರ' ಬದಲಿಗೆ ನರೇಂದ್ರ ಮೋದಿ ಎಂಬ ಪ್ರಾದೇಶಿಕ ನಾಯಕನನ್ನೇ ರಾಷ್ಟ್ರದ ಪ್ರಧಾನಮಂತ್ರಿ ಹುದ್ದೆಯ ಅಭ್ಯರ್ಥಿ ಎಂದು ಬಿಂಬಿಸಿದ್ದೂ ಸಹ ಈ ಚುನಾವಣೆ ತಂದ ಒಂದು ಚಾರಿತ್ರಿಕ ಬದಲಾವಣೆಯೇ ಅಗಿತ್ತು. ಬರೀ ಮೋದಿ ಅಷ್ಟೇ ಏಕೆ, ಮೋದಿಗೆ ಪರ್ಯಾಯವಾಗಿ ಸಂಭವನೀಯ ಪ್ರಧಾನ ಮಂತ್ರಿಗಳೆಂದು ಪರಿಗಣಿಸಲ್ಪಟ್ಟವರೆಲ್ಲರೂ – ಉದಾ: ಮಮತಾ ಬ್ಯಾನರ್ಜಿ, ಜಯಲಲಿತಾ, ನಿತೀಶ್ ಕುಮಾರ್, ನವೀನ್ ಪಟ್ನಾಯಕ್, ಮಾಯಾವತಿ ಇತ್ಯಾದಿ – ಹೀಗೆ ಪ್ರತಿಯೊಬ್ಬರೂ ಒಂದೊಂದು ರಾಜ್ಯದ ಮುಖ್ಯಮಂತ್ರಿಗಳಾಗಿ ತಮ್ಮ ಸಾಮರ್ಥ್ಯ, ಜನಪ್ರಿಯತೆಯನ್ನು ಸಾಬೀತುಮಾಡಿದವರೇ ...

ಅಲ್ಲಿಗೆ ಈ ಚುನಾವಣಾ ನಂತರದ ಸನ್ನಿವೇಶದಲ್ಲಿ ಭಾರತದ ಒಕ್ಕೂಟ ರಾಜ್ಯ ವ್ಯವಸ್ಥೆ ಎಂಬುದು ಮತ್ತಷ್ಟು ಅರ್ಥಪೂರ್ಣಗೊಳ್ಳುತ್ತಾ ಹೋಗುವ ಸಾಧ್ಯತೆಯೂ ಸ್ಪಷ್ಟವಾಗಿ ಗೋಚರಿಸಿದೆ. ಇವರೆಲ್ಲರೂ ಒಂದೊಂದು ಪ್ರಾದೇಶಿಕ ಪಕ್ಷದ ನಾಯಕರೆಂಬುದು ಈ ಗ್ರಹಿಕೆಗೆ ಸಮರ್ಥನೆ ಒದಗಿಸುವ ಅಂಶ. ಅಂತೆಯೇ ಈ ರೀತಿಯ ಗಟ್ಟಿ ವ್ಯಕ್ತಿತ್ವದ ಪ್ರಾದೇಶಿಕ ನಾಯಕರುಗಳು ವಿವಿಧ ರಾಜ್ಯಗಳ ಸಿ.ಎಂ.ಗಳಾಗಿ ವಿರಾಜಮಾನರಾಗಿರುವುದರಿಂದಾಗಿಯೇ ೩೩೬ ಮಂದಿ ಸಂಸದರ ಬೃಹತ್ ಬೆಂಬಲವಿದ್ದರೂ ನರೇಂದ್ರ ಮೋದಿಯಾಗಲೀ ಅಥವಾ ಇನ್ನಾರೇ ಆಗಲೀ ಸರ್ವಾಧಿಕಾರಿಯಾಗಬಹುದಾದ ಒಂದು ದೂರದ ಸಾಧ್ಯತೆ ಕೂಡ ಮಸುಕಾಗಿಬಿಟ್ಟಿದೆ.

ನರೇಂದ್ರ ಮೋದಿ ತನ್ನ ಚುನಾವಣಾ ಗೆಲುವಿನ ನಂತರದ ಕಳೆದ ೪೦ ದಿನಗಳಲ್ಲಿ ಒಮ್ಮೆಯೂ ಎದುರಾಳಿಗಳ ಬಗ್ಗೆ ಒಂದೇ ಒಂದು ಕೊಂಕು ಮಾತನಾಡಿಲ್ಲ. ಬದಲಾಗಿ 'ಪ್ರತಿಪಕ್ಷಗಳ ಸಹಭಾಗಿತ್ವವಿಲ್ಲದಿದ್ದಲ್ಲಿ ನನಗೆ ದಕ್ಕಿರುವ ಬಹುಮತ ಅಪೂರ್ಣವೆಂದೇ ಭಾವಿಸುತ್ತೇನೆ. ಯಾಕೆಂದರೆ ದೇಶ ಕಟ್ಟುವ ಕೆಲಸ ನಮ್ಮ ಪಾರ್ಟಿಗೆ ಮಾತ್ರವೇ ಸಾಧ್ಯ ಎಂಬ ಭ್ರಮೆ ನಮ್ಮದಲ್ಲ. ನೀವೆಲ್ಲರೂ ಯಥಾಶಕ್ತಿ ಈ ಕೆಲಸವನ್ನು ಮಾಡುತ್ತಲೇ ಬಂದಿದ್ದೀರಿ ... ನಿಮ್ಮ ಅನುಭವ, ಮಾರ್ಗದರ್ಶನ ಕೂಡ ನಮಗೆ ಅವಶ್ಯ' ಎಂದೇ ಪುನರುಚ್ಚರಿಸುತ್ತಾ ಸಾಗಿರುವುದು ಸಧ್ಯಕ್ಕಂತೂ ಒಂದು ಅಪರೂಪದ ವಿದ್ಯಮಾನವೇ ...

---

ಪಾಠ–೨

# ಇನ್ನು ಇಲ್ಲಿ ಎಡಪಕ್ಷಗಳಿಗೆ ಭವಿಷ್ಯವಿದೆಯೇ?

–ಜಿ. ರಾಜಶೇಖರ

**ಯುದ್ಧ, ಜೂಜು ಮತ್ತು ಆಟಕ್ಕೆ ಮಾತ್ರ ಸಲ್ಲುವ ಸೋಲು, ಗೆಲುವು ಎಂಬ ಶಬ್ದಗಳನ್ನು ಚುನಾವಣೆಯ ಫಲಿತಾಂಶಕ್ಕೂ ಬಳಸುವುದು ಎಷ್ಟು ಸರಿ? ನಮ್ಮ ಮಾಧ್ಯಮಗಳಿಗೆ ಈ ಸಮಸ್ಯೆ ಎದುರಾಗಲೇ ಇಲ್ಲ. ಅವು ೨೦೧೪ ರ ಲೋಕಸಭಾ ಚುನಾವಣೆಯನ್ನು ಇನ್ನೊಂದು ಕಾರ್ಗಿಲ್ ಯುದ್ಧವೆಂಬಂತೆ ವರದಿ ಮಾಡಿದವು. ಮಾಧ್ಯಮಗಳ ಪ್ರಕಾರ ಈ ಯುದ್ಧದಲ್ಲಿ ಮೋದಿಯೇ ಭಾರತದ ದಂಡನಾಯಕ! ಚುನಾವಣೆ ಯುದ್ಧವಾದರೆ ಅದರಲ್ಲಿ ಸೋತವ ಸತ್ತ ಎಂದೇ ಲೆಕ್ಕ. ಆದರೆ ಚುನಾವಣೆಯ ನಂತರವೂ ಜೀವನ ಮುಂದುವರಿಯುತ್ತದೆ; ರಾಜಕೀಯವೂ ಮುಂದುವರಿಯುತ್ತದೆ....**






**ಖ್ಯಾ**ತ ಲೇಖಕ ಮಾರ್ಕ್‌ಟ್ವೇನ್ ಇನ್ನೂ ಜೀವಂತವಿರುವಾಗಲೇ ಪತ್ರಿಕೆಯೊಂದು, ಆತ ತೀರಿಕೊಂಡಿದ್ದಾನೆ ಎಂದು ಪ್ರಕಟಿಸಿಬಿಟ್ಟಿತು. ತನ್ನ ಕಾದಂಬರಿಗಳ ಜೊತೆಗೆ ತನ್ನ ಹಾಸ್ಯ ಬರಹಗಳಿಗೂ ಪ್ರಸಿದ್ಧನಾದ ಮಾರ್ಕ್‌ಟ್ವೇನ್ ತನ್ನ ಸಾವಿನ ಸುದ್ದಿ vastly exaggerated ಎಂದು ಉದ್ಗರಿಸಿದನಂತೆ! ೨೦೧೪ ರ ಚುನಾವಣೆಯ ಫಲಿತಾಂಶದ ನಂತರ ಎಡಪಕ್ಷಗಳಿಗೆ ಭವಿಷ್ಯವಿಲ್ಲ ಎಂಬ ನಮ್ಮ ಬಹುತೇಕ ಮಾಧ್ಯಮಗಳ ತೀರ್ಮಾನದ ಬಗ್ಗೆಯೂ ಅದೇ ಮಾತನ್ನು ಹೇಳಬಹುದು. ಎಡಪಕ್ಷಗಳು ಹೀನಾಯವಾಗಿ ಸೋತಿವೆ ನಿಜ. ಆದರೆ ಅವಕ್ಕೆ ಇನ್ನು ಉಳಿಗಾಲವಿಲ್ಲ ಎನ್ನುವುದು ಮಾತ್ರ ತೀರ ಉತ್ಪ್ರೇಕ್ಷೆಯ ಮಾತಾಯಿತು. ಎಡಪಕ್ಷಗಳನ್ನು ಕಂಡ ಕೂಡಲೆ ಬೊಗಳಲು ಶುರು ಮಾಡುವ ಮಾಧ್ಯಮಗಳ ಚಾಳಿ ಇವತ್ತು ನಿನ್ನೆಯದಲ್ಲ. ಸಮಾಜವಾದದ ಸಾವಿನ ಸುದ್ದಿಯನ್ನು ಅವು ಹಲವು ದಶಕಗಳ ಹಿಂದೆಯೇ ಪ್ರಕಟಿಸಿದ್ದವು. ಆದರೆ ಆನಂತರವೂ ಆ ವಾದದ ವಿರುದ್ಧ ತಮ್ಮ ಎಂದಿನ ಬೈಗುಳ ಅಪಪ್ರಚಾರಗಳನ್ನು ಮಾಧ್ಯಮಗಳು ಮುಂದುವರಿಸಿಕೊಂಡು ಬಂದಿರುವುದಕ್ಕೆ ಕಾರಣವಿದೆ. ಜಗತ್ತಿನಾದ್ಯಂತ ಸಮಾಜವಾದ ಅಧಿಕಾರದಿಂದ ದೂರ ಸರಿಯುತ್ತಿದ್ದರೂ ತನ್ನ ವೈಚಾರಿಕ ಪ್ರಖರತೆ ಮತ್ತು ಪ್ರಸ್ತುತತೆಗಳನ್ನು ಅದು ಈಗಲೂ ಉಳಿಸಿಕೊಂಡಿದೆ. ಮಾಧ್ಯಮಗಳ ಕಾರ್ಪೊರೇಟ್ ಯಜಮಾನರು, ಈ ವಾಸ್ತವವನ್ನು ಸಹಿಸಿಕೊಳ್ಳಲಾರರು. ಈಗ ಇದೇ ಮಂದಿ ಎಡಪಕ್ಷಗಳ ಕತೆ ಮುಗಿಯಿತು ಎಂದು ಸಾರಿ ಹೇಳುತ್ತಿದ್ದಾರೆ. ತಮ್ಮ ಮನದಾಳದ ಹಂಬಲವನ್ನು ಅವರು ವ್ಯಕ್ತಪಡಿಸುವ ಬಗೆ ಇದು!

೨೦೧೪ ರ ಚುನಾವಣೆಗಳಲ್ಲಿ ಎಡಪಕ್ಷಗಳು ಸೋತಿವೆ ಎಂದರೆ ಆ ಮಾತಿನ ಅರ್ಥವೇನು? ಯುದ್ಧ, ಜೂಜು ಮತ್ತು ಆಟಕ್ಕೆ ಮಾತ್ರ ಸಲ್ಲುವ ಸೋಲು, ಗೆಲುವು ಎಂಬ ಶಬ್ದಗಳನ್ನು ಚುನಾವಣೆಯ ಫಲಿತಾಂಶಕ್ಕೂ ಬಳಸುವುದು ಎಷ್ಟು ಸರಿ? ನಮ್ಮ ಮಾಧ್ಯಮಗಳಿಗೆ ಈ ಸಮಸ್ಯೆ ಎದುರಾಗಲೇ ಇಲ್ಲ. ಅವು ೨೦೧೪ರ ಲೋಕಸಭಾ ಚುನಾವಣೆಯನ್ನು ಇನ್ನೊಂದು ಕಾರ್ಗಿಲ್ ಯುದ್ಧವೆಂಬಂತೆ ವರದಿ ಮಾಡಿದವು. ಮಾಧ್ಯಮಗಳ ಪ್ರಕಾರ ಈ ಯುದ್ಧದಲ್ಲಿ ಮೋದಿಯೇ ಭಾರತದ ದಂಡನಾಯಕ! ಚುನಾವಣೆ ಯುದ್ಧವಾದರೆ ಅದರಲ್ಲಿ ಸೋತವ ಸತ್ತ ಎಂದೇ ಲೆಕ್ಕ. ಆದರೆ ಚುಣಾವಣೆಯ ನಂತರವೂ ಜೀವನ ಮುಂದುವರಿಯುತ್ತದೆ; ರಾಜಕೀಯವೂ ಮುಂದುವರಿಯುತ್ತದೆ. ಕಾಂಗ್ರೆಸ್, ಜೆ.ಡಿ.ಎಸ್. ನಂತಹ ಬೂರ್ಜ್ವಾಪಕ್ಷಗಳು, ಚುನಾವಣೆಯ ಸೀಸನ್‌ನಲ್ಲಿ ಮಾತ್ರ ರಾಜಕೀಯ ಮಾಡಿ ಉಳಿದ ದಿನಗಳಲ್ಲಿ ತಾವಾಯಿತು. ತಮ್ಮ ದಗಲ್ಬಾಜಿ ಆಯಿತು ಎಂದು ತಮ್ಮ ತಮ್ಮ ದಂದೆಗಳನ್ನು ಮಾಡಿಕೊಂಡಿರುವವರು. ಅದು ಎಡ ಪಕ್ಷಗಳ ಜಾಯಮಾನವೇ ಅಲ್ಲ. ಚುನಾವಣೆಯಲ್ಲಿ ಸೋಲಲಿ, ಗೆಲ್ಲಲಿ, ಹೋರಾಟ, ಪ್ರತಿಭಟನೆ, ಧರಣಿ, ಮುಷ್ಕರಗಳ ಅನುದಿನದ ರಾಜಕೀಯ, ಅವುಗಳ ಪಾಲಿಗೆ ಸದಾ ಇರುವಂತಹದ್ದೇ. ಚುನಾವಣೆಯಲ್ಲಿ ಸೋಲುವುದು ಎಡಪಕ್ಷಗಳಿಗೆ ಹೊಸತಲ್ಲ. ೨೦೧೪ರ ಸೋಲು ಅನಿರೀಕ್ಷಿತವೂ ಆಗಿರಲಿಲ್ಲ. ಆದ್ದರಿಂದ ಈ ಸೋಲನ್ನು ಎಡಪಕ್ಷಗಳು ಮರಣದಂಡನೆ ಎಂದು ಪರಿಗಣಿಸುವ ಮಾತೇ ಇಲ್ಲ. ಚುನಾವಣೆ ಮಾತ್ರವಲ್ಲ ತಮ್ಮ ದಿನ ನಿತ್ಯದ ರಾಜಕೀಯದಲ್ಲೂ ಯಶಸ್ಸಿನ ಬಗ್ಗೆ ಯೋಚಿಸದೆ, ತೊಡಗಿಕೊಳ್ಳುವುದು ಎಡ ಪಕ್ಷಗಳಿಗೆ ಅಭ್ಯಾಸವೇ ಆಗಿ ಹೋಗಿದೆ. ಲೋಹಿಯಾ ಸಮಾಜವಾದಿಗಳ ರಾಜಕೀಯವನ್ನು *ನಿರಾಶಾ ಕೀ*



ಕರ್ತವ್ಯ ಎಂದು ಕರೆದರು. ಅದು ಫಲಾಪೇಕ್ಷೆ ಇಲ್ಲದೆ ಮಾಡುವ ನಿಷ್ಕಾಮಕರ್ಮವಲ್ಲ. ಸೋಲು ಗೆಲುವು, ಏನೇ ಬರಲಿ, ಅನ್ಯಾಯ ಎಂದು ಕಂಡದ್ದನ್ನು ಎದುರಿಸಲೇ ಬೇಕು ಎಂಬ ನಿಶ್ಚಯದಲ್ಲಿ ಮಾಡುವಂತಹದ್ದು. ಇಂತಹ ರಾಜಕೀಯಕ್ಕೆ ಚುನಾವಣೆ ಯುದ್ಧವೂ ಅಲ್ಲ; ಕುದುರೆ ಜೂಜೂ ಅಲ್ಲ; ಅದು ಚಳುವಳಿಯ ಹಲವು ವಿಧಾನಗಳಲ್ಲಿ ಒಂದು; ಜನರ ಬಳಿ ತಮ್ಮ ಸಿದ್ಧಾಂತವನ್ನು ಒಯ್ಯಲು ಒಂದು ನೆವ ; ಅದಕ್ಕಿಂತ ಹೆಚ್ಚೂ ಅಲ್ಲ ; ಕಡಿಮೆಯೂ ಅಲ್ಲ.

ರಾಜಕೀಯದಲ್ಲಿ ಯಾವ ವಿದ್ಯಮಾನವೂ ಸ್ಥಿರವಲ್ಲ; ಶಾಶ್ವತವೂ ಅಲ್ಲ. ಆಳುವವರು ನಿರಂತರವಾಗಿ ವಂಚಿಸುತ್ತಿದ್ದರೂ ಜನ ಹತಾಶರಾಗದೆ, ಚುನಾವಣೆಯಿಂದ ಚುನಾವಣೆಗೆ ತಮ್ಮ ಆಯ್ಕೆಗಳನ್ನು ಬದಲಿಸುತ್ತಲೇ ಬಂದಿದ್ದಾರೆ. ಉದಾಹರಣೆಗೆ, ೨೦೧೩ ರ ರಾಜ್ಯ ವಿಧಾನ ಸಭಾ ಚುನಾವಣೆ ಮತ್ತು ೨೦೧೪ ರ ಲೋಕಸಭಾ ಚುನಾವಣೆಯ ಫಲಿತಾಂಶ ನಡುವೆ ಏನಾದರೂ ಹೋಲಿಕೆ ಇದೆಯೆ? ೧೯೮೪ರಲ್ಲಿ ಶ್ರೀಮತಿ ಇಂದಿರಾಗಾಂಧಿ ಕೊಲೆ ನಂತರ ನಡೆದ ಲೋಕಸಭಾ ಚುನಾವಣೆಯಲ್ಲಿ, ಕರ್ನಾಟಕದ ಜನ ಕಾಂಗ್ರೆಸ್ ಪಕ್ಷಕ್ಕೆ ಭಾರೀ ಬಹು ಮತ ನೀಡಿದರು; ಆದರೆ ಅದಾಗಿ ಕೆಲವೇ ತಿಂಗಳುಗಳ ನಂತರ ನಡೆದ ರಾಜ್ಯ ವಿಧಾನ ಸಭಾ ಚುನಾವಣೆಯಲ್ಲಿ ಅದೇ ಜನ ಕಾಂಗ್ರೆಸ್ ಪಕ್ಷವನ್ನು ತಿರಸ್ಕರಿಸಿ, ಜನತಾದಳ ಸರಕಾರಕ್ಕೆ ಬಹುಮತ ನೀಡಿದರು. ಯಾವ ಚುನಾವಣಾ ಫಲಿತಾಂಶವೂ ಜನತೆ ನೀಡಿದ ಅಂತಿಮ ತೀರ್ಪಲ್ಲ.

ಹಾಗೆಂದ ಮಾತ್ರಕ್ಕೆ, ಸದ್ಯದ ಸೋಲನ್ನು ಎಡಪಂಥೀಯರು ಲಘುವಾಗಿ ಪರಿಗಣಿಸುವಂತಿಲ್ಲ. ಬಿಜೆಪಿಗೆ ಕೇವಲ ಶೇಕಡಾ ೩೧ ಮತಗಳು ದೊರಕಿವೆ; ಅದು ಬಹುಮತವಲ್ಲ ಎಂಬ ಕೆಲಸಕ್ಕೆ ಬಾರದ ವಾದವೊಂದು ಈಗ ಚಲಾವಣೆಯಲ್ಲಿದೆ. ತೀವ್ರ ಬಲಪಂಥೀಯ, ಕೋಮುವಾದಿ ಪಕ್ಷವೊಂದು ಶೇಕಡಾ ೩೧ರಷ್ಟು ಮತಗಳನ್ನು ಬಾಚಿಕೊಳ್ಳುತ್ತದೆ ಎಂಬುದು ಸಣ್ಣ ಸಂಗತಿ ಅಲ್ಲ. ಬಿಜೆಪಿಗೆ ಮತ ಹಾಕದ ಎಲ್ಲರೂ ಬಿಜೆಪಿಯ ಹಿಂದುತ್ವ ರಾಜಕೀಯವನ್ನು ವಿರೋಧಿಸುವವರು ಎಂದು ಭಾವಿಸುವುದಕ್ಕೂ ಆಧಾರಗಳಿಲ್ಲ. ಹಾಗಾಗಿ ಬಿಜೆಪಿಯಂತಹ ಅಪ್ಪಟ ಬಲಪಂಥೀಯ ಪಕ್ಷದ ಎದುರು ಎಡಪಕ್ಷಗಳು ಈ ಪರಿ ಸೋತದ್ದರ ಬಗ್ಗೆ ಅವು ಇನ್ನಾದರೂ ಆತ್ಮಶೋಧನೆ ಮಾಡಿಕೊಳ್ಳಬೇಕು. ಎಡಪಕ್ಷಗಳು ಎಂದಾದರೂ ಕಾಂಗ್ರೆಸ್‌ಗಾಗಲೀ, ಬಿ.ಜೆ.ಪಿಗಾಗಲೀ ಒಂದು ಪರ್ಯಾಯವಾಗಿದ್ದವೆ? ಈ ಚುನಾವಣೆಯ ಉದ್ದಕ್ಕೂ ನರೇಂದ್ರಮೋದಿ ಮತ್ತೆ ಮತ್ತೆ ಜನರೆದುರು, ಗುಜರಾತ್ ಮಾದರಿ ಬಗ್ಗೆ ಪ್ರಸ್ತಾಪಿಸಿದರು ; ಗುಜರಾತ್‌ನ ಈ ಅಭಿವೃದ್ಧಿ ಮಾದರಿ ಸ್ವಾತಂತ್ರ್ಯಾನಂತರ ಭಾರತದ ಎಡಬಲ ಎಲ್ಲ ಪಕ್ಷಗಳೂ ಒಪ್ಪಿಕೊಂಡಿರುವ ಮತ್ತು ಅನುಮೋದಿಸುವ ಅಭಿವೃದ್ಧಿಯ ಮಾದರಿಗಿಂತ ಹೇಗೆ ಭಿನ್ನ? ಭಾರೀ ಅಣೆಕಟ್ಟುಗಳು, 'ಸುಧಾರಿತ ಕೃಷಿ; ಭಾರೀ ಕೈಗಾರಿಕೆ, ಗಣಿಗಾರಿಕೆ, ಹೆದ್ದಾರಿ ನಿರ್ಮಾಣ, ಸಾರಿಗೆ ಸಂಪರ್ಕ ಮತ್ತು ಯದ್ವಾತದ್ವಾ ನಗರೀಕರಣ ಈ ಅಭಿವೃದ್ಧಿ ಮಾದರಿಯನ್ನೇ ಭಾರತದಲ್ಲಿ ಕಾಂಗ್ರೆಸ್, ಬಿ.ಜೆ.ಪಿ, ಸಿ.ಪಿ.ಎಂ., ಸಿ.ಪಿ.ಐ ಮತ್ತು ಇತರ ಎಲ್ಲ ರಾಜಕೀಯ ಪಕ್ಷಗಳು ಎತ್ತಿ ಹಿಡಿಯುತ್ತಿರುವುದಲ್ಲವೆ? ಟಾಟಾ, ಬಿರ್ಲಾ, ಅದಾನಿ ಮತ್ತು ಅಂಬಾನಿಗಳಿಗೆ ಸಹ ಪ್ರಿಯವಾಗಿರುವುದು ಇದೇ ಅಭಿವೃದ್ಧಿ ಮಾದರಿ ಅಲ್ಲವೆ? ಈ ಅಭಿವೃದ್ಧಿ ಮಾದರಿ ಕಳೆದ ೭೦ ವರ್ಷಗಳಲ್ಲಿ ದೇಶದಾದ್ಯಂತ ಕೋಟ್ಯಾಂತರ (ಒಂದು ಅಂದಾಜಿನ ಪ್ರಕಾರ ೧೦ ಕೋಟಿ) ಆದಿವಾಸಿಗಳು, ಬಡರೈತರು ಮತ್ತು ಗ್ರಾಮೀಣ ಕಸುಬುಗಾರರನ್ನು ನೆಲೆ ತಪ್ಪಿಸಿದೆ ಮಾತ್ರವಲ್ಲ ಅವರನ್ನು ಸಂಪೂರ್ಣವಾಗಿ ದಿವಾಳಿ ಎಬ್ಬಿಸಿದೆ. ಈ ವಾಸ್ತವ, ನಮ್ಮ ಎಡಪಕ್ಷಗಳನ್ನು ಇವತ್ತಿಗೂ ಬಾಧಿಸುತ್ತಿಲ್ಲ. ದೇಶದ ಬೃಹತ್ ನೀರಾವರಿ ಯೋಜನೆಗಳು ಮತ್ತು ಗಣಿಗಾರಿಕೆಯ ವಿರುದ್ಧ ನಡೆದ ಯಾವ ಆಂದೋಲನದಲ್ಲಿಯೂ ಎಡಪಕ್ಷಗಳು ಭಾಗಿಯಾಗಿಲ್ಲ. ನರೇಂದ್ರ ಮೋದಿ ಈಗ ಗುಜರಾತ್ ಅಭಿವೃದ್ಧಿ ಮಾದರಿಯನ್ನು ಇಡೀ ದೇಶದಲ್ಲಿ ಜಾರಿಗೆ ತರಲು ಸಂಕಲ್ಪ ಮಾಡಿದ್ದಾರೆ; ಅಂದರೆ ಎಗ್ಗಿಲ್ಲದ ಗಣಿಗಾರಿಕೆ, ಬೃಹತ್ ಕೈಗಾರಿಕೆಗಳ ಸ್ಥಾಪನೆ ಮತ್ತು ನಗರೀಕರಣಗಳ ಈಗಾಗಲೇ ನಮ್ಮ ರಾಜಕೀಯ ವ್ಯವಸ್ಥೆ ಅಳವಡಿಸಿಕೊಂಡಿರುವ ಅಭಿವೃದ್ಧಿ ಮಾದರಿ ಇನ್ನು ಮುಂದಿನ ದಿನಗಳಲ್ಲಿ ಇನ್ನಷ್ಟು ಬಿರುಸಾಗಿ, ವ್ಯಾಪಕವಾಗಿ ಮತ್ತು ಬಹುಶಃ ಹೆಚ್ಚು ದಕ್ಷತೆಯಿಂದ ದೇಶದಲ್ಲಿ ಎಲ್ಲೆಡೆ ಕಾರ್ಯಗತಗೊಳಿಸಲಾಗುತ್ತದೆ. ಈ ಅಭಿವೃದ್ಧಿಯಿಂದಾಗಿ ಒಕ್ಕಲೆಬ್ಬಿಸಲ್ಪಟ್ಟವರು, ತಮ್ಮ ಸಾಂಪ್ರದಾಯಿಕ ಉದ್ಯೋಗಗಳನ್ನು ಮತ್ತು ಜೀವನೋಪಾಯಗಳನ್ನು ಕಳೆದುಕೊಂಡವರು ಕೊಳೇರಿ ವಾಸಿಗಳು ಮುಂತಾದ "ಅಂಚಿಗೆ ತಳ್ಳಲ್ಪಟ್ಟ" ಸಂತ್ರಸ್ತರ ಸಂಖ್ಯೆ ಇನ್ನಷ್ಟು ಹೆಚ್ಚಲಿದೆ. ಆದರೆ ಮೋದಿ ಸರಕಾರ ಇವರ ಪ್ರತಿರೋಧವನ್ನು ಸಹಿಸಿಕೊಳ್ಳುವುದಿಲ್ಲ. ಮುಸ್ಲಿಮರು ಮತ್ತು ಕ್ರೈಸ್ತರ ಬಗೆಗಷ್ಟೇ ಅಲ್ಲ ಕಾರ್ಮಿಕರು, ಬಡರೈತರು ಮತ್ತಿತರ ಅಂಚಿನಲ್ಲಿರುವವರ ಬಗೆಗೂ ಅಸಹನೆ ಮತ್ತು ದಮನಗಳ ಧೋರಣೆ ಮೋದಿ ಸರಕಾರದ ಸೈದ್ಧಾಂತಿಕ ತಳಹದಿಯೇ ಆಗಿದೆ. ಭಿನ್ನಮತವನ್ನು ಹತ್ತಿಕ್ಕುವುದು ಮೋದಿ ಪ್ರತಿಪಾದಿಸುವ ಅಭಿವೃದ್ಧಿ ಮಾದರಿಗೆ ಅನಿವಾರ್ಯವಾಗಿದೆ. ಎಡಪಕ್ಷಗಳು ಇನ್ನಾದರೂ ಇತರ ಪಕ್ಷಗಳ ಜೊತೆಗೆ ತಾವು ಕೂಡ ಎತ್ತಿ ಹಿಡಿಯುವ ಈ ಮಾದರಿಯನ್ನು ಪುನರ್ ವಿಮರ್ಶೆಗೆ ಒಳಪಡಿಸಬೇಕು. ೧೯೪೭ ರಿಂದ ಈಚೆಗೆ ಈ ಅಭಿವೃದ್ಧಿ ನಡೆಸಿದ ನರಹತ್ಯೆಯ ತಲೆಲೆಕ್ಕದಿಂದಲೇ ಈ ಪುನರ್‌ವಿಮರ್ಶೆ ಪ್ರಾರಂಭವಾಗಬೇಕು.

---

ಪಾಠ–೩

# ಮುಸ್ಲಿಂ ರಾಜಕಾರಣ: ಪ್ರತ್ಯೇಕತಾವಾದಿ ಮಾದರಿ ಬದಲಾಗಬೇಕು

**–ತುಫೈಲ್ ಅಹಮದ್**

**ಭಾರತೀಯ ಗಣತಂತ್ರವು ತನ್ನ ದೌರ್ಬಲ್ಯಗಳ ಮಧ್ಯದಿಂದ ಮೇಲೆದ್ದು ಒಂದು ಪ್ರಬುದ್ಧತೆಯನ್ನು ಅನ್ವೇಷಿಸುವ ಸಂದರ್ಭದಲ್ಲೇ ಮುಸ್ಲಿಮರು ತಮ್ಮನ್ನು ತಾವು ಅಲ್ಪಸಂಖ್ಯಾತರೆಂದು ಭಾವಿಸುವುದನ್ನು ಬಿಟ್ಟು ಆಧುನಿಕ ವಿದ್ಯಾಭ್ಯಾಸಕ್ಕೆ ತೆರೆದುಕೊಳ್ಳಬೇಕು. ಅವರು ಸ್ವಲ್ಪ ಮಟ್ಟಿಗೆ ಉನ್ನತ ವ್ಯಾಸಾಂಗಕ್ಕೆಳಸುತ್ತಿರುವುದು ನಿಜವಾದರೂ ಅದು ಮತ್ತೂ ಹೆಚ್ಚಾಗಬೇಕು, ಇತರ ಪ್ರಜೆಗಳ ಹಾಗೆ ಸಂಪ್ರದಾಯ ನಿಷ್ಠತೆಯನ್ನು ಕಡಿಮೆ ಮಾಡಿಕೊಂಡು ಮುಸ್ಲಿಂ ಮಹಿಳೆಯರೂ ಉದ್ಯೋಗ ಮಾಡುವುದಕ್ಕೆ, ರಾಜಕಾರಣದಲ್ಲಿ ಭಾಗವಹಿಸುವುದಕ್ಕೆ ಅವಕಾಶ ಮಾಡಿಕೊಡಬೇಕು. ಐತಿಹಾಸಿಕ ಪ್ರತ್ಯೇಕತಾವಾದವು ಇನ್ನೂ ಅಸ್ತಿತ್ವದಲ್ಲಿದೆ ಎಂಬುದನ್ನು ಮಾನ್ಯಮಾಡಿರುವುದೇ ಈ ಬಗೆಯ ಆಲೋಚನೆಗೆ ಕಾರಣವಾಗಿದೆ...**



**ಪ**ತ್ರಕರ್ತ ಎಂ.ಜೆ. ಅಕ್ಬರ್ ಭಾರತೀಯ ಜನತಾ ಪಕ್ಷಕ್ಕೆ ಸೇರ್ಪಡೆಗೊಂಡಿರುವುದನ್ನು ಒಂದು ರಾಜಕೀಯ ಅವಕಾಶವಾದವೆಂದು ತಳ್ಳಿಹಾಕಲಾಗುತ್ತಿದೆ. ಆದರೆ ಅವರ ಈ ನಡೆಯ ಎರಡು ಮುಖಗಳು ಭಾರತೀಯ ರಾಜಕಾರಣದ ಆರೋಗ್ಯಕ್ಕೆ ಪ್ರಸ್ತುತವಾದಂಥವು ಎಂಬುದನ್ನು ನಾವು ಗಮನಿಸಬೇಕು. ಮೊದಲನೆಯದು ಅಕ್ಬರ್ ಅವರ ರಾಜಕಾರಣದ ನೈತಿಕತೆ ಮತ್ತು ದೇಶದ ಪ್ರಜಾಸತ್ತಾತ್ಮಕ ರಾಜಕೀಯ ಚರ್ಚೆಯಲ್ಲಿ ಅಕ್ಬರ್ ಅವರ ನಡೆಯ ಬಾಳಿಕೆ. ಎರಡನೇಯದು; ಕಾರ್ಯತಃ ಮತ್ತು ಸಂಕೇತದ ಮಟ್ಟದಲ್ಲಿ ಭಾರತದಲ್ಲಿ ಮುಸ್ಲಿಂ ಬೌದ್ಧಿಕ ಚಿಂತನೆಗಳ ಮಾದರಿಗಳ ಬದಲಾವಣೆಯ ಅಗತ್ಯದ ಮೇಲೆ ಅಕ್ಬರ್ ಅವರ ತೀರ್ಮಾನದ ಪರಿಣಾಮ.

ಎರಡನೆಯ ಅಂಶವನ್ನು ನಾವು ಮೊದಲು ನೋಡೋಣ. ಭಾರತದಲ್ಲಿ ರಾಜಕಾರಣವು ಮುಸ್ಲಿಮರ ಹಿಂದುಳಿದಿರುವಿಕೆಗೆ ಕಾರಣವಾಗಿರುವ ಬೌದ್ಧಿಕ ಮಾದರಿಯಿಂದ ಅವರನ್ನು ಬಿಡುಗಡೆಗೊಳಿಸುವಲ್ಲಿ ಸೋಲು ಕಂಡಿದೆ. ಮುಸ್ಲಿಮರು ಈ ದೇಶದ ಮುಖ್ಯವಾಹಿನಿಯ ಜೊತೆ ಒಂದಾಗುವುದರಲ್ಲಿ ತಮ್ಮ ಭವಿಷ್ಯವನ್ನು ಕಾಣಲು ಅವರಿಗೆ ಸಹಾಯ ಮಾಡುವಂತಹ ಒಂದು ರಾಜಕಾರಣವನ್ನು ಗ್ರಹಿಸುವಲ್ಲಿ ಐತಿಹಾಸಿಕವಾಗಿ ಮುಸ್ಲಿಂ ನಾಯಕರು ಸೋತಿದ್ದಾರೆ. ಮುಸ್ಲಿಮರಲ್ಲಿ ವೈಜ್ಞಾನಿಕ ಮನೋಭಾವವನ್ನು ಬೆಳೆಸಲು ಶ್ರಮಿಸಿದ ಸರ್ ಸಯ್ಯದ್ ಅಹಮದ್ ಖಾನ್ ಅವರು ಮುಸ್ಲಿಂ ಸಮಾಜ ಸುಧಾರಕರ ನಡುವೆ ನಿಜಕ್ಕೂ ಅತ್ಯಂತ ಉನ್ನತ ವ್ಯಕ್ತಿ. ಆದರೆ ಭಾರತದ ಮುಸ್ಲಿಮರಿಗೆ ಬೇಕಾಗಿರುವ ಪ್ರಜಾಸತ್ತಾತ್ಮಕ



ರಾಜಕಾರಣದ ಅಗತ್ಯದ ಬಗ್ಗೆ ಬಹಳ ಆಳವಾಗಿ ಚಿಂತಿಸಿದವರು ಮಹಾರಾಷ್ಟ್ರ ಮೂಲದ ಮುಸ್ಲಿಂ ಸುಧಾರಕ ಚಿಂತಕರಾದ ಹಮೀದ್ ದಳವಾಯಿಯವರು.

ದಳವಾಯಿಯವರ ಪ್ರಕಾರ ಮುಸ್ಲಿಂ ನಾಯಕರು ಮುಸ್ಲಿಮರ ಮುನ್ನಡೆಯ ಎರಡು ಐತಿಹಾಸಿಕ ಅವಕಾಶಗಳನ್ನು ಕಳೆದುಕೊಂಡರು. ಮೊದಲನೆಯದು ಹಿಂದೂಗಳಿಗೆ ವಿರುದ್ಧವಾಗಿ ರೂಪುಗೊಂಡ ಸಯ್ಯದ್ ಅವರ ನೇತೃತ್ವದಲ್ಲಿನ ಮುಸ್ಲಿಮರ ಪುನರುಜ್ಜೀವನ ಚಳುವಳಿ. ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಹಿಂದೂಗಳೊಂದಿಗೆ' ಸಂಪೂರ್ಣವಾಗಿ ಜೊತೆಗೂಡುವಂತೆ ಮಾಡುವಲ್ಲಿ ಮುಸ್ಲಿಂ ನಾಯಕರು ಸೋಲು ಕಂಡದ್ದು ಎರಡನೆಯದು. ಎರಡೂ ಜನಾಂಗದವರು ಬ್ರಿಟಿಷರ ವಿರುದ್ಧ ಒಟ್ಟಾಗಿ ಹೋರಾಡಿದ ೧೮೫೭ರ ದಂಗೆಯ ನಂತರ ಮುಸ್ಲಿಂ ನಾಯಕರು ತಾರ್ಕಿಕವಾಗಿ ಹಿಂದೂಗಳ ಜೊತೆ ಸೇರಿ ಕೆಲಸ ಮಾಡಬೇಕಿತ್ತು. ಆದರೆ ಸಾಮರಸ್ಯಕ್ಕೆ ಪ್ರತಿಯಾಗಿ ಪ್ರತ್ಯೇಕತಾವಾದದ ರಾಜಕಾರಣವು ಹುಟ್ಟಿಕೊಂಡಿತು. ಪ್ರಸ್ತುತ ಮುಸ್ಲಿಂ ಬೌದ್ಧಿಕ ಮಾದರಿಯ ಬೇರುಗಳು ಇರುವುದೂ ಇಲ್ಲಿಯೇ. ಈ ಪ್ರತ್ಯೇಕತಾವಾದಕ್ಕೆ ಮೂರು ಕಾರಣಗಳನ್ನು ಗುರುತಿಸಬಹುದು: ೧೮೫೭ರ ದೆಹಲಿಯ ಸೋಲಿನ ನಂತರ ಮುಸ್ಲಿಮರಿಗೆ ತಾವು ಶಕ್ತಿಗುಂದಿದ ಅನುಭವವಾಯಿತು. ಹಾಗಾಗಿ ಅದನ್ನು ತಾವೇ ಸರಿಪಡಿಸಿಕೊಳ್ಳಲು ಅವರು ಮುಂದಾದರು. ಇಸ್ಲಾಮಿಕ್ ವೈಭವವು ರಾಜ್ಯಾಧಿಕಾರದ ಮೂಲಕ ಮಾತ್ರ ಬರಬಲ್ಲದು ಎಂಬ ಭಾವನೆಗೆ ಅಂಟಿಕೊಂಡದ್ದು ಎರಡನೇ ಕಾರಣ. ಎಲ್ಲಾ ವಿದೇಶಿ ಆಕ್ರಮಣಕಾರರು ಬಳಸುವ ತಂತ್ರವಾದ ಒಡೆದು ಆಳುವ ನೀತಿಯನ್ನು ಬ್ರಿಟಿಷರು ಅನುಸರಿಸಿದ್ದರಿಂದ ಹಿಂದೂ ಮುಸ್ಲಿಂ ಸಂಬಂಧವು ಘಾಸಿಗೊಂಡದ್ದು ಮೂರನೆಯ ಕಾರಣ.

ದಳವಾಯಿಯವರ ವಿಶ್ಲೇಷಣೆಯನ್ನು ವಿವರಿಸುವುದಾದರೆ, ಸ್ವಾತಂತ್ರ್ಯೋತ್ತರ ಅವಧಿಯಲ್ಲಿ ಐತಿಹಾಸಿಕ ಪ್ರತ್ಯೇಕತೆಯನ್ನು ಮುಂದುವರೆಸಿದ್ದು ಈ ರೀತಿಯಲ್ಲಿ: ಪ್ರತ್ಯೇಕತೆಯನ್ನು ಬಳಸಿಕೊಂಡು ವೋಟು ಪಡೆಯಲು ೧೯೬೦, ೧೯೭೦ ಮತ್ತು ೧೯೮೦ರ ದಶಕಗಳಲ್ಲಿ ಕಾಂಗ್ರೆಸ್ ಮತ್ತು ಆನಂತರ ಬಿಜೆಪಿ ಪ್ರಯತ್ನಿಸಿದವು. ಈಗ ಮುಸ್ಲಿಮರನ್ನು ಮುಖ್ಯವಾಹಿನಿಯಿಂದ ದೂರವಿಡಲು ಜಾತ್ಯತೀತತೆ ಎಂಬ ವಿಚಾರ ಸಂಚಯವೊಂದನ್ನು ಬಳಸಿಕೊಳ್ಳಲಾಗುತ್ತಿದೆ. ಮುಸ್ಲಿಮರು ತಮ್ಮ ಭಾವನಾತ್ಮಕ ಗೂಡಿನೊಳಗೆ ಹುದುಗಿರುವಂತೆ ನೋಡಿಕೊಳ್ಳಲು ಮೀಸಲಾತಿ ರಾಜಕಾರಣವನ್ನು ಚಾಲೂ ಮಾಡಲಾಗಿದೆ. ಸರ್ ಸಯ್ಯದ್‌ರು ದೀರ್ಘಕಾಲ ಬದುಕಿದ್ದರೆ, ದಳವಾಯಿಯವರು ೧೯೭೭ರಲ್ಲಿ ತಮ್ಮ ೪೪ನೆಯ ವಯಸ್ಸಿನಲ್ಲೇ ತೀರಿಕೊಂಡರು.

ದಳವಾಯಿ ಅವರು ಭಾರತದ ಪ್ರಜಾಸತ್ತೆಯ ಉತ್ಪನ್ನ. ಐತಿಹಾಸಿಕ ಪ್ರತ್ಯೇಕತೆಯನ್ನು ತೊಡೆದು ಹಾಕಲು ಅವರು ಕೊನೆಯವರೆಗೂ ಶ್ರಮಿಸಿದರು ಅಭಿವೃದ್ಧಿ ಹೊಂದುತ್ತಿರುವ ಒಂದು ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ತಮ್ಮನ್ನು ಅಲ್ಪ ಸಂಖ್ಯಾತರೆಂದು ನಡೆಸಿಕೊಳ್ಳುವುದರ ವಿರುದ್ಧ ವಾದಿಸಿದ ಅವರು, 'ಹಿಂದೂಗಳ ಜಾತ್ಯತೀತತೆಯು ಮುಸ್ಲಿಮರಲ್ಲಿ ಜಾತ್ಯತೀತ ವಿರೋಧಿ ಭಾವನೆಯನ್ನು ಉತ್ತೇಜಿಸುತ್ತದೆ' ಮತ್ತು 'ಅಲ್ಪಸಂಖ್ಯಾತರಿಗೂ ಸಮಾನ ಅವಕಾಶಗಳ ಹಕ್ಕು ದೊರೆಯಬೇಕು. ಆದರೆ ಅವರು ವಿಶೇಷ ಸ್ಥಾನಮಾನ ಅಥವಾ ಸವಲತ್ತುಗಳಿಗಾಗಿ ಒತ್ತಾಯಿಸಬಾರದು' ಎನ್ನುತ್ತಾ, ಮುಸ್ಲಿಮರು ಪರಿಪೂರ್ಣ ಪ್ರಜೆಗಳಾಗಿ ಅಭಿವೃದ್ಧಿ ಹೊಂದುವುದನ್ನು ಕಲ್ಪಿಸಿಕೊಂಡವರು ದಳವಾಯಿಯವರು. ಭಾರತೀಯ ಗಣತಂತ್ರವು ತನ್ನ ದೌರ್ಬಲ್ಯಗಳ ಮಧ್ಯದಿಂದ ಮೇಲೆದ್ದು ಒಂದು ಪ್ರಬುದ್ಧತೆಯನ್ನು ಅನ್ವೇಷಿಸುವ ಸಂದರ್ಭದಲ್ಲೇ ಮುಸ್ಲಿಮರು ತಮ್ಮನ್ನು ತಾವು ಅಲ್ಪಸಂಖ್ಯಾತರೆಂದು ಭಾವಿಸುವುದನ್ನು ಬಿಟ್ಟು ಆಧುನಿಕ ವಿದ್ಯಾಭ್ಯಾಸಕ್ಕೆ ತೆರೆದುಕೊಳ್ಳಬೇಕೆಂದು ಆಶಿಸುತ್ತದೆ. ಅವರು ಸ್ವಲ್ಪ ಮಟ್ಟಿಗೆ ಉನ್ನತ ವ್ಯಾಸಂಗಕ್ಕೆಳಸುತ್ತಿರುವುದು ನಿಜವಾದರೂ ಅದು ಮತ್ತೂ ಹೆಚ್ಚಾಗಬೇಕು, ಇತರ ಪ್ರಜೆಗಳ ಹಾಗೆ ಸಂಪ್ರದಾಯ ನಿಷ್ಠತೆಯನ್ನು ಕಡಿಮೆ ಮಾಡಿಕೊಂಡು ಮುಸ್ಲಿಂ ಮಹಿಳೆಯರೂ ಉದ್ಯೋಗ ಮಾಡುವುದಕ್ಕೆ, ರಾಜಕಾರಣದಲ್ಲಿ ಭಾಗವಹಿಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಭಾವಿಸುತ್ತದೆ. ಐತಿಹಾಸಿಕ ಪ್ರತ್ಯೇಕತಾವಾದವು ಇನ್ನೂ ಅಸ್ತಿತ್ವದಲ್ಲಿದೆ ಎಂಬುದನ್ನು ಮಾನ್ಯ ಮಾಡಿರುವುದೇ ಈ ಬಗೆಯ ಆಲೋಚನೆಗೆ ಕಾರಣವಾಗಿದೆ.





**ಸಯ್ಯದ್ ಅಹಮದ್ ಖಾನ್ ಹಮೀದ್ ದಳವಾಯಿ ಇಮಾಮ್ ಬುಖಾರಿ**

ಇನ್ನು ಈ ಲೇಖನದ ಪ್ರಾರಂಭದಲ್ಲಿ ಎತ್ತಿದ ಅಕ್ಬರ್ ಅವರ ರಾಜಕೀಯ ಆಯ್ಕೆಯ ಬಾಳಿಕೆಯ ಪ್ರಶ್ನೆಯನ್ನು ನೋಡೋಣ. ಬಿ.ಜೆ.ಪಿ ಸರ್ಕಾರ ರಚನೆಯಾದರೆ ತಮಗೆ ದೊರೆಯಬಹುದಾದ ಪಾರ್ಲಿಮೆಂಟ್ ಸದಸ್ಯತ್ವದ ಮೇಲೆ ಅವರು ದೃಷ್ಟಿ ನೆಟ್ಟಿದ್ದಾರೆ ಎಂಬೊಂದು ಟೀಕೆಯಿದೆ. ೧೯೮೯ರಲ್ಲಿ ಕಾಂಗ್ರೆಸ್ ಸೋತು ಸುಣ್ಣವಾಗಿದ್ದು, ಗೆಲ್ಲುವ ವಿಶ್ವಾಸವೇ ಇಲ್ಲದಿದ್ದಾಗ ಆ ಪಕ್ಷವನ್ನು ಸೇರಿದ ಅಕ್ಬರ್ ಅವರನ್ನು ಒಬ್ಬ ಅವಕಾಶವಾದಿಯೆಂದು ಹೇಗೆ ತಾನೆ ಕರೆಯಲಾದೀತು? ಭಾರತದ ರಾಜಕಾರಣದಲ್ಲಿ ಯಾವುದೇ ಸಮಯದಲ್ಲೂ ರಾಜಕಾರಣಿಗಳು ಅಧಿಕಾರಕ್ಕಾಗಿ ಪಕ್ಷ ಬದಲಾಯಿಸುವುದು ತೀರಾ ಸಾಮಾನ್ಯ. ತಾತ್ವಿಕವಾಗಿ ವಿರೋಧಿಗಳಾದ ಬಿ.ಜೆ.ಪಿ, ಕಾಂಗ್ರೆಸ್ ಮತ್ತು ಸಿ.ಪಿ.ಎಂ. ಗಳು ೨೦೧೯ರಲ್ಲಿ ಸಿಕ್ಕಿಂನಲ್ಲಿ ಹೊಂದಾಣಿಕೆ ಮಾಡಿಕೊಂಡದ್ದುಂಟು (ನಂತರದಲ್ಲಿ ಅದು ಮುಗ್ಗರಿಸಿದ್ದು ಬೇರೆ ಮಾತು.) ರಾಜಕಾರಣವೆಂಬುದು ಸಾಧ್ಯತೆಗಳ ಒಂದು ಕಲೆಯಾಗಿದ್ದು, ಅಕ್ಬರ್ ತಮಗೇನು ಸಾಧ್ಯವೋ ಅದನ್ನು ಮಾಡಿದ್ದಾರೆ. ಭಾರತದ ರಾಜಕಾರಣದ ತುಡಿತ ಯಾವ ಬಗೆಯದ್ದೆಂದರೆ, ಇಲ್ಲಿ ಒಂದೇ ಕುಟುಂಬದ ಸದಸ್ಯರು ತಾತ್ವಿಕವಾಗಿ ವಿರುದ್ಧ ನೆಲೆಯ ಎರಡು ಬೇರೆ ಬೇರೆ ಪಕ್ಷಗಳಿಂದ ಚುನಾವಣೆಗೆ ಸ್ಪರ್ಧಿಸುವುದು ಸಾಧ್ಯ. ರಾಜಕಾರಣವು ಭವಿಷ್ಯದ ಆಯ್ಕೆಗೆ ಸಂಬಂಧಿಸಿದ್ದು, ಭೂತದ ಆಯ್ಕೆಗೆ ಸಂಬಂಧಿಸಿಲ್ಲ. ಆದ್ದರಿಂದ ಇದೊಂದು ಒಳ್ಳೆಯ ಪಾಠ.

ಪುಣೆಯಲ್ಲಿ ನೆಲೆಸಿರುವ ನಾಟಕಕಾರ ಸಮೀರ್ ಖಾನ್‌ರ ಪ್ರಕಾರ ಅಕ್ಬರ್ ಅವರ ನಡವಳಿಕೆಯಿಂದ 'ಭಾರತೀಯ ಮುಸ್ಲಿಮರ ಮೇಲೆ ಯಾವ ರೀತಿಯ ಪರಿಣಾಮವೂ ಆಗುವುದಿಲ್ಲ'. ಇಮಾಮ್ ಬುಖಾರಿ, ನಜ್ಮಾ ಹೆಪ್ತುಲ್ಲಾ ಮತ್ತು ಇತರರು ಹಿಂದೆ ಇದೇ ರೀತಿ ವರ್ತಿಸಿದ್ದಾರೆ. ಭಾರತೀಯ ಮುಸ್ಲಿಮರು ಯಾವಾಗಲೂ ಧರ್ಮನಿರಪೇಕ್ಷ ಹಿಂದೂ ಪಕ್ಷಗಳಿಗೆ ವೋಟು ಹಾಕಿದ್ದಾರೆಯೇ ಹೊರತು ಮುಸ್ಲಿಂ ಪಕ್ಷಗಳಿಗಲ್ಲ. ಈ ಧೋರಣೆಯೇ ಮುಂದುವರೆಯುತ್ತದೆ ಎಂಬುದಾಗಿ ಸಮೀರ್ ಖಾನ್ ನುಡಿಯುತ್ತಾರೆ. ಈ ವಾದವು ಸಮಂಜಸವಾದುದೇನೋ ಸರಿ. ಆದರೆ ಮುಸ್ಲಿಮರು ತಮ್ಮ ಸಾಮೂಹಿಕ ಬೌದ್ಧಿಕ ಮಾದರಿಯನ್ನು ಒಡೆದು ಹೊರಬರಲು ಅಡ್ಡಿಯಾಗಿರುವ ಐತಿಹಾಸಿಕ ಪ್ರತ್ಯೇಕತಾವಾದವನ್ನು ಇದು ಪೋಷಿಸುತ್ತದೆ. ಇಲ್ಲಿ ಮತ್ತೂ ಒಂದು ಆತಂಕ ಇದೆ: ಮುಸ್ಲಿಮರು ಒಂದು ಪಕ್ಷವನ್ನು ಸೇರಿ ಅದರ ನಡವಳಿಕೆಯನ್ನು ತಿದ್ದುವುದಕ್ಕೆ ಪ್ರತಿಯಾಗಿ ಆ ಪಕ್ಷವನ್ನೇ ದೂರವಿಟ್ಟುಬಿಟ್ಟರೆ, ಅವರು ಮತ್ತಷ್ಟು ಪರಕೀಯರಾಗಿ ಬಿಡುತ್ತಾರೆ. ಒಂದು ಪಕ್ಷಕ್ಕೆ ದೇಶವ್ಯಾಪಿ ಅಸ್ತಿತ್ವ ಇದ್ದಾಗ ಈ ಪರಿಣಾಮ ಮತ್ತಷ್ಟು ತೀವ್ರವಾಗುತ್ತದೆ. ಮುಸ್ಲಿಮರು ಎಲ್ಲಾ ಪಕ್ಷಗಳಲ್ಲೂ ಬೆರೆಯಬೇಕು ಎಂಬ ಸಂದೇಶವನ್ನು ಅಕ್ಬರ್ ಅವರ ರಾಜಕೀಯ ಆಯ್ಕೆಯು ರವಾನಿಸುತ್ತದೆ.

ಜಾತ್ಯಾತೀತ ಪಕ್ಷಗಳ ನಾಯಕರ ನಿರ್ಮಾನವೀಕರಣದ (Dehumanizining) ರಾಜಕಾರಣವನ್ನು ಭಾರತೀಯ ಮುಸ್ಲಿಮರು ಅರ್ಥ ಮಾಡಿಕೊಳ್ಳಬೇಕು. ವಿಶೇಷವಾಗಿ ಸೋನಿಯಾ ಗಾಂಧಿಯವರು ಇಮಾಮ್ ಬುಖಾರಿಯವರಂತಹ ಮೂಲಭೂತವಾದಿ ಧರ್ಮಗುರುಗಳನ್ನು ಆಶ್ರಯಿಸುವುದನ್ನು ಗಮನಿಸಬೇಕು. ಬುಖಾರಿಯಂತಹವರಿಂದ ಮುಸ್ಲಿಮರಿಗೆ ಯಾವ ಭವಿಷ್ಯವೂ ಇಲ್ಲ. ಗಲಭೆಗಳಂತೂ ಭಾರತೀಯ ಪ್ರಜಾಪ್ರಭುತ್ವದ ಒಂದು ಭಾಗವೇ ಆಗಿದ್ದು ಇಲ್ಲಿನ ರಾಜಕೀಯ ವ್ಯವಸ್ಥೆಯಲ್ಲಿ ಮೂಡಬಹುದಾದ ಹೊಸ ಪ್ರಬುದ್ಧತೆ ಮಾತ್ರವೇ ಇದನ್ನು ನಿವಾರಿಸಬಲ್ಲದು. ಇದು ಸಾಧ್ಯವಾಗುವುದು, ಕಾನೂನಿನ ಆಡಳಿತ ಮತ್ತು ಅಭಿವೃದ್ಧಿಗಳನ್ನಾಧರಿಸಿದ ಒಂದು ರಾಷ್ಟ್ರೀಯ ಕಾರ್ಯನೀತಿ ಈ ಪರಿಭಾಷೆಯಲ್ಲಿ ಮಾತನಾಡಬೇಕು: 'ಭಾರತದ ಸಂವಿಧಾನವೇ ನಿಜವಾದ ಧರ್ಮ; ಮುನ್ನಡೆ ಎಂದರೆ ನೂರು ಚೆಂದದ ನಗರಗಳನ್ನು (Smart Cities) ನಿರ್ಮಿಸುವುದು ಆವೃತ ಅಭಿವೃದ್ಧಿಯನ್ನು(Inclusive growth) ಪ್ರೇರೇಪಿಸಬಲ್ಲದು; ಪ್ರಗತಿ ಎಂದರೆ ಶೌಚಾಲಯಗಳನ್ನು

ನಿರ್ಮಿಸುವುದು;ಗುಡಿಗಳನ್ನು ಕಟ್ಟುವುದಲ್ಲ.-ಬಿಜೆ.ಪಿ.ಯ ನರೇಂದ್ರ ಮೋದಿಯವರ ಒಂದು ದಿಟ್ಟ ಹೇಳಿಕೆಯಿದು.

ಐತಿಹಾಸಿಕ ಪ್ರತ್ಯೇಕತಾವಾದಕ್ಕೆ ಪೆಟ್ಟು ನೀಡುವುದರಲ್ಲಿ ಭಾರೀ ಪರಿಣಾಮಕಾರಿಯಲ್ಲದಿದ್ದರೂ, ಒಂದು ಮಹತ್ವದ ಪಾತ್ರವನ್ನಂತೂ ಅಕ್ಬರ್ ಅವರು ವಹಿಸಿರಬಹುದು. ಅವರು ತೆಗಳಿಕೆಗೆ ಒಳಗಾಗುತ್ತಿರುವುದೂ ಕೂಡ ಈ ಕಾರಣಕ್ಕಾಗಿಯೇ. ಆಸಕ್ತಿಯ ವಿಚಾರವೆಂದರೆ, ತಾವು ಬಿ.ಜೆ.ಪಿಯನ್ನು ಸೇರಿದ್ದೇಕೆ ಎಂಬುದನ್ನು ತಿಳಿಸುವ ತಮ್ಮ ಲೇಖನದಲ್ಲಿ, ಪಾಟ್ನಾದಲ್ಲಿ ಬಾಂಬ್ ಸ್ಫೋಟದ ನಂತರ ಮೋದಿ ಮಾಡಿದ ಭಾಷಣವನ್ನು ಉದಾಹರಿಸುವ ಮೂಲಕ ಐತಿಹಾಸಿಕ ಪ್ರತ್ಯೇಕತಾವಾದದ ಸಮಸ್ಯೆಯನ್ನು ಅಕ್ಬರ್ ವಿವರಿಸುತ್ತಾರೆ "ಹಿಂದೂ ಮತ್ತು ಮುಸ್ಲಿಮರಿಬ್ಬರಿಗೂ ಮೋದಿ ಅವರು ಆ ಕ್ಷಣದಲ್ಲಿ ಕೇಳಿದ ಪ್ರಶ್ನೆ, ದೇಶದ ಎದುರು ಈಗ ಇರುವ ಸಮಸ್ಯೆಯ ಮೂಲವನ್ನು ತಟ್ಟಿತು. ಆ ಪ್ರಶ್ನೆಯಲ್ಲಿ ಸಮಸ್ಯೆಯ ಪರಿಹಾರವೂ ಕೂಡ ಅಡಕವಾಗಿತ್ತು. ಎರಡೂ ಸಮುದಾಯಗಳ ಎದುರು ಮೋದಿ ಒಂದು ಆಯ್ಕೆಯನ್ನು ಇರಿಸಿದರು, ಎರಡೂ ಸಮುದಾಯಗಳೂ ಹೀಗೆ ಹೊಡೆದಾಡುತ್ತಲೇ ಇರಬಹುದು ಅಥವಾ ಇಬ್ಬರೂ ಒಂದಾಗಿ ದಾರಿದ್ರ್ಯವೆಂಬ ಅಪಮಾನಕರವಾದ ಶಾಪದ ವಿರುದ್ಧ ಹೋರಾಡಬಹುದು ಎಂಬುದೇ ಆ ಆಯ್ಕೆ."

(ಕನ್ನಡಕ್ಕೆ: ಎಂ. ರಾಜು)

(ಕೃಪೆ: *ದ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್*, ಏಪ್ರಿಲ್,೮, ೨೦೧೪)

*(ತುಫೈಲ್ ಅಹಮದ್ ಅವರು ವಾಷಿಂಗ್‌ಟನ್ ಡಿ..ಸಿ..ಯಲ್ಲಿರುವ ಮಧ್ಯ ಪ್ರಾಚ್ಯ ಮಾಧ್ಯಮ ಸಂಶೋಧನಾ ಸಂಸ್ಥೆಯಲ್ಲಿನ ದ. ಏಷ್ಯಾ ಅಧ್ಯಯನ ಯೋಜನೆಯ ನಿರ್ದೇಶಕರಾಗಿದ್ದಾರೆ.)*

# ಆಂ ಆದ್ಮಿ ಪಕ್ಷ : ಮುಂದೇನು?

ಪಾಠ-೪



ನಮ್ಮ ನಿರೀಕ್ಷೆಗೆ ವಿರುದ್ಧವಾಗಿ ಆಂ ಆದ್ಮಿ ಪಕ್ಷ ಕೂಡ ಚುನಾವಣಾ ಸೋಲಿನಿಂದ ತತ್ತರಿಸಿಹೋಗಿದೆ! ಅದರ ಕೆಲವು ಸ್ಥಾಪಕ ಸದಸ್ಯರು ರಾಜೀನಾಮೆ ನೀಡಿ ಹೊರ ನಡೆದಿದ್ದಾರೆ. ಪಕ್ಷದ ಒಂದು ಆಧಾರ ಸ್ತಂಭದಂತಿದ್ದ ಯೋಗೇಂದ್ರ ಯಾದವ್‌ರೇ ಪಕ್ಷದ ಅಗ್ರ ನಾಯಕ ಅರವಿಂದ ಕೇಜ್ರಿವಾಲ್‌ರ ಕಾರ್ಯವೈಖರಿಯ ವಿರುದ್ಧ ದನಿ ಎತ್ತಿದ್ದಾರೆ. ಪಕ್ಷದಲ್ಲಿ ಪತ್ರ ಸಮರವೇ ನಡೆದು ಹೋಗಿದೆ. ಈಗ ಸಂಧಾನಗಳು ನಡೆದು ಎಲ್ಲ ಸರಿಹೋಗಿದೆ' ಎಂದು ಸಾರ್ವಜನಿಕವಾಗಿ ಹೇಳಲಾಗುತ್ತಿದೆಯಾದರೂ, ಪಕ್ಷವೀಗ ಅದರ ಅಭಿಮಾನಿಗಳಲ್ಲಿ ಚುನಾವಣೆಗಳಿಗೆ ಮುನ್ನ ಇದ್ದ ಸ್ಫೂರ್ತಿಯನ್ನು ಈಗ ಹುಟ್ಟಿಸುತ್ತಿಲ್ಲವೆಂಬುದಂತೂ ನಿಜ.

ಹಾಗೆ ನೋಡಿದರೆ ಆಂ ಆದ್ಮಿ ಪಕ್ಷದಿಂದ ಅದರ ಅಭಿಮಾನಿಗಳೂ ಸೇರಿದಂತೆ ಯಾರೂ ದೊಡ್ಡ ವಿಜಯವನ್ನು ನಿರೀಕ್ಷಿಸಿರಲಿಲ್ಲ ಮತ್ತು ಅದರ ಸದ್ಯದ ಚುನಾವಣಾ ಸಾಧನೆಯನ್ನು ಸೋಲು ಎಂದೂ ಪರಿಗಣಿಸುವುದಿಲ್ಲ. ಹೆಚ್ಚೆಂದರೆ ದೆಹಲಿ ಸೇರಿದಂತೆ ಅದರಿಂದ ಹತ್ತು-ಹನ್ನೆರಡು ಸ್ಥಾನಗಳನ್ನು ನಿರೀಕ್ಷಿಸಲಾಗಿತ್ತು. ಅದು ಸಾಧ್ಯವಾಗಿಲ್ಲದಿದ್ದರೆ, ಅದಕ್ಕೆ ಏಕೈಕ ಕಾರಣ, ಚುನಾಣೆಗೆ ಮುನ್ನ ಪಕ್ಷ ತನ್ನ ಮೈಮರೆವಿನಲ್ಲಿ ದೆಹಲಿಯಲ್ಲಿ ನಡೆಸಿದ ಸ್ವಯಂಕೃತಾಪರಾಧ. ಅದರ ಹೊರತಾಗಿ, ಮೋದಿ ಬಿರುಗಾಳಿ ಎಲ್ಲ ದೊಡ್ಡ ಪಕ್ಷಗಳನ್ನೂ ಗುಡಿಸಿಕೊಂಡು ಹೋದ ಪರಿಣಾಮದಿಂದ ಈ ಪುಟ್ಟ ಪಕ್ಷವೂ ಹೊರತಾಗಿಲ್ಲ ಎಂದು ಹೇಳಬಹುದಷ್ಟೆ. ಆದರೂ ದೆಹಲಿಯಲ್ಲಾದ ನಿರಾಶೆಯನ್ನು ಪಂಜಾಬ್ ನಾಲ್ಕು ಸ್ಥಾನಗಳನ್ನು ಗೆದ್ದುಕೊಟ್ಟು ತುಂಬಿಕೊಟ್ಟಿದೆಯಲ್ಲಾ?

ಮುಖ್ಯ ವಿಷಯ ಅದಲ್ಲ. ಈವರೆಗೆ ಬರೀ ಹೊರಗೇ ನೋಡಿ ಟೀಕೆ-ವ್ಯಾಖ್ಯಾನಗಳನ್ನು ಮಾಡುತ್ತಿದ್ದ ಪಕ್ಷ ಈಗಲಾದರೂ ತನ್ನ ಒಳಗನ್ನೊಮ್ಮೆ ನೋಡಿಕೊಳ್ಳಲು ಸಿದ್ಧವಾಗಿದೆಯೇ ಎಂಬುದು. ಕೇಜ್ರಿವಾಲ್ ಪಕ್ಷದ ಸಾಂಸ್ಥಿಕ ಮತ್ತು ತಾತ್ವಿಕ ತಳಪಾಯದ ಬಗ್ಗೆ ಭಾವನಾತ್ಮಕವಾಗಿ ಉಡಾಫೆಯಿಂದ ಮಾತನಾಡುವುದನ್ನು ನಿಲ್ಲಿಸಿ, ಗಂಭೀರವಾಗಿ ಪಕ್ಷ ಕಟ್ಟುವ ಕೆಲಸದಲ್ಲಿ ತೊಡಗುವರೇ ಎಂಬುದು. ಈ ಸಂಬಂಧವಾಗಿ ಯೋಗೇಂದ್ರ ಯಾದವ್ ಎತ್ತಿರುವ ಪ್ರಶ್ನೆಗಳನ್ನು ಪೃಥ್ವಿರೆಡ್ಡಿ ಸಮಿತಿಯನ್ನು ರಚಿಸುವ ಮೂಲಕ ಔಪಚಾರಿಕವಾಗಿ ಮಾತ್ರ ಸ್ವೀಕರಿಸದೆ, ರಾಷ್ಟ್ರಾದ್ಯಂತ ಆಂ ಆದ್ಮಿಗಳ ಮುಖಾಮುಖಿಯೊಂದಿಗೆ ಆಂ ಆದ್ಮಿ ಪಕ್ಷವನ್ನು ಕಟ್ಟುವಲ್ಲಿ ತೊಡಗುವರೇ ಎಂಬುದು. ಅರ್ಜಿ ಹಾಕಿದ ಆಂ ಆದ್ಮಿಗಳಿಗೆ ಚುನಾವಣಾ ಟಿಕೆಟ್ ಕೊಟ್ಟಾಕ್ಷಣ ಅದು ಆಂ ಆದ್ಮಿಗಳ ಪಕ್ಷವೆನಿಸುವುದಿಲ್ಲ.

ಆಪ್‌ನಲ್ಲಿ ಜನ ಇನ್ನೂ ಭರವಸೆ ಕಳೆದುಕೊಂಡಿಲ್ಲ. ವಿಶೇಷವಾಗಿ, ಬಲಪಂಥೀಯ ಪಕ್ಷವೊಂದು ಹಿಂದೂ ರಾಷ್ಟ್ರೀಯವಾದದ ಹೆಸರಿನಲ್ಲಿ, ಹೆಚ್ಚೂಕಡಿಮೆ ಇತರೆಲ್ಲ ವರ್ಗಗಳ ದೊಡ್ಡ ಪಕ್ಷಗಳನ್ನು ಗುಡಿಸಿಹಾಕಿ ಅತಿ ವಿಶ್ವಾಸ ಬಲದೊಂದಿಗೆ ಅಧಿಕಾರಕ್ಕೆ ಬಂದಿರುವ ಸಂದರ್ಭದಲ್ಲಿ, ಅದರೆದುರಲ್ಲಿ ರಾಷ್ಟ್ರ ರಾಜಕಾರಣದಲ್ಲಿ ಗಟ್ಟಿಯಾದ ಪರ್ಯಾಯ ರಾಜಕೀಯ ಚಿಂತನೆಯುಳ್ಳ ಪಕ್ಷವೊಂದರ ಜಾಗ ಖಾಲಿ ಇದೆ. ಆ ಜಾಗವನ್ನು ತುಂಬಬಲ್ಲ ಸಾಮರ್ಥ್ಯವನ್ನು ಆಪ್ ಪ್ರದರ್ಶಿಸಬಲ್ಲುದೇ ಎಂಬುದೇ ನಿಜವಾದ ಪ್ರಶ್ನೆ. ಈ ಸಂಬಂಧವಾಗಿ ಪತ್ರಿಕೆ ಕೇಜ್ರಿವಾಲರನ್ನು ಐದು ಪ್ರಶ್ನೆಗಳನ್ನು ಕೇಳಿತ್ತು. ಆದರೆ ಅವರು ಉತ್ತರಿಸುವ ಗೋಜಿಗೆ ಹೋಗಿಲ್ಲ. ಬಹುಶಃ ದೆಹಲಿಯಲ್ಲಿ ಮತ್ತೆ ಸರ್ಕಾರ ರಚಿಸಲು ಅವರು ಕಾಂಗ್ರೆಸ್ಸಿನೊಂದಿಗೆ ರಾಜಿ ಕಬೂಲಿ ನಡೆಸುವುದರಲ್ಲಿ ವ್ಯಸ್ತರಾಗಿರಬಹುದು. ಆದರೆ ಪಕ್ಷದ ರಾಜ್ಯ ನಾಯಕರಲ್ಲೊಬ್ಬರಾದ ಗೆಳೆಯ ರವಿ ಕೃಷ್ಣಾ ರೆಡ್ಡಿಯರು ನಮ್ಮ ಕೆಲವು ಪ್ರಶ್ನೆಗಳಿಗೆ ಇಲ್ಲಿ ಉತ್ತರಿಸಿದ್ದಾರೆ:-ಸಂಪಾದಕ

**೧. ಕಳೆದ ಲೋಕಸಭಾ ಚುನಾವಣೆಯಲ್ಲಿ ಕರ್ನಾಟಕದಲ್ಲಿ ಆಮ್ ಆದ್ಮಿ ಪಕ್ಷದಿಂದ ಅದರ ಬೆಂಬಲಿಗರು ಮತ್ತು ಅಭಿಮಾನಿಗಳು ದೊಡ್ಡ ಸಾಧನೆಯೇನನ್ನೂ ನಿರೀಕ್ಷಿಸಿರದಿದ್ದರೂ, ಈ ಪ್ರಮಾಣದ ಸೋಲನ್ನಂತೂ ನಿರೀಕ್ಷಿಸಿರಲಿಲ್ಲ. ಇದಕ್ಕೆ ನೀವು ಮೂರು ಮುಖ್ಯ ಕಾರಣಗಳೆಂದು ಯಾವಾವುದನ್ನು ಗುರುತಿಸುವಿರಿ?**

ಈ ಚುನಾವಣೆಯಲ್ಲಿ ನಮ್ಮಿಂದ ಕೇವಲ ಪ್ರಜ್ಞಾವಂತ, ನಗರದ, ಮತ್ತು ಅದರಲ್ಲೂ ಮಧ್ಯಮವರ್ಗದ ಜನರನ್ನು ಮಾತ್ರ ಮುಟ್ಟಲು ಸಾಧ್ಯವಾಯಿತು. ಅದರಲ್ಲೂ, ತಮ್ಮ ಸ್ವಂತ ಅಭಿಪ್ರಾಯ ರೂಪಿಸಿಕೊಂಡು ಅದಕ್ಕೆ ಬದ್ಧರಾಗಿರುವವರು ಮಾತ್ರ ನಮಗೆ ಮತ ನೀಡಿದರು. ಬೆಂಗಳೂರಿನ ಕೆಲವು ಭಾಗಗಳಲ್ಲಿ ಬಿಟ್ಟರೆ ಇಡೀ ರಾಜ್ಯದಲ್ಲಿ ಬೇರೆಲ್ಲಿಯೂ ಮತದಾನದ ದಿನ ಮತಗಟ್ಟೆಯ ಬಳಿ ನಮ್ಮ ಕಾರ್ಯಕರ್ತರು ಇರಲಿಲ್ಲ. ಹಾಗಾಗಿ, ನಮಗೆ ಮತ ಹಾಕಲೇ ಬೇಕು ಎಂದು ಪೂರ್ವನಿರ್ಧಾರ ಮಾಡಿ ಬಂದ ಜನ ಮಾತ್ರ ನಮಗೆ ಮತ ನೀಡಿದ್ದಾರೆ.

ಇದೇ ಸಂದರ್ಭದಲ್ಲಿ ಕರ್ನಾಟಕದಲ್ಲಿ ನಮ್ಮ ಪಕ್ಷ ಚುನಾವಣೆಯವರೆಗೂ ಹೇಳಿಕೊಳ್ಳುವಂತಹ ರಾಜಕೀಯ ಚಳವಳಿ ಮತ್ತು ಹೋರಾಟಗಳನ್ನು ರೂಪಿಸಲಾಗಿರಲಿಲ್ಲ. ಹೀಗಾಗಿ ಜನರಿಗೆ ಪರಿಚಿತರಾಗಿರುವ ಸ್ಥಳೀಯ ನಾಯಕತ್ವ ಹೊರಹೊಮ್ಮಲಿಲ್ಲ. ಉತ್ತಮ ಅಭ್ಯರ್ಥಿಗಳಿದ್ದರೂ, ಕರ್ನಾಟಕದ ಈಗಿನ ವಾಸ್ತವ ಇಂತಹ ಪ್ರಯತ್ನಗಳಿಗೆ ಆಶಾದಾಯಕವಾಗಿಲ್ಲ ಎನ್ನುವುದೂ ನಿಜವೇ.



ಇನ್ನೊಂದು ಕಾರಣವೆಂದರೆ, ಚುನಾವಣೆಯ ಸಂದರ್ಭದಲ್ಲಿ ಪರಾಂಪರಾನುಗತ ಪಕ್ಷಗಳು ನಡೆಸುವ ಅಕ್ರಮಗಳಿಗೆ ಚುನಾವಣಾ ಆಯೋಗ ಕಡಿವಾಣ ಹಾಕಲಾಗದೇ ಹೋಗಿರುವುದು. ನಮ್ಮ ಪಕ್ಷದ ಬಹುತೇಕ ಅಭ್ಯರ್ಥಿಗಳು ಚುನಾವಣಾ ಆಯೋಗ ನಿಗದಿಪಡಿಸಿರುವ ವೆಚ್ಚದ ಶೇ. ಹತ್ತಕ್ಕಿಂತ ಹೆಚ್ಚು ಖರ್ಚು ಮಾಡಿಲ್ಲ. ಆದರೆ ಕರ್ನಾಟಕದ ಪ್ರಮುಖ ಪಕ್ಷಗಳ ಬಹುತೇಕ ಅಭ್ಯರ್ಥಿಗಳ ಆ ಮಿತಿಯ ಐವತ್ತರಿಂದ ನೂರು ಪಟ್ಟು ಖರ್ಚು ಮಾಡಿದ್ದಾರೆ ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ. ಒಂದು ಚುನಾವಣೆಯನ್ನು ಸಶಕ್ತವಾಗಿ ಎದುರಿಸಲು ಬೇಕಾದಷ್ಟು ಸಂಪನ್ಮೂಲಗಳನ್ನು

ಕ್ರೋಢೀಕರಿಸುವಲ್ಲಿ ನಾವು ವಿಫಲರಾದೆವು ಮತ್ತು ಬೇರೆ ಪಕ್ಷಗಳ ಅಕ್ರಮಗಳನ್ನು ನಿಯಂತ್ರಿಸಲು ಆಯೋಗವೂ ವಿಫಲವಾಯಿತು.

**೨. ಪಕ್ಷದ ಹೆಸರು ಆಮ್ ಆದ್ಮಿ ಎಂದಿದ್ದರೂ, ಕನಿಷ್ಟ ಕರ್ನಾಟಕದಲ್ಲಿ ಈ ಪಕ್ಷ ಜನಸಾಮಾನ್ಯರ ಪಕ್ಷವಾಗಿರಲಿಲ್ಲ ಎಂಬ ಸಾಮಾನ್ಯ ಅಭಿಪ್ರಾಯ ಪ್ರಚಲಿತದಲ್ಲಿದೆ. ಇದನ್ನು ನೀವು ಒಪ್ಪುವಿರಾ? ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು?**

ರಾಜ್ಯದಲ್ಲಿ ನಮ್ಮ ಪಕ್ಷ ಇನ್ನೂ ಎಲ್ಲ ಜನಸಮುದಾಯಗಳ, ವರ್ಗಗಳ ಪಕ್ಷವಾಗಿ ಹೊರಹೊಮ್ಮಿಲ್ಲ ಎನ್ನುವುದು ನಿಜವಾದರೂ, ಇದು ಜನಸಾಮಾನ್ಯರ ಪಕ್ಷ ಅಲ್ಲ ಎನ್ನುವುದು ಸರಿಯಲ್ಲ. ಇಂದು ಯಾವುದೇ ಜನಸಾಮಾನ್ಯ ತನ್ನ ಹಣ/ಮನೆತನ/ಜಾತಿ/ಪ್ರಭಾವ ಇತ್ಯಾದಿ ಹಿನ್ನೆಲೆಗಳನ್ನು ಮೀರಿ ರಾಜಕೀಯ ಪಕ್ಷವೊಂದನ್ನು ಸೇರಬಹುದಾಗಿದ್ದರೆ ಅದು ಆಮ್ ಆದ್ಮಿ ಪಕ್ಷ ಮಾತ್ರ. ಇಲ್ಲಿ ಭ್ರಷ್ಟರಿಗೆ, ಕುಟುಂಬ ರಾಜಕಾರಣ ಮಾಡಬೇಕೆನ್ನುವವರಿಗೆ ಸ್ಥಾನವಿಲ್ಲ. ಅವರನ್ನು ಹೊರತುಪಡಿಸಿ ಸಮಾಜದ ಎಲ್ಲಾ ವರ್ಗದವರಿಗೂ ನಮ್ಮಲ್ಲಿ ಸ್ಥಾನವಿದೆ. ಈ ಬಾರಿಯ ನಮ್ಮ ಅಭ್ಯರ್ಥಿಗಳನ್ನೇ ಗಮನಿಸುವುದಾದರೆ, ರೈತ, ಗ್ರಾಮ ಪಂಚಾಯಿತಿ ಸದಸ್ಯ, ಕವಿ, ಪತ್ರಕರ್ತ, ಶಿಕ್ಷಕ, ಉದ್ಯಮಿ, ಮಾಜಿ ಪೋಲಿಸ್ ಅಧಿಕಾರಿ, ಜನಪರ ಹೋರಾಟಗಾರ, ಮಾನವ ಹಕ್ಕುಗಳ ಹೋರಾಟಗಾರ, ಕಣ್ಣಿನ ಅಂಧತೆ ಇದ್ದವರು, ಇಂಜಿನಿಯರ್, ಹೀಗೆ ಸಮಾಜದ ಎಲ್ಲಾ ವರ್ಗಗಳನ್ನು ಪ್ರತಿನಿಧಿಸುವವರೇ ಇದ್ದದ್ದು. ಇಷ್ಟೊಂದು ವೈವಿಧ್ಯತೆ, ಗುಣಮಟ್ಟ, ಪ್ರಾತಿನಿಧಿಕತೆ ಕರ್ನಾಟಕದ ಇನ್ನಾವುದೇ ಪಕ್ಷದ ಅಭ್ಯರ್ಥಿಗಳ ಪಟ್ಟಿಯಲ್ಲಿ ಇರಲಿಲ್ಲ. ಹೀಗಿರುವಾಗ ಈ ಪಕ್ಷ ಜನಸಾಮಾನ್ಯರ ಪಕ್ಷವಾಗಿರಲಿಲ್ಲ ಎನ್ನುವ ಮಾತೇ ಅಪ್ರಸ್ತುತ.

**೩. ಸದ್ಯಕ್ಕೆ ರಾಜ್ಯದ ಮಟ್ಟಿಗಾದರೂ ದೊಡ್ಡ ಚುನಾವಣೆಗಳೇನೂ ಹತ್ತಿರವಿಲ್ಲ ಹೀಗಾಗಿ ರಾಜ್ಯದಲ್ಲಿ ಪಕ್ಷದ ಮುಂದಿನ ಕಾರ್ಯಕ್ರಮ/ಯೋಜನೆಗಳು ಏನು?**

ಅಂತರಿಕ ಪ್ರಜಾಪ್ರಭುತ್ವದ ಆಶಯದ ಮೇಲೆ, ಸಕ್ರಿಯ ಸದಸ್ಯರು ತಮ್ಮ ವಿಭಾಗಾವಾರು ಸಮಿತಿಗಳನ್ನು ಚುನಾವಣೆ/ಸಮ್ಮತಿಯ ಆಧಾರದ ಮೇಲೆ ಆಯ್ಕೆ ಮಾಡಿಕೊಂಡು ಕಾರ್ಯಾರಂಭ ಮಾಡುವುದು ನಾವು ಮಾಡಬೇಕಾದ ಮೊದಲ ಕೆಲಸ. ಪಕ್ಷದ ಸಾಂಸ್ಥಿಕ ರಚನೆ ಈಗ ಬಹಳ ಮುಖ್ಯವಾದದ್ದು. ಈ ವಿಷಯವಾಗಿ ದೆಹಲಿಯಲ್ಲಿ ಇತ್ತೀಚೆಗೆ ನಡೆದ ರಾಷ್ಟ್ರೀಯ ಕಾರ್ಯಕಾರಿ ಸಮಿತಿಯಲ್ಲಿ ಚರ್ಚೆಯಾಗಿದೆ ಮತ್ತು ಇಷ್ಟರಲ್ಲಿಯೇ ಕೆಲವು ನೀತಿ ಮತ್ತು ಮಾರ್ಗದರ್ಶನ ಸೂತ್ರಗಳು ಬರಲಿವೆ. ಈ ಪ್ರಕ್ರಿಯೆ ನಡೆಯುತ್ತಿರುವಾಗ ಪರ್ಯಾಯವಾಗಿ ರಾಜ್ಯದಲ್ಲಿ ರಚನಾತ್ಮಕ ಕಾರ್ಯಗಳನ್ನು ಮತ್ತು ರಾಜಕೀಯ ಹೋರಾಟಗಳನ್ನು ಪಕ್ಷ ಕೈಗೆತ್ತಿಕೊಳ್ಳಲಿದೆ. ರಾಜಕೀಯವಾಗಿ ತೊಡಗಿಸಿಕೊಳ್ಳದ ಆದರೆ ನಮ್ಮ ಪಕ್ಷದ ಬಗ್ಗೆ ಆಶಾವಾದ ಮತ್ತು ನೈತಿಕ ಬೆಂಬಲ ನೀಡುತ್ತಿರುವ ವ್ಯಕ್ತಿ ಮತ್ತು ಸಂಘಟನೆಗಳನ್ನು ಜೊತೆಗೆ ಕರೆತರಬೇಕಿದೆ. ಬೆಂಗಳೂರಿನಲ್ಲಿ ಪ್ರಚಾರದ ಸಮಯದಲ್ಲಿ ನಮಗೆ ಅರಿವಾಗಿದ್ದು ಏನೆಂದರೆ ಲೋಕಸಭಾ ಚುನಾವಣೆಗಿಂತ ಬೆಂಗಳೂರಿನ ಮಹಾನಗರಪಾಲಿಕೆ ಚುನಾವಣೆಯಲ್ಲಿ ನಮ್ಮನ್ನು ಬೆಂಬಲಿಸಲು ಜನ ಸಿದ್ಧರಿದ್ದಾರೆ ಎನ್ನುವುದು. ಆ ಚುನಾವಣೆ ಇನ್ನು ಒಂಬತ್ತು ತಿಂಗಳಿನಲ್ಲಿ ಬರಲಿದೆ. (ರಾಜ್ಯ ಸರ್ಕಾರ ಕುಂಟು ನೆಪಗಳನ್ನು ಒಡ್ಡಿ ಮುಂದೂಡದಿದ್ದರೆ!) ಬೆಂಗಳೂರಿನಲ್ಲಿ ನಮ್ಮ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಇರುವುದರಿಂದ ಮತ್ತು ನಗರದ ಜನತೆಗೆ ನಮ್ಮ ಪಕ್ಷದ ಬಗ್ಗೆ ತಿಳಿದಿರುವುದರಿಂದ ಖಂಡಿತವಾಗಿ ನಾವು ಬಿಬಿಎಂಪಿ ಚುನಾವಣೆಯಲ್ಲಿ ಒಳ್ಳೆಯ ಸಾಧನೆ ಮಾಡುವ ಬಗ್ಗೆ ವಿಶ್ವಾಸವಿದೆ. ಆ ನಿಟ್ಟಿನಲ್ಲಿ ನಗರ ಕೇಂದ್ರಿತವಾಗಿ ಈಗಾಗಲೆ ಕೆಲವು ಚಟುವಟಿಕೆಗಳನ್ನು ಆರಂಭಿಸಿದ್ದೇವೆ. ಇದೇ ಸಮಯದಲ್ಲಿ ರಾಜ್ಯದಾದ್ಯಂತ ಜಿಲ್ಲಾ ಸಮಿತಿಗಳ ರಚನೆ ಮತ್ತು ಸಂಘಟನೆ ಸಹ ಜಾರಿಯಲ್ಲಿದೆ.

---

**ಮುಂದಿನ ಸಂಚಿಕೆ:**

## ಹೊಸ ಮನುಷ್ಯ ವಾರ್ಷಿಕ ವಿಶೇಷ ಸಂಚಿಕೆ–೨೦೧೫

ಪ್ರಿಯ ಓದುಗರೇ, 'ಹೊಸ ಮನುಷ್ಯ' ನಿಮ್ಮೆಲ್ಲರ ಸಹಕಾರದೊಂದ ಮೂರು ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿ, ಮುಂದಿನ ಸಂಚಿಕೆಯೊಂದಿಗೆ ನಾಲ್ಕನೇ ವರ್ಷಕ್ಕೆ ಪದಾರ್ಪಣೆ ಮಾಡುತ್ತಿದೆ. ಪ್ರತಿ ಸಂಪುಟದ ಮೊದಲ ಸಂಚಿಕೆಯನ್ನು ವಿಶೇಷಾಂಕವಾಗಿ ಹೊರತರುವ ನಮ್ಮ ಕಳೆದೆರಡು ವರ್ಷಗಳ ಸಂಪ್ರದಾಯದಂತೆ ಬರಲಿರುವ ಆಗಸ್ಟ್–೨೦೧೫ರ ಸಂಚಿಕೆಯನ್ನು ವೈವಿಧ್ಯಮಯ ಬರಹಗಳ–ಚಿತ್ರಗಳ ಸಮೃದ್ಧ ವಿಶೇಷಾಂಕವನ್ನಾಗಿ ಹೊರತರುತ್ತಿದ್ದೇವೆ:

ಆಧುನಿಕ ನಾಗರೀಕತೆ ಕುರಿತು ರೆಡ್ ಇಂಡಿಯನ್ ಚಿಂತಕ ರಸಲ್ ಮೀನ್ಸ್ ಅವರ ವಿಚಾರ ಪ್ರಚೋದಕ ಲೇಖನ: 'ಅಮೆರಿಕಾ ಬದುಕಲು ಯೂರೋಪ್ ಸಾಯಬೇಕು!'

ಅನಂತಮೂರ್ತಿಯವರೊಂದಿಗೆ ಬಿಚ್ಚು ಮನಸ್ಸಿನ ಒಂದು ನಿಷ್ಠುರ ಸಂದರ್ಶನ

ಜಯಂತ ಕಾಯ್ಕಿಣಿಯವರ ಮನಮುಟ್ಟುವ ಕಥೆ

ಗಿರೀಶ್ ಕಾಸರವಳ್ಳಿವರೊಂದಿಗೆ ಒಂದು ಪ್ರಶ್ನೋತ್ತರ

ಭಾರತದ ವಿಭಜನೆಯನ್ನು ಕುರಿತ ಲೋಹಿಯಾ ಬರಹದ ಆಯ್ದ ಭಾಗಗಳು

ಲೋಹಿಯಾರನ್ನು ಕುರಿತ ಸ್ವಾರಸ್ಯಕರ ಉಪಕತೆಗಳು!

ಕೋಣಂದೂರು ಲಿಂಗಪ್ಪನವರ ಕುತೂಹಲಕಾರಿ ಸಮಾಜವಾದಿ ನೆನಪುಗಳು...

–ಇನ್ನೂ ಹಲವು ಮುಖ್ಯ ಲೇಖಕರ ವಿಶೇಷ ಬರಹಗಳು, ಕವನಗಳು, ಚಿತ್ತಾರಗಳು... ಜೊತೆಗೆ ಪ್ರತಿ ತಿಂಗಳ ಸ್ಥಿರ ಶೀರ್ಷಿಕೆಗಳು: ನಮ್ಮ ಸಮಾಜವಾದಿಗಳು, ಪ್ರೊ. ಬಿ.ಕೃಷ್ಣಪ್ಪ ನೆನಪಿನ ಮಾಲೆ, ಪುಸ್ತಕಾವಲೋಕನ ಇತ್ಯಾದಿ

**ಓದುಗರೇ ನಮ್ಮ ಈ ಯೋಜನೆ ಯಶಸ್ವಿಯಾಗಲು ನೀವು ನಿಮ್ಮ ಸಂಪರ್ಕಗಳನ್ನು ಬಳಸಿ ದಯವಿಟ್ಟು ನಮಗೆ ಜಾಹೀರಾತುಗಳನ್ನು ಒದಗಿಸಿಕೊಡಿ. ವಿಶೇಷಾಂಕಕ್ಕಾಗಿ ಒಳಪುಟಗಳಲ್ಲಿನ ಕಪ್ಪು ಬಿಳುಪು ಜಾಹೀರಾತುಗಳ ದರಗಳು ಹೀಗಿವೆ: ಪೂರ್ಣ ಪುಟ: ಮೂರು ಸಾವಿರ ರೂಪಾಯಿಗಳು ಅರ್ಧ ಪುಟ: ಒಂದೂವರೆ ಸಾವಿರ ರೂಪಾಯಿಗಳು ಕಾಲು ಪುಟ: ಏಳು ನೂರಾ ಐವ್ವತ್ತು ರೂಪಾಯಿಗಳು**

**ಜಾಹೀರಾತುಗಳ ವಿವರ ನಮ್ಮನ್ನು ಜುಲೈ ಇಪ್ಪತ್ತರೊಳಗಾಗಿ, ಜಾಹೀರಾತು ಶುಲ್ಕದೊಂದಿಗೆ ತಲುಪಬೇಕು. ಹಣ ಸಂಪಾದಕರ ಹೆಸರಿಗೆ ಬರೆದ ಚೆಕ್/ಡಿಡಿ ರೂಪದಲ್ಲಿರಬಹುದು ಅಥವಾ ನಮ್ಮ ಚಂದಾ ತುಂಬುವ ಈ ಬ್ಯಾಂಕ್ ವಿವರಗಳಿಗೆ ಹಣ ವರ್ಗಾಯಿಸಬಹುದು: ಸಂಪಾದಕರು, ಹೊಸ ಮನುಷ್ಯ–ಈ ಹೆಸರಿನಲ್ಲಿ ಶಿವಮೊಗ್ಗದ ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್‌ನ (IFSC Code: SBMY 0040444) ವಿನೋಬನಗರ ಶಾಖೆಯಲ್ಲಿ ತೆರೆದಿರುವ ಕರೆಂಟ್ ಅಕೌಂಟ್ ಸಂಖ್ಯೆ : 64110358330**

**ನೆನಪಿರಲಿ: ನಿಮ್ಮ ಸಹಕಾರದಿಂದ ಮಾತ್ರ ನಮ್ಮ ವಿಶೇಷಾಂಕ ಸಮೃದ್ಧವಾಗಿ ಹೊರಬರಬಲ್ಲುದು–ಸಂಪಾದಕ**

# ಸಾಹಿತ್ಯ-ಸಂಸ್ಕೃತಿ-ಪ್ರಶಸ್ತಿ ರಾಜಕಾರಣ ಇತ್ಯಾದಿ

## ಹೀಗೇ ಕೆಲವು ಟಿಪ್ಪಣಿಗಳು...



**ಕೆ**ಲ ದಿನಗಳ ಹಿಂದೆ ನಾನು, ನನ್ನ ಪತ್ನಿ ಸವಿತಾ ಮತ್ತು ಆಕೆಯ ಸೋದರ ಜಯವಂತ್ ಅನಂತಮೂರ್ತಿಯವರನ್ನು ಅವರ ಅಳಿಯ ವಿವೇಕ ಶಾನಭಾಗರ ಮನೆಯಲ್ಲಿ ಭೇಟಿ ಮಾಡಿದ್ದೆವು. ಮಧುಮೇಹದ ಕಾರಣದಿಂದಾಗಿಮೂತ್ರ ಪಿಂಡಗಳ ದೌರ್ಬಲ್ಯ ಹೆಚ್ಚಾಗಿ ಅವರೀಗ ವಾರದಲ್ಲಿ ನಾಲ್ಕು ದಿನ ಚಿಕಿತ್ಸೆಗೆ ಒಳಗಾಗಬೇಕಿದೆ. ಇದು ಅವರನ್ನು ಸಹಜವಾಗಿಯೇ ಬಳಲಿಸಿದೆ. ಅವರ ಧ್ವನಿ ಕ್ಷೀಣಗೊಂಡಿದೆ. ಅವರನ್ನು ಈಗ ಕಂಡಾಗ, ಬಿಳಿಗಡ್ಡದ ನಡುವೆಯೂ ಸದಾ ಚಿರ ಯೌವ್ವನಿಗರಂತೆ ನನಗೆ ಕಾಣುತ್ತಿದ್ದ ಅವರು ಮೊದಲ ಬಾರಿಗೆ ನಿಜವಾಗಿ ವೃಧ್ಧರಾಗಿರುವಂತೆ ಕಂಡರು.

ಅನಂತಮೂರ್ತಿಯವರು ನಾವು ಭೇಟಿ ಮಾಡಿದ ಹಿಂದಿನ ಕೆಲ ದಿನಗಳಿಂದ ಬಹಳ ನೊಂದಿದ್ದರು. ಮೋದಿ ಕುರಿತ ಅವರ ಹೇಳಿಕೆಯನ್ನು ಮಾಧ್ಯಮಗಳು ಬಳಸಿದ ರೀತಿ ಮತ್ತು ನಂತರ ಮೋದಿ ಗಳಿಸಿದ ಭಾರಿ ವಿಜಯ ಅವರನ್ನು ಮೋದಿ ಬೆಂಬಲಿಗರ ದಾಳಿಗೆ ಒಳಗಾಗಿಸಿತ್ತು. ದಿನ ನಿತ್ಯ ನಿಂದನಾ ಮೇಲ್, ಅವಹೇಳನಕಾರಿಯಾದ ದೂರವಾಣಿ ಕರೆ ಮತ್ತು ಸಂದೇಶಗಳಿಂದ ಅವರು ಜರ್ಝರಿತರಾಗಿದ್ದರು.. ಈ ಮಧ್ಯೆ ಹಿರಿಯ ವಿದ್ವಾಂಸ ಕಲ್ಬುರ್ಗಿಯವರು ಸೃಷ್ಟಿಸಿದ ಇನ್ನೆರಡು ವಿವಾದಗಳು ಅವರನ್ನು ಇನ್ನಷ್ಟು ಮನೋವ್ಯಥೆಗೆ ದೂಡಿತ್ತು. ಅವರು ತಾವು ಒಂಟಿಯಾಗಿ ಇದನ್ನೆಲ್ಲ ಎದುರಿಸಬೇಕಾಗಿರುವ ಅಸಹಾಯಕತೆಯಿಂದ ಖಿನ್ನರಾಗಿ ಹೋಗಿರುವಂತೆ ನಮಗೆ ಕಂಡರು. ಹೀಗಾಗಿ ನಾವು ಶಿವಮೊಗ್ಗದ ಅವರ ಕೆಲ ಕಿರಿಯ ಗೆಳೆಯರು ಅನಂತಮೂರ್ತಿಯವರ ಮೇಲಿನ ಮಾನಸಿಕ ಹಲ್ಲೆಯನ್ನು ಖಂಡಿಸಿ ಮತ್ತು ಈ ವಿವಾದಗಳ ಹಿಂದಿನ ವಾಸ್ತವಗಳನ್ನು ವಿವರಿಸಿ ಒಂದು ಪತ್ರಿಕಾ ಹೇಳಿಕೆ ನೀಡಿದೆವು. ಅನಂತಮೂರ್ತಿಯವರು ನಮ್ಮ ಈ ಸಾಂಕೇತಿಕ ನೈತಿಕ ಬೆಂಬಲದಿಂದ ಹರ್ಷಗೊಂಡಿದ್ದನ್ನು ತಿಳಿದು ನಮಗೆ ಸಮಾಧಾನವಾಯಿತು.

ಕಲ್ಬುರ್ಗಿಯವರು ಎತ್ತಿದ ಬಸವ ಪ್ರಶಸ್ತಿಯ ವಿವಾದಕ್ಕೆ ಅವರದ್ದೇ ಕಾರಣವಿದ್ದಂತಿತ್ತು. ನಮ್ಮ ಪತ್ರಿಕಾ ಹೇಳಿಕೆ ಪ್ರಕಟವಾದ ಮೇಲೆ ಅವರು ನನಗೆ ಕರೆ ಮಾಡಿ, ಈ ವಿವಾದದಲ್ಲಿ ತಮ್ಮನ್ನೇಕೆ ಬೆಂಬಲಿಸಿ ಹೇಳಿಕೆ ನೀಡಲಿಲ್ಲ ಎಂದು ಕೇಳಿದರು. ಆ ಪುರಸ್ಕಾರವನ್ನು ಸಾಹಿತಿಗೆ ನೀಡುವಂತಿಲ್ಲವಾದ್ದರಿಂದ ಆ ಪ್ರಶ್ನೆಯನ್ನು ತಾವು ಎತ್ತಿದ್ದಾಗಿ ಅವರು ವಿವರಿಸಿದರು. ನಾನು, ಹಾಗಾದರೆ ಪುರಸ್ಕಾರ ಪ್ರಕಟವಾದ ಕೂಡಲೇ ನೀವೇಕೆ ಅದನ್ನು ಪ್ರಶ್ನಿಸಲಿಲ್ಲವೆಂದು ಕೇಳಿದೆ. ಹಾಗೇ, ಕಳೆದ ವರ್ಷ ಅದನ್ನು ರಂಜಾನ್ ದರ್ಗಾ ಅವರಿಗೆ ನೀಡಿದಾಗ ನೀವು ಏಕೆ ಸುಮ್ಮನಿದ್ದಿರಿ ಎಂದೂ ಕೇಳಿದೆ. ಅವರ ಉತ್ತರ ಗೊಂದಲದಿಂದ ಕೂಡಿದ್ದು, ನನಗೆ ಒಪ್ಪಿಗೆಯಾಗಲಿಲ್ಲ. ಜೊತೆಗೆ, ಈ ವಿವಾದದ ಕಹಿಯ ಮುಂದುವರಿಕೆಯಂತೆ ಕಾಣುವ ಹಾಗೆ ಅವರು ಅನಂತಮೂರ್ತಿಯವರು ತಮ್ಮ ಸಾಹಿತ್ಯ ಮನಸ್ಸು ರೂಪುಗೊಂಡ ಬಗೆ ಕುರಿತು ಹೇಳುವಾಗ ಸಾಂದರ್ಭಿಕವಾಗಿ ಬರೆದ ಮಾತುಗಳನ್ನು ಅಸಾಂದರ್ಭಿಕವಾಗಿ, ಅದೂ ತಪ್ಪಾಗಿ ಉಲ್ಲೇಖಿಸಿದ ಪರಿಯ ಬಗ್ಗೆ (ಇದೇ ತಪ್ಪನ್ನು ಮೊನ್ನೆ ಗೆಳೆಯ ಎಚ್.ಎಸ್. ಶಿವಪ್ರಕಾಶ ಅವರೂ ತಮ್ಮ 'ಪ್ರಜಾವಾಣಿ' ಅಂಕಣದಲ್ಲಿ ಮಾಡಿರುವದೇತಕ್ಕೆ ಎಂಬುದು ಬೇರೆ ನೆಲೆಯ ಚರ್ಚೆಗೇ ಅರ್ಹವಾದ ವಿಷಯ.) ನನ್ನ ಅಸಮಧಾನವನ್ನು ಸೂಚಿಸಿದೆ. ಅವರು ಅನಂತಮೂರ್ತಿ ದೆವ್ವದ ಕಲ್ಲಿನ ಬಗ್ಗೆ ಬರೆದದ್ದನ್ನು ಅವರು ದೇವರ ಪ್ರತಿಮೆಗೆ ಆರೋಪಿಸಿ ಮಾತಾಡಿದ್ದನ್ನು, ಕರಾವಳಿಯಲ್ಲಿ ಭೂತಾರಾಧನೆ ದೈವಾರಾಧನೆಗೆ ಸಮ ಎಂದು ಸಮರ್ಥಿಸಿಕೊಳ್ಳುವ ಪ್ರಯತ್ನ ಮಾಡಿದರು. ಮತ್ತು ತಾವೂ ವಚನ ಸಾಹಿತ್ಯದ ಅನುಯಾಯಿಯಾಗಿ ಮೂರ್ತಿ ಪೂಜೆಯ ಬಗ್ಗೆ ಶ್ರದ್ಧೆ ಇಲ್ಲದವರು ಎಂದೂ ಹೇಳಿದರು. ಹಾಗಿದ್ದಲ್ಲಿ ಈ ವಿಷಯ ಮಾಧ್ಯಮಗಳಲ್ಲಿ ವಕ್ರವಾಗಿ ಪ್ರಚಾರ ಪಡೆದು ಜನರನ್ನು ಪ್ರಚೋದಿಸಿದಾಗ ನೀವು ನಿಮ್ಮ ನಂಬಿಕೆಯನ್ನು ಸಮರ್ಥಿಸಿಕೊಳ್ಳುವ ನೈತಿಕ ಸ್ಥೈರ್ಯ ತೋರದೆ, ರಾಜಿ ರೀತಿಯ ಸ್ಪಷ್ಟೀಕರಣ ಏಕೆ ನೀಡಿದಿರಿ ಎಂದು ಕೇಳಿದರೆ, ಬಲಪಂಥೀಯ ಗುಂಪುಗಳು ತಮ್ಮ ಮತ್ತು ತಮ್ಮ ಕುಟುಂಬಕ್ಕೆ ಸಂಬಂಧಿಸಿದಂತೆ ಹುಟ್ಟಿಸಿದ್ದ ಭಯ-ಆತಂಕಗಳ ವಾತಾವರಣ ಹಾಗಿತ್ತು ಮತ್ತು ತಾವು ಇದೆಲ್ಲದರಿಂದ ಮುಕ್ತನಾಗಿ ತಮ್ಮ ಸಂಶೋಧನೆಯ ಕೆಲಸ ಮುಂದುವರೆಸಬೇಕಿತ್ತು ಎಂದರು.



ಒಟ್ಟಿನಲ್ಲಿ ಕಲ್ಬುರ್ಗಿಯವರು ತೀವ್ರ ಬೇಸರ ಮತ್ತು ದುಃಖದಲ್ಲಿದ್ದರು. ಮುಖ್ಯವಾಗಿ ಈ ವಿವಾದಗಳಲ್ಲಿ ತಾವು 'ಖಳ'ರಂತೆ ಚಿತ್ರಿತವಾದ ಬಗ್ಗೆ ಬೇಸರವಿತ್ತು. ಮತ್ತು ತಾವೂ ಭಯ ಆತಂಕಗಳನ್ನು ಎದುರಿಸುತ್ತಿದ್ದಾಗ ತಮ್ಮ ಬೆಂಬಲ-ರಕ್ಷಣೆಗೆ ಯಾರೂ ಬರಲಿಲ್ಲ ಎಂಬ ದುಃಖವಿತ್ತು. ಇದಕ್ಕೆ ಕಲ್ಬುರ್ಗಿಯವರ ಅರ್ಧ ಸೌಜನ್ಯ ಮತ್ತು ಅರ್ಧ ಪ್ರತಿಭಟನೆಯ ಚೌಕಾಶಿ ನಡವಳಿಕೆಯೇ ಅರ್ಧ ಕಾರಣ. ಅವರು ಬಸವ ಪ್ರಶಸ್ತಿಯ ಬಗ್ಗೆ ಅದು ಪ್ರಕಟವಾದ ಕೂಡಲೇ ಪ್ರತಿಭಟಿಸಬೇಕಿತ್ತು ಮತ್ತು ತಮ್ಮ ತಡವಾದ ಪ್ರತಿಭಟನೆಗೆ ಅನುಮಾನಾಸ್ಪದವಾದ ದಾಖಲೆಯನ್ನು ಅವಲಂಬಿಸುವ ಹುಂಬತನ ಪ್ರದರ್ಶಿಸಬಾರದಿತ್ತು. ಹಾಗೇ ಮೂಢ ನಂಬಿಕೆಗಳನ್ನು ಕುರಿತ ತಮ್ಮ ಭಾಷಣವನ್ನು ಅದು ವಿವಾದಾಸ್ಪದವಾದಾಗಲೂ ತಮ್ಮ ನಂಬಿಕೆಯ ಪ್ರಕಾರ ಸಮರ್ಥಿಸಿಕೊಳ್ಳುವ ನೈತಿಕ ಸ್ಥೈರ್ಯ ತೋರಬೇಕಿತ್ತು. ಆಗ ಅವರ ಅಭಿಮಾನಿಗಳು ಅವರ ಬೆಂಬಲ-ರಕ್ಷಣೆಗೆ ಬರುವ ಸಾಧ್ಯತೆ ಇತ್ತು. ಇನ್ನು ಈ ಜಿಗುಪ್ಸೆಕರ ವಿವಾದಕ್ಕೆ ಇನ್ನರ್ಧ ಕಾರಣವೆಂದರೆ ಕೆಲ ಮಾಧ್ಯಮಗಳ ಬೇಜವಾಬ್ದಾರಿ ವರ್ತನೆ. ಕೆಲ ಪತ್ರಿಕೆಗಳು ಮತ್ತು ಟಿ.ವಿ. ವಾಹಿನಿಗಳು ವಿವಾದವನ್ನು ವಿಕೃತಗೊಳಿಸಿ ಅಗ್ಗದ ಚರ್ಚೆಗಳ ಮೂಲಕ ಜನರನ್ನು ಪ್ರಚೋದಿಸಿದವು.

ಇಪ್ಪತ್ತು ನಾಲ್ಕೂ ಘಂಟೆಗಳ ಕಾಲ ಜನರನ್ನು ಹಿಡಿದಿಡುವ ವ್ಯಾಪಾರಿ ಒತ್ತಾಯಗಳಿಗೆ ಒಳಗಾಗಿರುವ ಈ ಕೆಲ ಮಾಧ್ಯಮಗಳು, ಯಾವುದನ್ನೂ ತಾಳೆ ನೋಡುವ ವ್ಯವಧಾನವಾಗಲೀ, ವಿವೇಕವಾಗಲೀ ಇಲ್ಲದೆ ಇದನ್ನೆಲ್ಲ ರೋಚಕಗೊಳಿಸಿ ಅಮಾಯಕ ಜನರಿಗೆ ಉಣಬಡಿಸತೊಡಗಿವೆ. ಹಾಗಾಗಿ ಸಾಮಾನ್ಯ ಜನತೆ ತಮ್ಮದೇ ವ್ಯಾಪಾರಿ ಉದ್ದೇಶಗಳಿಗಾಗಿ ಸಾರ್ವಜನಿಕ ಬದುಕನ್ನು ಆಳತೊಡಗಿರುವ ಮಾಧ್ಯಮಗಳ ಮತ್ತು ಅವನ್ನು ತಮ್ಮದೇ ಪಟ್ಟಭದ್ರ ಹಿತಾಸಕ್ತಿಗಳಿಗಾಗಿ ಬಳಸಿಕೊಳ್ಳಲು ಕಾತುರರಾಗಿರುವ ಶಕ್ತಿಗಳಿಗೆ ತಮ್ಮ ಬುದ್ಧಿ ಮತ್ತು ಬದುಕನ್ನು ಒಪ್ಪಿಸಿಕೊಳ್ಳದಂತೆ ಎಚ್ಚರ ವಹಿಸುವಂತಹ ಸಾರ್ವತ್ರಿಕ ಜಾಗೃತಿ ಉಂಟಾಗುವವರೆಗೆ ನಮ್ಮ ಲೇಖಕ-ಬುದ್ಧಿಜೀವಿಗಳು ಸ್ವಲ್ಪ ಸಂಯಮದಿಂದ, ಜಾಣ್ಮೆಯಿಂದ ವರ್ತಿಸಬೇಕಾದ ಅವಶ್ಯಕತೆ ಇದೆ. ಅದೂ, ಈ ವಿಷಯಗಳಲ್ಲಿ ಕಾಲ ಇನ್ನೂ ಕೆಡುವ ಸೂಚನೆಗಳು ಬರತೊಡಗಿರುವಾಗ.

ಪ್ರಶಸ್ತಿ-ಪುರಸ್ಕಾರಗಳ ಮೌಲ್ಯ ಅದರ ನಗದು ಮೌಲ್ಯದ ಹೊರತಾಗಿ ಇನ್ನೆಲ್ಲ ಮೌಲ್ಯವನ್ನೂ ಕಳೆದುಕೊಂಡು, ಎಲ್ಲಂದರಲ್ಲಿ ಮತ್ತು ಯಾರೆಂದರವರ ಬಳಿ ಇಟ್ಟಾಡುತ್ತಿರುವಂತೆ ಮಾಡಿರುವ ಪುಢಾರಿ ಸಾಹಿತ್ಯಿಕ-ಸಾಂಸ್ಕೃತಿಕ ರಾಜಕಾರಣವನ್ನು ಕಳೆದ ಹಲವಾರು ವರ್ಷಗಳಿಂದ ನಾವು ನಂನಮ್ಮ ಅನುಕೂಲಕ್ಕಾಗಿ ಪ್ರೋತ್ಸಾಹಿಸುತ್ತಲೋ ಅಥವಾ ಕಣ್ಮುಚ್ಚಿ ಅನುಮೋದಿಸುತ್ತಲೋ ಬಂದಿದ್ದೇವೆ. ಹೀಗಿರುವಾಗ ನಾವು ಈಗ ಈ ಪ್ರಶಸ್ತಿ ಗಳ ಬಗ್ಗೆ ಚರ್ಚೆ ಮಾಡುವ ನೈತಿಕತೆಯನ್ನು ಕಳೆದುಕೊಂಡಿದ್ದೇವೆ ಎಂದೇ ನನಗನ್ನಿಸುತ್ತದೆ. ಅನಂತಮೂರ್ತಿಯವರೊಂದಿಗೆ ಮಾತಾಡಿದಾಗ, ಅವರೂ ಬಸವ ಪ್ರಶಸ್ತಿ ಬಗೆಗಿರುವ ಗೊಂದಲದ ಪ್ರಸ್ತಾಪ ಮಾಡಿದರು. ತಾವು ಅದನ್ನು ಜೆ.ಎಚ್. ಪಟೇಲ್‌ಗೆ ಹೇಳಿ ಸ್ಥಾಪನೆ ಮಾಡಿಸಿದಾಗ ಅದು ಹೋರಾಟಗಾರನಿಗೆ(Activist) ಎಂಬ ನಿಬಂಧನೆ ಇತ್ತೆಂದು ಅವರು ನೆನಪಿಸುತ್ತಾ ಹೇಳುವಾಗ ಈ ಪ್ರಶಸ್ತಿ ಈಗ ತಮಗೆ ಸಂದಿರುವ ಬಗ್ಗೆ ಅವರು ಪುನರಾಲೋಚನೆಗೆ ತೊಡಗಿರುವಂತೆಯೂ ನನಗೆ ಕಂಡಿತು.

ಅದೇನೇ ಇರಲಿ, ಇಂದು ಸಾಹಿತ್ಯ-ಸಂಸ್ಕೃತಿಗಳನ್ನು ಕುರಿತ ಚರ್ಚೆಗಳ ಘನತೆ-ಗೌರವಗಳನ್ನು ಮರುಸ್ಥಾಪಿಸಬೇಕಾದರೆ ಅನಂತಮೂರ್ತಿ ಮತ್ತು ಕಲ್ಬುರ್ಗಿಯವರಂತಹ ಹಿರಿಯರು ಮಾಡಬೇಕಾದ ಮೊದಲ ಕೆಲಸವೆಂದರೆ, ಈ ಸರ್ಕಾರಿ ಪ್ರಶಸ್ತಿಗಳ ಸಂಖ್ಯೆಯನ್ನು ಆದಷ್ಟೂ ಕಡಿಮೆ ಮಾಡಿಸಲು ಉದ್ಯುಕ್ತರಾಗುವುದು. ಈ ಎಲ್ಲ ಪ್ರಶಸ್ತಿಗಳನ್ನು ಪಡೆಯುವಂತಹ ಪ್ರತಿಭಾವಂತರು ಮಾತ್ರವಲ್ಲ, ಅವನ್ನು ನೀಡುವಂತಹ ಪ್ರಬುದ್ಧ ಪ್ರಭುತ್ವದ ಕಾಲ ಕೂಡ ಮುಗಿದಂತೆ ಕಾಣುತ್ತದೆ. ಇತ್ತೀಚೆಗೆ, ಘನತೆವೆತ್ತ ಹೆಸರುಗಳುಳ್ಳ ಈ ಕೆಲವು ಪ್ರಶಸ್ತಿಗಳನ್ನು ಸ್ವೀಕರಿಸುತ್ತಿರುವ ಹಲವು ಮುಖಗಳನ್ನು ಕಂಡರೆ ನಿಮಗೆ ಹಾಗೆನಿಸುವುದಿಲ್ಲವೇ?

**-ಡಿ.ಎಸ್. ನಾಗಭೂಷಣ**

**ಪುಸ್ತಕಾವಲೋಕನ**

ಪು: **ಲೋಹಿಯಾ ಜೊತೆಯಲ್ಲಿ...** ಲೇ: **ಡಿ.ಎಸ್. ನಾಗಭೂಷಣ** ಪ್ರ: ಗೀತಾಂಜಲಿ ಪುಸ್ತಕ ಪ್ರಕಾಶನ ಶಿವಮೊಗ್ಗ ಪು:೨೪೮ ಬೆಲೆ:ರೂ. ೧೭೫/–

# ಸಮಾಜವಾದದ ಪೂರ್ಣ ನೋಟ




**ಡಾ.** ರಾಮಮನೋಹರ ಲೋಹಿಯಾ ಅವರು ತಮ್ಮ ಸಂಗಾತಿಗಳೊಡಗೂಡಿ ರೂಪಿಸಿದ (ಇಲ್ಲಿ ಸಂಗಾತಿಗಳೊಡಗೂಡಿ ಎಂಬ ಮಾತು ಆರಂಭಿಕ ಘಟ್ಟಕ್ಕೆ ಮಾತ್ರ ಅನ್ವಯಿಸುತ್ತದೆ. ಕ್ರಮೇಣ ಅದು ಲೋಹಿಯಾ ಸೃಜನಶೀಲತೆಯ ಕೇಂದ್ರದಿಂದಲೇ ಹೊಮ್ಮುತ್ತ ಸಾಗುತ್ತದೆ) ಭಾರತೀಯ ಸಮಾಜವಾದದ ಉತ್ಕಟ ನಿರೂಪಣೆ ಇಲ್ಲಿದೆ. ಸಮಾಜವಾದಿ ಚಿಂತನೆಯ ಶತಮಾನದ ಹರಹನ್ನು ಅರ್ಥಪೂರ್ಣ ಭಾವತೀವ್ರತೆಯಲ್ಲಿ ನಿರೂಪಿಸಿದ ಮಹತ್ವಾಕಾಂಕ್ಷೆಯ ಕೃತಿ ಇದು.

೨೪೮ ಪುಟಗಳಲ್ಲಿನ ೨೮ ಅಧ್ಯಾಯಗಳ ಬೃಹತ್ ಹರಹಿನ ಈ ಪುಸ್ತಕ ವಿಭಿನ್ನ ಶೀರ್ಷಿಕೆಗಳಲ್ಲಿ ಡಾ. ಲೋಹಿಯಾ ನಿರೂಪಿಸಿದ ಭಾರತೀಯ ಸಮಾಜವಾದದ ತಾತ್ವಿಕತೆಯನ್ನು, ಈ ತಾತ್ವಿಕತೆಯ ಚರಿತ್ರೆ ಮತ್ತು ಚರಿತೆ ಎರಡನ್ನೂ ಆಳವಾದ ಅಧ್ಯಯನ ಮತ್ತು ಕಾಣ್ಕೆಯ ಬಲದಿಂದ ನಿಖರವಾಗಿ ದಾಖಲಿಸುತ್ತಾ, ವಿಶ್ಲೇಷಿಸುತ್ತಾ ಸಾಗುತ್ತಲೇ, ಈ ತಾತ್ವಿಕತೆಯು ಸ್ವೀಕರಿಸಲು ಹಿಂದೆಗೆದ ಆಧ್ಯಾತ್ಮಿಕ ಅಥವಾ 'ದೈವಿಕ' ಅಥವಾ ಪಾರಮಾರ್ಥಿಕ ಆಯಾಮಗಳನ್ನು ಜೋಡಿಸುತ್ತ ಮುನ್ನಡೆಯುತ್ತದೆ. ಸಮಾಜವಾದದ ಸೋಲಿನ ಕಾಲಘಟ್ಟದಲ್ಲಿ ತಾನು ರೇಖಿಸಲ್ಪಡುತ್ತಿರುವ ಅರಿವಿನಿಂದಲೇ ಹುಟ್ಟಿರುವ ಈ ಕೃತಿ ಸಹಜವಾಗಿಯೇ ಹಲವಡೆ ವ್ಯಗ್ರವಾಗಿ, ಸುತ್ತಣ ರೂಕ್ಷ, ವಿಕ್ಷಿಪ್ತ ವಿದ್ಯಮಾನಗಳ ಮೇಲೆ ನಿರ್ದಾಕ್ಷಿಣ್ಯವಾಗಿ ಎರಗುತ್ತದೆ.

ಆದರೂ, ಚರಿತ್ರೆಯ ಸೋಲಿನ ಬಲಿಯಂತಿರದ ಈ ಕೃತಿ ವಸ್ತುನಿಷ್ಠವಾಗಿ ವಿಮರ್ಶಿಸಬಲ್ಲ ತಾಕತ್ತನ್ನು ಉಳಿಸಿಕೊಂಡಿರುವುದು, ಸ್ವಯಂ ಈ ತಾತ್ವಿಕತೆಗೂ ಇರಬಹುದಾದ ಮತ್ತು ಲೇಖಕರಲ್ಲೂ ಇರುವ ಆಧ್ಯಾತ್ಮಿಕ ಎಂದು ಕರೆಯಬಹುದಾದ ಸ್ತಿಮಿತಕ್ಕೆ ಸಾಕ್ಷಿ. ಸಮಾಜವಾದಿ ತಾತ್ವಿಕತೆಯ ಸಮಕಾಲೀನ ಅನ್ವಯಗಳ ದೀರ್ಘಾಲೋಚನೆಗಳ ಅಧ್ಯಾಯಗಳಾಗಿಯೂ ಈ ಕೃತಿ ತನ್ನನ್ನು ರಚಿಸಿಕೊಂಡಿದೆ. ಇದು ತನ್ನ ಕಾಲದೊಡನೆ ಲೇಖಕರು ಎದುರಾದ ತಾತ್ವಿಕ ಸಂಘರ್ಷದ ಬೌದ್ಧಿಕ ಉತ್ಪನ್ನ ಕೂಡಾ.

ಆರಂಭದಲ್ಲಿ ಲೋಹಿಯಾ ಸಾಹಚರ್ಯದ ಪಯಣದಂತೆ ಮೊದಲಾಗಿ ಕ್ರಮೇಣ 'ಲೋಹಿಯಾ' ಎಂಬ ಭೌತಿಕ ಬಿಂಬ ಕರಗಿ ಸಮಾಜವಾದಿ ತಾತ್ವಿಕತೆಯ ಜೊತೆಗಾರಿಕೆಯಲ್ಲಿ ಇಲ್ಲಿನ ಉಜ್ವಲ ಬೌದ್ಧಿಕ ಮುಖಾಮುಖಿಗಳು ರೂಪುತಾಳುತ್ತವೆ.ಲೋಹಿಯಾ ಎಂಬ ಐತಿಹಾಸಿಕ ವ್ಯಕ್ತಿ ಮತ್ತು ಅವರು ಕಂಡರಿಸಿದ ಭಾರತೀಯ ಸಮಾಜವಾದವನ್ನು ಕನ್ನಡದಲ್ಲಿ ಜ್ವಲಂತವಾಗಿ ನಿರೂಪಿಸುವ ಇಲ್ಲಿನ ಬರಹಗಳ ಅತ್ಯುತ್ತಮ ಭಾಗಗಳು ಪೌರಾಣಿಕ ಪ್ರಭೆಯಿಂದ ಬೆಳಗುತ್ತವೆ 'ಕನಸು ಬಂಡಾಯಗಳ ನಾಯಕ ಲೋಹಿಯಾ', 'ಗಾಂಧಿ ಮತ್ತು ಸಮಾಜವಾದಿಗಳು', 'ಲೋಹಿಯಾವಾದದ ವಿಮರ್ಶೆ: ಶಿವಸುಂದರ್‌ಗೊಂದು ಪತ್ರ' ಮತ್ತು ಗಾಂಧಿ ಕುರಿತ ಬರಹಗಳ ಮಾಲಿಕೆಯಲ್ಲಿ ಇದು ಸಶಕ್ತವಾಗಿ ಸಾಕಾರಗೊಂಡಿದೆ. ಲೇಖಕರೊಡನೆಯ ದೀರ್ಘ ಸಂದರ್ಶನವು ಕೂಡಾ ಅಧ್ಯಯನ ಯೋಗ್ಯವೂ, ಉಪಯುಕ್ತವೂ ಅಗಿ ಈ ಕೃತಿಯ ಬೌದ್ಧಿಕ ಸೌಂದರ್ಯಕ್ಕೆ ಕೊಡುಗೆ ನೀಡಿದೆ.

೧೯೩೦ರ ದಶಕದಲ್ಲಿ ಅಂತರಾಷ್ಟ್ರೀಯ ಕಮ್ಯೂನಿಸ್ಟ್ ಕಾರ್ಯಾಚರಣೆಯು ಸಮಾಜವಾದಿ ಸಂಘಟನೆಯನ್ನು ಬುಡಮೇಲು ಮಾಡಹೊರಟಾಗ ಲೋಹಿಯಾ ಮತ್ತು ಜಯಪ್ರಕಾಶರು ಪ್ರದರ್ಶಿಸಿದ ತಾತ್ವಿಕ ಎಚ್ಚರದ ಬಗೆಗಿನ ಅಧ್ಯಾಯಗಳ ನಿರೂಪಣೆ ಇರುವ ಈ ಕೃತಿ ತಾತ್ವಿಕ ವಿದ್ರೋಹಗಳ ವಿರುದ್ಧ ಮೊದಲ ಬಾರಿಗೆ ಎಚ್ಚರಿಕೆ ನೀಡುತ್ತದೆ. ೧೯೫೨ರ ಹೊತ್ತಿಗೆ ಕಾಂಗ್ರೆಸ್ ಪಕ್ಷದಿಂದ ಹೊರಬಂದು ಪ್ರತ್ಯೇಕ ರಾಜಕೀಯ ಪಕ್ಷವಾಗಿ ಸೈದ್ಧಾಂತಿಕ ಸ್ಪಷ್ಟತೆ ಪಡೆಯುವ ಸಮಾಜವಾದಿಗಳ ಆ ದಶಕಗಳ ತಳಮಳವನ್ನೂ ಕೃತಿ ದಾಖಲಿಸುತ್ತದೆ. ಪ್ರಬಲ ತಾತ್ವಿಕ ಶಕ್ತಿಯಾಗಿದ್ದ ಮಾರ್ಕ್ಸ್‌ವಾದ ಮತ್ತು ಬೃಹತ್ ಬಂಡವಾಳ ಆಧಾರಿತ ವಿಜ್ಞಾನ ಹಾಗೂ ತಂತ್ರಜ್ಞಾನ ಪ್ರಣೀತ ಆಧುನಿಕ ನಾಗರೀಕತೆ ಎಂಬ ಅವಳಿ ಆಕ್ರಮಣಗಳ ಎದುರು ಗಾಂಧಿ ರೂಪಿಸುತ್ತಿದ್ದ ಕಾಣ್ಕೆ ಮತ್ತು ಕ್ರಿಯೆ ಆಧಾರಿತ ಸ್ಥಳೀಯತೆಯ ರೂಹುಗಳ ಸೃಜನಶೀಲ ಸಂಶ್ಲೇಷಿಸಿ ಭಾರತೀಯ ದರ್ಶನವಾದ 'ಸಮಾಜವಾದ'ವನ್ನು ರೂಪಿಸುವ ಲೋಹಿಯಾ ಮತ್ತವರ ಸಂಗಡಿಗರು ಸಮಾಜವಾದಕ್ಕೆ ಕಾಲದ ವಿಮರ್ಶೆಯಿಂದ ವಿನಾಯಿತಿಯನ್ನೇನು ಬಯಸಲಾರರು.

ಇಲ್ಲಿನ ಕೆಲವು ಲೇಖನಗಳಲ್ಲಿ ಸಮಾಜವಾದಿ ತಾತ್ವಿಕತೆಯ ಅಪಗ್ರಹಿಕೆ, ಅಪವ್ಯಾಖ್ಯಾನಗಳು, ಹೈಜಾಕ್‌ಗಳು ಎದುರಾಗಲೆಲ್ಲ ಅಂತಹ ಆಕ್ರಮಣಗಳ ವಿರುದ್ಧ ವ್ಯಗ್ರತೆಯಿಂದ ಎರಗಿದಂತೆ ಕಂಡರೂ ನಾಗಭೂಷಣರ ಈ ಎಲ್ಲ ವ್ಯಗ್ರತೆಯು ಅಧ್ಯಯನ ಯೋಗ್ಯ ಜ್ಞಾನ ಶಿಸ್ತಾಗಿ, ಸೃಜನಶೀಲ ಬರಹಗಳಾಗಿ ರೂಪಾಂತರವಾಗಿರುವುದು ಇಲ್ಲಿನ ಸೋಜಿಗವಾಗಿದೆ.

ಉದಾಹರಣೆಗೆ: 'ದಾರಿತಪ್ಪಿದ ಸಮಾಜವಾದಿಗಳು' ಮತ್ತು 'ಸಮಾಜವಾದಕ್ಕೆ ಅಡ್ಡ ದಾರಿಗಳಿಲ್ಲ' ಎಂಬ ಬರಹಗಳಲ್ಲಿ ತಮ್ಮ ರಾಜಕೀಯ ಅಸ್ತಿತ್ವಕ್ಕಾಗಿ ಭಗತ್ ಸಿಂಗ್ ಅಥವಾ ಲೋಹಿಯಾ ಯಾರನ್ನಾದರೂ ಬಳಸಿಕೊಳ್ಳಲು ಹಿಂಜರಿಯದ ಸಂಘ ಪರಿವಾರ ಅಥವಾ ಮಾರ್ಕ್ಸ್‌ವಾದಿಗಳನ್ನು ತೀಕ್ಷ್ಣವಾಗಿ ವಿಮರ್ಶಿಸುವ ದಿಟ್ಟತನ ತೋರುತ್ತಲೇ ಈ ತಾತ್ವಿಕ ಆತ್ಮ ವಂಚನೆಯನ್ನು "ತತ್ವವನ್ನು ತಂತ್ರಗಾರಿಕೆಯ ಬಾಲಂಗೋಚಿಯಾಗಿ ಮಾಡಿಟ್ಟುಕೊಂಡು ರಾಜಕಾರಣ ಮಾಡಿದವರು" ಎಂದು ಬಯಲಿಗೆಳೆಯುತ್ತಾರೆ. ಕರ್ನಾಟಕದ ಸಮಾಜವಾದಿ ಪರಂಪರೆ ಕುರಿತ ರಹಮತ್ ತರೀಕೆರೆ ಅವರ ಬರಹದಲ್ಲಿನ ('ಕರ್ನಾಟಕದ ಲೋಹಿಯಾವಾದಿ ಸಾಂಸ್ಕೃತಿಕ ಪರಂಪರೆಯೂ, ರಹಮತ್ ತರೀಕೆರೆಯವರ ಮೆಳ್ಳೆಗಣ್ಣಿನ ನೋಟವೂ') ಹನ್ನೆರಡಕ್ಕೂ ಹೆಚ್ಚಿನ ಆಘಾತಕಾರಿ ಪ್ರಶ್ನೆಗಳಿಗೆ ಲೇಖಕರು ತೀಕ್ಷ್ಣವಾಗಿ ಮತ್ತು ಸವಿವರವಾಗಿ ಉತ್ತರಿಸುತ್ತಲೇ ಇದನ್ನೊಂದು ಚಾರಿತ್ರಿಕ ಬರಹವಾಗಿ ಕಡೆಯುತ್ತಾರೆ.

ಪಕ್ಷಕ್ಕೊಂದು ಕಟ್ಟಡ ಕಟ್ಟಿಕೊಳ್ಳಲಾಗದ, ಕೊನೆಗೂ ಅಲೆಮಾರಿ ಸ್ಥಿತಿಯಲ್ಲಿ ಉಳಿದ ಸಮಾಜವಾದಿಗಳ ಅರಾಜಕ ಮಾನೋಭಾವದತ್ತ ಗಮನ ಸೆಳೆದ ಹಾಗೂ "ಹಾಕಿಕೊಂಡವರ ತಲೆಯ ಆಕಾರ ಪಡೆಯುವ ಕಾಂಗ್ರೆಸ್ ಟೊಪ್ಪಿಗೆಯಂತೆ" ಎಂದು ಸಮಾಜವಾದಿ ರಾಜಕಾರಣವನ್ನು ಟೀಕಿಸುವ ಭಾರತದ ಸಮಾಜವಾದದ ಇತಿಹಾಸಕಾರ ಹ್ಯಾರಿಸ್ ವೊಫರ್ಡ್‌ರವರನ್ನು ಉಲ್ಲೇಖಿಸುವ ('ಸಮಾಜದವಾದಿ ಅಂದೋಲನದ ಪುನರುಜ್ಜೀವನ ಏಕೆ ಮತ್ತು ಹೇಗೆ?') ಲೇಖಕರು ಸಮಾಜವಾದಿ ಅಂದೋಲನದ ವೈಫಲ್ಯವನ್ನು ಗುರುತಿಸುವಲ್ಲಿ ಹಿಂದೆ ಬೀಳುವುದಿಲ್ಲ. 'ಗುದ್ದಲಿ, ಓಟು ಮತ್ತು ಜೈಲು' ಇವುಗಳಲ್ಲಿ 'ಗುದ್ದಲಿ' ಸಂಕೇತಿಸುವ ರಚನಾತ್ಮಕ ಕಾರ್ಯಗಳಲ್ಲಿ ಅಂದೋಲನ ಸಂಪೂರ್ಣ ನೆಲ ಕಚಿದ್ದನ್ನು ವಿಷಾದದಿಂದ ಗುರುತಿಸುತ್ತಾರೆ.

'ಮನುಷ್ಯ ಮೂಲತ: ಸಮಾಜಜೀವಿ' ಎನ್ನುವ ನಂಬಿಕೆಯನ್ನು ಆಧರಿಸಿದ ಸಿದ್ಧಾಂತವಾಗಿ ಸಮಾಜವಾದವನ್ನು ಗುರುತಿಸುವ ಲೇಖಕರು ಅದಕ್ಕೆ ವಿರುದ್ಧವಾಗಿ ಬಂಡವಾಳಶಾಹಿ ಎನ್ನುವುದು ಮನುಷ್ಯನ ವೈಯಕ್ತಿಕ ಸಾಹಸ, ಆಸೆ, ಸಫಲತೆ ಆಧಾರಿಸಿದ ಸಿದ್ಧಾಂತ. ಅದು ಮನುಷ್ಯ ಮೂಲತ: ಸಮಾಜ ಜೀವಿ ಎಂಬುದನ್ನು ಮರೆಯುತ್ತದೆ.' ಎಂದು ಒಳನೋಟದಿಂದ ಕೃತಿ ವಿವರಿಸುತ್ತದೆ.

ಇಲ್ಲಿರುವ ೧೨ ಬರಹಗಳು ನೇರವಾಗಿ ಗಾಂಧಿ ಕೇಂದ್ರಿತ ಚಿಂತನೆಗಳಾಗಿದ್ದು, ಈ ಬರಹಗಳ ಮುಖೇನ ಸಮಾಜವಾದಿ ತಾತ್ವಿಕತೆ ತನ್ನ ಅರಾಜಕ, ಅಲೆಮಾರಿ ರೂಕ್ಷತೆಯಿಂದಾಗಿ ಕಳೆದುಕೊಂಡುಬಿಟ್ಟಿರಬಹುದಾದ 'ದೇವರು' ಅಥವಾ 'ಆಧ್ಯಾತ್ಮ'ವನ್ನು ಸೇರಿಸಲೆಳಸುವುದು. ಸಮಾಜವಾದಿ ತಾತ್ವಿಕತೆಯ ಕುರಿತ ಲೇಖಕರ ಸ್ವಯಂಪೂರ್ಣತೆಯ ಆಕಾಂಕ್ಷೆಯನ್ನು ಬಿಂಬಿಸುತ್ತದೆ. ರಾಷ್ಟ್ರ ವಿಭಜನೆ ಕಾರಣಗಳಲ್ಲಿ ಗಾಂಧಿಯ ಅಹಿಂಸೆಯೂ ಒಂದು ಕಾರಣವೆಂದು ಟೀಕಿಸುವ ಗುರು ಲೋಹಿಯಾ ಅವರನ್ನೂ ಇದು 'ಹಿಂಸೆಯ ವಿರುದ್ಧ ಅಹಿಂಸೆ' ಎಂಬ ಸೀಮಿತ ದೃಷ್ಟಿಕೋನದ ಫಲ ಎಂದು ಟೀಕಿಸಲು ಹಿಂತೆಗೆಯದ ಲೇಖಕರ ಏಕಾಗ್ರತೆ ಮತ್ತು ಸೃಜನಶೀಲ ಶೋಧ ಈ ಕೃತಿಯ ಸಮಾಜವಾದದ ವಾರಿಧಿಯನ್ನು ಸಮರ್ಥವಾಗಿ ಈಜಿದೆ. ಒಟ್ಟಾಗಿ ಒಂದೇ ಮಾತಿನಲ್ಲಿ ಹೇಳುವುದಾದರೆ, ಇದೊಂದು ಭಾರತೀಯ ಸಮಾಜವಾದದ ಚರಿತ್ರೆಯನ್ನು ಅಪೂರ್ವ ಮತ್ತು ಸೃಜನಶೀಲ ಒಳನೋಟಗಳೊಂದಿಗೆ ಪ್ರಸ್ತುತಪಡಿಸುವ ಅಪರೂಪದ ಕೃತಿ.

**–ಕೆ.ಪಿ.ನಟರಾಜ**

**ಮೂರು ವರ್ಷಗಳನ್ನು ಪೂರೈಸುತ್ತಿರುವ**

**ಪತ್ರಿಕೆಗೆ**

**ಹಾರ್ದಿಕ ಶುಭಾಶಯಗಳು!**



**–ಕೋಣಂದೂರು ಲಿಂಗಪ್ಪ**

**ಮಾಜಿ ಶಾಸಕರು**

**ಶಿವಮೊಗ್ಗ**

‘ಬುದ್ಧಿ ಇರುವ ಪ್ರತಿಯೊಬ್ಬರಿಗೂ ಗೊತ್ತಿರುತ್ತದೆ, ತಾನು ಮಾಡಿದ ಕೆಟ್ಟ ಕೆಲಸದ ಪರಿಣಾಮ ಒಂದಲ್ಲ ಒಂದು ಸಮಯದಲ್ಲಿ ಮತ್ತು ಒಂದಲ್ಲ ಒಂದು ರೂಪದಲ್ಲಿ ಕಾಣಿಸಿಕೊಳ್ಳುತ್ತದೆಂದು. ಏಕೆಂದರೆ ಅನ್ಯ ಎಂಬುದು ನಿಜವಾಗಿ ಇಲ್ಲ. ಇತರರನ್ನು ನೀವು ನೋಡುತ್ತಿರುವಾಗ ನಿಮ್ಮನ್ನೇ ನೀವು ನೋಡಿಕೊಳ್ಳುತ್ತಿರುವಿರಿ. ಏಕೆಂದರೆ ಎಲ್ಲರೂ, ಎಲ್ಲವೂ ಸ್ಥಿತವಾಗಿರುವುದು ಒಂದೇ, ಏಕೈಕವಾದ ಆತ್ಮದಲ್ಲಿ. ಹಾಗಾಗಿ ಇತರರಿಗೆ ಕೆಟ್ಟದು ಮಾಡುವುದೆಂದರೆ ಅಂತಿಮವಾಗಿ ನಿಮಗೇ ನೀವೇ ಕೆಟ್ಟದು ಮಾಡಿಕೊಳ್ಳುವುದು. ಇದೇ ಕರ್ಮ ರಹಸ್ಯ’

**–ರಮಣ ಮಹರ್ಷಿ**



**ಮೂರು ವರ್ಷಗಳನ್ನು ಪೂರೈಸುತ್ತಿರುವ**
**‘ಹೊಸ ಮನುಷ್ಯ’ ಕ್ಕೆ**
**ಹೃತ್ಪೂರ್ವಕ ಶುಭಾಶಯಗಳು!**

**–ಓರ್ವ ರಮಣ ಭಕ್ತೆ**
**ಮೈಸೂರು**

**ತಿಂಗಳ ಸಾಲುಗಳು...**



ಸಂಘಟಿತ ಬಹುಮತ ಸತ್ಯ ಮತ್ತು ಸ್ವಾತಂತ್ರ್ಯಗಳಿಗೆ ಎಂದೂ ಅಪಾಯಕಾರಿಯೇ.

**-ರೂಸೋ(ಫ್ರೆಂಚ್ ಕ್ರಾಂತಿಯ ರೂವಾರಿ)**

**ಪತ್ರಿಕೆಗೆ ಶುಭ ಕೋರುತ್ತಾ...**

**ಬಿ.ಸುರೇಶ**

**ಡಾ. ವಿಜಯಾ**

HOSA MANUSHYA, a kannada monthly solely owned, edited, published and printed by D. S. Nagabhushana, at HIG-5, Kallahally Extn.,Vinoba Nagara, SHIVAMOGGA-577204. Printed at Ila Mudrana, Bengaluru-560 026 Ph.: 080-26757159

**Regd. News Paper** RNI No. KARKAN/2012/47568
Rgd No. KA/SK/SMG-1209/2013-15

ಇವರಿಗೆ \ To

If undelivered, please return to D.S. Nagabhushana, Editor, ‘Hosa Manushya’, ’HIG-5, ‘Nudi’, Kallahalli Extension, Vinoba Nagara, Shivamogga -577204 (Karnataka)